ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

2026ನೇ ಸಾಲಿನ 4ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ದಿನಾಂಕ:31.08.2026

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ದೂರವಾಣಿ ಸಂಖ್ಯೆ :08192–208029 ಇ–ಮೇಲ್:registrar@davangereuniversity.ac.in

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/161/2026–27/2841 ದಿನಾಂಕ:18.09.2026

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:31.08.2026 ರಂದು ಜರುಗಿದ 4ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:31.08.2026 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ 4ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಪ್ರಾಧಿಕಾರ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಹಣಕಾಸು/ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:31.08.2026 ರಂದು ಜರುಗಿದ 4ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1. ಡಾ. ಬಿ.ಇ. ರಂಗಸ್ವಾಮಿ., ಮಾನ್ಯ ಕುಲಪತಿಗಳು	: ಅಧ್ಯಕ್ಷರು
2. ಡಾ. ಕೇಶವ ಹೆಚ್., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ	: ಸದಸ್ಯರು
3. ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ	: ಸದಸ್ಯರು
4. ಡಾ. ಬಿ. ಎನ್. ಉಮೇಶ್ ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು	: ಸದಸ್ಯರು
5. ಶ್ರೀಮತಿ ಚಂದನ ಎನ್. ಸ್ವಾಮಿ, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು	: ಸದಸ್ಯರು
6. ಶ್ರೀ ಭರಮಗೌಡ ಪಾಟೀಲ., ಪ್ರಾಚಾರ್ಯರು	: ಸದಸ್ಯರು
7. ಡಾ. ಜೋಮನ್ ಕೆ.ಜಿ. ಪ್ರಾಚಾರ್ಯರು	: ಸದಸ್ಯರು
8. ಶ್ರೀ ತಿಪ್ಪೇಶ್ ಜಿ.ಆರ್., ಪ್ರಾಚಾರ್ಯರು	: ಸದಸ್ಯರು
9. ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು	: ಸದಸ್ಯರು
10. ಶ್ರೀ ತಿಪ್ಪೇಸ್ವಾಮಿ ಹೆಚ್., ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು	: ಸದಸ್ಯರು
11. ಡಾ. ಜಿ.ಕೆ. ಪ್ರೇಮ., ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು	: ಸದಸ್ಯರು
12. ಶ್ರೀ. ಶಬೀರ್ ಅಲಿಖಾನ್., ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು	: ಸದಸ್ಯರು
13. ಶ್ರೀ ಪ್ರಶಾಂತ್ ಆರ್.ಟಿ., ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು	: ಸದಸ್ಯರು
14. ಡಾ. ಪ್ರಶಾಂತ ಎನ್. ಸಿ., ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು	: ಸದಸ್ಯರು
15. ಪ್ರೊ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ)	: ಸದಸ್ಯರು
16. ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಸೂಪರ್ ಟೈಂ ಸ್ಕೇಲ್) ಕುಲಸಚಿವರು (ಆಡಳಿತ)	: ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 16 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು – ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರಿಂದ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಗೆ ನೇಮಕವಾಗಿರುವ **ಡಾ. ಬಿ.ಇ. ರಂಗಸ್ವಾಮಿ., ಮಾನ್ಯ ಕುಲಪತಿಗಳು** ಇವರಿಗೆ ಸಭೆಯ ಎಲ್ಲಾ ಸದಸ್ಯರುಗಳ ಪರವಾಗಿ ಅಭಿನಂದಿಸಿ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಗೌರವಾನ್ವಿತ ರಾಜ್ಯಪಾಲರಿಂದ ಸಿಂಡಿಕೇಟಿನ ಸದಸ್ಯರಾಗಿ ನಾಮನಿರ್ದೇಶನ ಹೊಂದಿರುವ **ಶ್ರೀಮತಿ ಚಂದನ ಎನ್. ಸ್ವಾಮಿ,** ಇವರಿಗೂ ಕೂಡ ಅಭಿನಂದಿಸಿ ಸಭೆಗೆ ಸ್ವಾಗತ ಕೋರಿದರು. ನೂತನ ಕುಲಪತಿಯಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾನ್ಯ ಕುಲಪತಿಗಳು ಸಭೆಯಲ್ಲಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತ ಕೋರುತ್ತಾ, ತಮ್ಮ ಸ್ವ–ಪರಿಚಯ ಮಾಡಿಕೊಂಡರು. ನಂತರ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಪ್ರಗತಿಯಲ್ಲಿರುವ ಕೆಲಸಗಳು ಮತ್ತು ವಿಷಯಗಳ ಕುರಿತು ಸಭೆಯ ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯದಲ್ಲಿ 2026–27ನೇ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಹೆಚ್ಚಿಸುವ ಹಿನ್ನೆಲೆಯಲ್ಲಿ 'ಆಕಾಶವಾಣಿ ಫೋನ್ ಇನ್ ಕಾರ್ಯಕ್ರಮ'ದಲ್ಲಿ ಭಾಗವಹಿಸಿ ಪ್ರಚಾರಕ್ಕೆ ಒತ್ತು ನೀಡಲಾಯಿತು. ಸದರಿ ವಿಷಯದ ಕುರಿತು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ವಿವಿಧ ನಿಕಾಯಗಳ ಡೀನರುಗಳು ಹಾಗೂ ದೃಶ್ಯಕಲಾ ಮಹಾವಿದ್ಯಾಲಯದ ಪ್ರಾಂಶುಪಾಲರನ್ನೊಳಗೊಂಡಂತೆ ವಿವಿಧ ಮಾಧ್ಯಮ ಪ್ರತಿನಿಧಿಗಳ ಜೊತೆಗೆ 'ಪತ್ರಿಕಾಗೋಷ್ಠಿ' ನೆಡಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ಆವರದ ಪುರುಷ ಮತ್ತು ಮಹಿಳಾ ವಸತಿ ನಿಲಯಗಳ ದುರಸ್ಥಿ ಹಾಗೂ ನವೀಕರಣಕ್ಕೆ ಅನುದಾನ ನೀಡುವಂತೆ ಕೋರಲಾಗಿದೆ. ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಜನಪ್ರತಿನಿಧಿಗಳನ್ನು (ವಿವಿಧ ಕ್ಷೇತ್ರದ ಎಂ.ಎಲ್.ಎ/ ಎಂ.ಎಲ್.ಸಿ) ಭೇಟಿ ಮಾಡಿ ವಿಶ್ವವಿದ್ಯಾನಿಲಯ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ, ಚಿತ್ರದುರ್ಗ ಹಾಗೂ ಘಟಕ ಕಾಲೇಜುಗಳ ಮೂಲ ಸೌಕರ್ಯಗಳ ಅಭಿವೃದ್ಧಿ/ ಅನುದಾನಗಳ ಬಗ್ಗೆ ಚರ್ಚಿಸಲಾಗಿರುತ್ತದೆ. ವಿಶೇಷವಾಗಿ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣಕ್ಕೆ ಕಾಂಪೌಂಡ್, ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳಡಿ ನೀರಿನ ವ್ಯವಸ್ಥೆ ಕಲ್ಪಿಸಲು, ಸಮಾಜ ಕಲ್ಯಾಣ ಮತ್ತು ಹಿಂದುಳಿದ ಇಲಾಖೆಯ ವತಿಯಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿದ್ಯಾರ್ಥಿ/ನಿ ವಸತಿ ನಿಲಯ ನಿರ್ಮಾಣ ಮಂಜೂರಾತಿ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯಿಂದ ಚರಂಡಿ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಮನವಿ ಸಲ್ಲಿಸುವುದರ ಬಗ್ಗೆ ಚರ್ಚಿಸಲಾಗಿರುತ್ತದೆ.

ಕುಲಸಚಿವರು

ಕುಲಪತಿಗಳು

ವಿಶ್ವವಿದ್ಯಾನಿಲಯದ ವಿಜ್ಞಾನ ನಿಕಾಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಳ ಪ್ರಯೋಗಾಲಯಗಳ ಸಲಕರಣೆಗಳನ್ನು ಪ್ರಸ್ತುತ ಸಂಶೋಧನೆ ಹಾಗೂ ಶೈಕ್ಷಣಿಕ ಪಠ್ಯಕ್ರಮಕ್ಕನುಗುಣವಾಗಿ ಆಧುನಿಕರಣದೊಂದಿಗೆ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಹೊಸ ಕೋರ್ಸ್ ಪದವಿಗಳನ್ನು ಪ್ರಾರಂಭಿಸಲು ಎ.ಐ.ಸಿ.ಟಿ.ಇ/ಯು.ಜಿ.ಸಿ ಸಂಸ್ಥೆಯ ವಿವಿಧ ಹಂತದ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಯಲ್ಲಿರುವ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ, ಹಿಂದುಳಿದ ಹಾಗೂ ಮಹಿಳಾ ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಗುಣಮಟ್ಟದ ಉನ್ನತ ಶಿಕ್ಷಣದ ಅವಕಾಶ ಕಲ್ಪಿಸುವುದರ ಜೊತೆಗೆ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ, ಔದ್ಯೋಗಿಕರಣಕ್ಕೆ ವಿವಿಧ ಯೋಜನೆಗಳನ್ನು ರೂಪಿಸಿ ರಾಜ್ಯ/ಕೇಂದ್ರ ಸರ್ಕಾರ, ವಿವಿಧ ಸಂಶೋಧನಾ ಸಂಸ್ಥೆಗಳು, ಬಹುರಾಷ್ಟ್ರೀಯ ಕಾರ್ಪೊರೇಟ್ ಕಂಪನಿಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಮುಂದಿನ ಕಾರ್ಯವಿಧಾನವನ್ನು ರೂಪಿಸಲಾಗುವುದೆಂದು ಸಭೆಗೆ ತಿಳಿಸಿದರು.

ತದನಂತರ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಪ್ರಾಚಾರ್ಯರ ಜೇಷ್ಠತೆಯನುಸಾರ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿದ್ದ **ಡಾ. ಎ.ಜೆ. ನೀತಾ, ಪ್ರಾಚಾರ್ಯರು, ಬಾಪೂಜಿ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ** – ಇವರು ಡಾ. ಬಿ.ಇ. ರಂಗಸ್ವಾಮಿ., ಮಾನ್ಯ ಕುಲಪತಿಗಳು ಇವರ ಪತ್ನಿಯಾಗಿರುವುದರಿಂದ "ವಿಶ್ವವಿದ್ಯಾನಿಲಯದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವ ಪ್ರಾಧಿಕಾರವಾದ ಸಿಂಡಿಕೇಟಿನಲ್ಲಿ ನನ್ನ ಸದಸ್ಯತ್ವದಿಂದ ಯಾವುದೇ ರೀತಿಯ ಹಿತಾಸಕ್ತಿ ಸಂಘರ್ಷ (Conflict of Interest) ಉಂಟಾಗುವುದನ್ನು ತಪ್ಪಿಸಬೇಕೆಂದು ಹಾಗೂ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಪಾರದರ್ಶಕತೆ, ನಿಷ್ಪಕ್ಷಪಾತತೆ ಹಾಗೂ ಉನ್ನತ ನೈತಿಕ ಮೌಲ್ಯಗಳನ್ನು ಕಾಪಾಡುವ ಸದುದ್ದೇಶದಿಂದ ಸಿಂಡಿಕೇಟಿನ ಸದಸ್ಯತ್ವಕ್ಕೆ ಸ್ವಪ್ರೇರಣೆಯಿಂದ ರಾಜಿನಾಮೆ ಪತ್ರ ಸಲ್ಲಿಸಿರುವುದನ್ನು" ಸಭೆಯ ಅವಗಾಹನೆಗೆ ತರಲಾಯಿತು. ಇದಕ್ಕೆ ಸಭೆಯಲ್ಲಿದ್ದ ಎಲ್ಲಾ ಸದಸ್ಯರುಗಳು ಸದರಿಯವರು ತೆಗೆದುಕೊಂಡ ನಿರ್ಧಾರಕ್ಕೆ ಸ್ವಾಗತಿಸಿ ಅಭಿನಂದನೆ ಸಲ್ಲಿಸಿದರು.

ನಂತರ ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಪ್ರಾಧಿಕಾರಗಳ ವಿಭಾಗ – 1	
ವಿಷಯ ಸಂಖ್ಯೆ:	ಸಿಂ.01(a)/(08/26)

–:ಟಿಪ್ಪಣಿ:–

ವಿಷಯಃ ದಿನಾಂಕ: 08.05.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.

*****

ದಿನಾಂಕ:08.05.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:18.05.2026 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು.

ಆದರೆ, ಸದರಿ ನಡಾವಳಿಗಳ ವಿಷಯ ಸಂಖ್ಯೆ:**5**–ಸಿಂ.02(c)/(05-26), ಹಾಗೂ **53**–ಸಿಂ.02(p)/(05-26) ರ ವಿಷಯಗಳ ಕುರಿತು ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ಆಕ್ಷೇಪಣೆಗಳ ಕುರಿತು ಚರ್ಚಿಸಲು ಹಾಗೂ ಇನ್ನುಳಿದ ಸಭಾ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ08.05.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಕುರಿತು ಚರ್ಚಿಸಿ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ – 2	
ವಿಷಯ ಸಂಖ್ಯೆ:	ಸಿ.01(b)/(08/26)

–ಃಟಿಪ್ಪಣಿಃ–

ವಿಷಯಃ **ದಿನಾಂಕ:08.05.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯ (Action Taken Report) ದೃಢೀಕರಣ ಕುರಿತು.**

*****

ದಿನಾಂಕ:08.05.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಸಿದ್ಧಪಡಿಸಲಾಗಿದ್ದು, ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕಃ 08.05.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಕುರಿತು ಚರ್ಚಿಸಿ ಅನುಪಾಲನಾ ವರದಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ – 3	
ವಿಷಯ ಸಂಖ್ಯೆ:	ಸಿಂ.01(c)/(08/26)

–ಃಟಿಪ್ಪಣಿಃ–

ವಿಷಯಃ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯಕ್ಕೆ ಪ್ರೊ. ವೆಂಕಟೇಶ್ ಕೆ., ಪ್ರಾಧ್ಯಾಪಕರು – ಇವರನ್ನು ಶಿಕ್ಷಣ ನಿಕಾಯದ ಡೀನರನ್ನಾಗಿ ನಾಮನಿರ್ದೇಶನ ಮಾಡಿ ಮುಂದುವರೆಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಸೆಕ್ಷನ್ 21 (1) ರನ್ವಯ, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಗಳಲ್ಲಿನ ಪ್ರಾಧ್ಯಾಪಕರುಗಳ ಜೇಷ್ಠತೆಯನುಸಾರ ಡಾ. ವೆಂಕಟೇಶ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರನ್ನು ಶಿಕ್ಷಣ ನಿಕಾಯದ ಡೀನರನ್ನಾಗಿ ದಿನಾಂಕ:08.07.2024 ರಿಂದ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲಾಗಿತ್ತು. ಅದರಂತೆ ಸದರಿಯವರ ಡೀನರ ಅವಧಿಯು ದಿನಾಂಕ:07.07.2026 ರಂದು ಮುಕ್ತಾಯಗೊಂಡಿರುವುದರಿಂದ ಸದರಿಯವರನ್ನು ಶಿಕ್ಷಣ ನಿಕಾಯದ ಡೀನರ ನಾಮನಿರ್ದೇಶನದಿಂದ ಪದಮುಕ್ತಗೊಳಿಸಲಾಗಿದೆ.

ಮುಂದುವರೆದು, ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದಲ್ಲಿ ಪ್ರಾಧ್ಯಾಪಕರುಗಳ ಜೇಷ್ಠತೆನುಸಾರ (ಡಾ. ವೆಂಕಟೇಶ್, ಪ್ರಾಧ್ಯಾಪಕರು ಇವರನ್ನು ಹೊರತುಪಡಿಸಿ) ಪ್ರಾಧ್ಯಾಪಕರು/ ಸಹ ಪ್ರಾಧ್ಯಾಪಕರು ಇಲ್ಲದೇ ಇರುವುದರಿಂದ ಹಿರಿಯ ಹಾಗೂ ಅನುಭವಿಗಳಾದ ಡಾ. ವೆಂಕಟೇಶ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ – ಇವರನ್ನು ದಿನಾಂಕ:08.07.2026 ರಿಂದ 2 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಶಿಕ್ಷಣ ನಿಕಾಯದ ಡೀನರನ್ನಾಗಿ ಮರು ನಾಮನಿರ್ದೇಶಿಸಿರುವುದಕ್ಕೆ ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲಾಗಿದೆ. ಈ ಕುರಿತು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಸೆಕ್ಷನ್ 21 (1) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಗಳಲ್ಲಿನ ಪ್ರಾಧ್ಯಾಪಕರುಗಳ ಜೇಷ್ಠತೆಯನುಸಾರ ಪ್ರೊ. ವೆಂಕಟೇಶ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರನ್ನು ಶಿಕ್ಷಣ ನಿಕಾಯದ ಡೀನರನ್ನಾಗಿ ದಿನಾಂಕ:08.07.2026 ರಿಂದ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ – 4	
ವಿಷಯ ಸಂಖ್ಯೆ:	ಸಿಂ.01(d)/(08/26)

–ಃಟಿಪ್ಪಣಿಃ–

ವಿಷಯಃ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆಗೆ ಪ್ರೊ. ಲೋಕೇಶ್ ಎಂ.ಯು., ಪ್ರಾಧ್ಯಾಪಕರು ಹಾಗೂ ಡೀನರು, ಕಲಾ ನಿಕಾಯ – ಇವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

*****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 32 (1) (vi) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ – **ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ** – ಇವರನ್ನು ದಿನಾಂಕ:05.08.2026 ರಿಂದ ಅನ್ವಯವಾಗುವಂತೆ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ಇರುವವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶಿಸಿರುವುದಕ್ಕೆ ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲಾಗಿದೆ. ಈ ಕುರಿತು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 32 (1) (vi) ರನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ವತಿಯಿಂದ – ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ ಹಾಗೂ ವಿದ್ಯಾವಿಷಯಕ ಪರಿಷತ್ ಸದಸ್ಯರು – ಇವರನ್ನು ದಿನಾಂಕ:05.08.2026 ರಿಂದ ಅನ್ವಯವಾಗುವಂತೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 5	
ವಿಷಯ ಸಂಖ್ಯೆ:	ಸಿಂ.02(a)/(08/26)

–ಃಟಿಪ್ಪಣಿಃ–

ವಿಷಯಃ **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯ ನೇಮಕಾತಿಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖಃ ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/540/2026–27/1769, ದಿನಾಂಕಃ 10.07.2026

*****

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ವೀರೇಶ್ ಎಸ್.ಜೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ದಿನಾಂಕಃ 06.07.2026ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ತತ್ಸಂಬಂಧ ಡಾ. ವೀರೇಶ್ ಎಸ್.ಜೆ – ಇವರನ್ನು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ನೇಮಕಾತಿ ಮಾಡಿರುವುದಕ್ಕೆ ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಡಾ. ವೀರೇಶ್ ಎಸ್. ಜೆ., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರನ್ನು ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯನ್ನಾಗಿ ದಿನಾಂಕ:06.07.2026 ರಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 6	
ವಿಷಯ ಸಂಖ್ಯೆ:	ಸಿಂ.02(b)/(08/26)

–ಃಟಿಪ್ಪಣಿಃ–

ವಿಷಯಃ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯ ನೇಮಕಾತಿಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

ಉಲ್ಲೇಖಃ ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/02/2026–27/ 1710, ದಿನಾಂಕಃ 07.07.2026

*****

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಡಾ. ಜ್ಯೋತಿ ಕೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ – ಇವರನ್ನು ಸದರಿ ವಿಭಾಗದ ಸಂಯೋಜನಾಧಿಕಾರಿಯಾಗಿ ದಿನಾಂಕಃ01.07.2026ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದೆ.

ತತ್ಸಂಬಂಧ ಡಾ. ಜ್ಯೋತಿ ಕೆ – ಇವರನ್ನು ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯಾಗಿ ನೇಮಕಾತಿ ಮಾಡಿರುವುದಕ್ಕೆ ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಡಾ. ಜ್ಯೋತಿ ಕೆ., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರನ್ನು ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಸಂಯೋಜನಾಧಿಕಾರಿಯನ್ನಾಗಿ ದಿನಾಂಕ:01.07.2026 ರಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಕಾತಿ ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 7	
ವಿಷಯ ಸಂಖ್ಯೆ:	ಸಿಂ.02(c)/(08/26)

–:ಟಿಪ್ಪಣಿ:–

ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

*****

ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಈ ಕೆಳಕಂಡ ವಿಭಾಗಗಳ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಎರಡು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವುದರಿಂದ ಸದರಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳ ಜೇಷ್ಠತೆಯ ಮೇರೆಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ನೇಮಕ ಮಾಡುವ ಸಂಬಂಧ ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

ಕ್ರ ಸಂ.	ಹೆಸರು/ಹುದ್ದೆ	ವಿಭಾಗ	ಅಧ್ಯಕ್ಷರು/ ಸಂಯೋಜನಾಧಿಕಾರಿಗಳು	ಅವಧಿ
01	ಡಾ. ಫಕ್ಕಿರೇಶ ಹಳ್ಳಳ್ಳಿ, ಸಹಾಯಕ ಪ್ರಾಧ್ಯಾಪಕರು, ಇಂಗ್ಲೀಷ್	ಇಂಗ್ಲೀಷ್	ಸಂಯೋಜನಾಧಿಕಾರಿ	26.08.2024 ರಿಂದ 25.08.2026
02	ಡಾ. ಅಶೋಕ್ ಕುಮಾರ್ ವಿ. ಪಾಳೇದ್, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ	ರಾಜ್ಯಶಾಸ್ತ್ರ	ಅಧ್ಯಕ್ಷರು	26.08.2024 ರಿಂದ 25.08.2026
03	ಡಾ. ಆಸಿಫುಲ್ಲಾ ಎ, ಸಹಾಯಕ ಪ್ರಾಧ್ಯಾಪಕರು, ಎಂ.ಬಿ.ಎ.	ಉರ್ದು	ಸಂಯೋಜನಾಧಿಕಾರಿ	26.08.2024 ರಿಂದ 25.08.2026

:: ನಿರ್ಣಯ ::

ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರು/ ಸಂಯೋಜನಾಧಿಕಾರಿಗಳನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ನೇಮಕ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕ್ರ ಸಂ.	ಹೆಸರು	ವಿಭಾಗ	ಅಧ್ಯಕ್ಷರು/ ಸಂಯೋಜನಾಧಿಕಾರಿಗಳು	ಅವಧಿ
1	ಡಾ. ಯಜ್ಞಶ್ರೀ ಎಸ್., ಸಹಾಯಕ ಪ್ರಾಧ್ಯಾಪಕರು	ಇಂಗ್ಲೀಷ್	ಸಂಯೋಜನಾಧಿಕಾರಿ	ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ.
2	ಪ್ರೊ. ಅಶೋಕ್‌ಕುಮಾರ್ ವೀ. ಪಾಳೇದ ಪ್ರಾಧ್ಯಾಪಕರು	ರಾಜ್ಯಶಾಸ್ತ್ರ	ಅಧ್ಯಕ್ಷರು	
3	ಡಾ. ಆಸಿಫುಲ್ಲಾ ಎ., ಸಹಾಯಕ ಪ್ರಾಧ್ಯಾಪಕರು (ಎಂ.ಬಿ.ಎ.)	ಉರ್ದು	ಸಂಯೋಜನಾಧಿಕಾರಿ	

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 8	
ವಿಷಯ ಸಂಖ್ಯೆ:	ಸಿಂ.02(d)/(08/26)

–: ಟಿಪ್ಪಣಿ :–

ವಿಷಯಃ ಹೊರಗುತ್ತಿಗೆ ನೌಕರರಿಗೆ ಪರಿಷ್ಕೃತ ಕನಿಷ್ಟ ವೇತನವನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಾಇ411 ಎಲ್.ಡಬ್ಲ್ಯು.ಎ 2023. ಬೆಂಗಳೂರು. ದಿನಾಂಕ:22.05.2026

2. ಸಿ ಮತ್ತು ಡಿ ಹೊರಗುತ್ತಿಗೆ ನೌಕರರ ಸಂಘ(ರಿ) ಇವರ ಮನವಿ ಪತ್ರ ಸಂಖ್ಯೆ: ದಾವಿವಿಸಿ&ಡಿ ಗ್ರೂಹೊನೌಸ:2026–27/02 ದಿನಾಂಕ:25.05.2026

3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ03.06.2026

****

ಉಲ್ಲೇಖ (1)ರ ಸರ್ಕಾರದ ಅಧಿಸೂಚನೆಯಲ್ಲಿ ಹೊರಡಿಸಿದ ಅನುಸೂಚಿ–1 ಕ್ರ.ಸಂಖ್ಯೆ 50 ರಲ್ಲಿ ಭದ್ರತಾ ಏಜೆನ್ಸಿಗಳಲ್ಲಿ (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ) ಕರ್ತವ್ಯ ನಿರ್ವಹಿಸುತ್ತಿರುವ ಇವರಿಗೆ ಅನುಸೂಚಿ – 01, ಅನುಸೂಚಿ – 04ರಲ್ಲಿ, ವಲಯ 02, 03 ರಲ್ಲಿ ತಿಳಿಸಿರುವಂತೆ ಅನುಸೂಚಿ – 05, ಅನುಸೂಚಿ ಉದ್ದಿಮೆಗಳ ಕೆಲಸದ ವರ್ಗೀಕರಣದಂತೆ, ಅತಿ ಕುಶಲ, ಕುಶಲ, ಅರೆ ಕುಶಲ, ಅಕುಶಲಗಳಲ್ಲಿ ವಿವರಿಸಿದಂತೆ, ವರ್ಗಗಳಿಗೆ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ನಿಗದಿ ಪಡಿಸಿರುತ್ತಾರೆ.

ಮುಂದುವರೆದು, ಉಲ್ಲೇಖ (2)ರಲ್ಲಿ ಸಿ & ಡಿ ಗ್ರೂಪ್ ಹೊರಗುತ್ತಿಗೆ ನೌಕರರ ಸಂಘ (ರಿ.) ಇವರು ಈಗಾಗಲೇ ದಿನ ನಿತ್ಯ ಜೀವನ ನಿರ್ವಹಣೆಗೆ ಬೇಕಾದ ಅಗತ್ಯ ವಸ್ತುಗಳ ಬೆಲೆಗಳು ಹೆಚ್ಚಳವಾಗಿರುವುದರಿಂದ ನೌಕರರ ಜೀವನ ನಡೆಸಲು ಕಷ್ಟವಾಗುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ ಕಾರ್ಮಿಕ ಇಲಾಖೆ, ಅಧಿಸೂಚನೆಯನ್ನು ಹೊರಡಿಸಿರುವುದರಿಂದ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ಜ್ಞಾನಗಂಗೋತ್ರಿ, ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯ ಪ್ರಕಾರ ಪರಿಷ್ಕೃತ ಕನಿಷ್ಠ ವೇತನವನ್ನು ಕಾರ್ಮಿಕ ಇಲಾಖೆಯು ಹೊರಡಿಸಿರುವ ಅಧಿಸೂಚನೆಯ ದಿನಾಂಕದಿಂದ ನೀಡುವಂತೆ ಕೋರಿರುತ್ತಾರೆ. ಈ ಕುರಿತು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 'ಸಿ' & 'ಡಿ' ಗ್ರೂಪ್ ಹೊರಗುತ್ತಿಗೆ ನೌಕರರಿಗೆ – ಸರ್ಕಾರದ ಕಾರ್ಮಿಕ ಇಲಾಖೆಯ ಆದೇಶದನ್ವಯ ಪರಿಷ್ಕೃತ ವೇತನ ಪಾವತಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರಿಸಿ, ಸರ್ಕಾರದ ಆದೇಶದಂತೆ ಮುಂದಿನ ಕ್ರಮವಹಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 9	
ವಿಷಯ ಸಂಖ್ಯೆ:	ಸಿಂ.02(e)/(08/26)

–: ಟಿಪ್ಪಣಿ :–

ವಿಷಯಃ ರಾಜ್ಯ ಸರ್ಕಾರಿ ನೌಕರರ ಅವಲಂಬಿತ ವಿಶೇಷಚೇತನ ಮಕ್ಕಳಿಗೆ ನೀಡಲಾಗುವ ಶೈಕ್ಷಣಿಕ ಭತ್ಯೆಯನ್ನು ನೀಡುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆಃ ಎಫ್‌ಡಿ 24 ಎಸ್‌ಆರ್‌ಪಿ 2018 (IX) ಬೆಂಗಳೂರು, ದಿನಾಂಕಃ11.01.2019

2. ಪ್ರೊ. ಸತ್ಯನಾರಾಯಣ, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿವಿ/ ವಾಣಿಜ್ಯ/2025–26/155, ದಿನಾಂಕಃ10.10.2025

3. ವಿ.ವಿ. ಆದೇಶ ಸಂಖ್ಯೆಃದಾವಿವಿ/ಮಾಸನಿ/139/2026–27/2147, ದಿನಾಂಕಃ06.08.2026

****

ಸರ್ಕಾರದ ಉಲ್ಲೇಖ (1)ರ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರ ವಿಶೇಷ ಚೇತನ ಮಕ್ಕಳಿಗೆ, ಗರಿಷ್ಠ 02 ಮಕ್ಕಳ ಮಿತಿಗೊಳಪಟ್ಟು ಪ್ರತಿ ಮಗುವಿಗೆ 1ನೇ ಜನವರಿ 2019ರಿಂದ ಜಾರಿಗೆ ಬರುವಂತೆ ಮಾಸಿಕ ರೂ.1,000/– ಗಳ ಶೈಕ್ಷಣಿಕ ಭತ್ಯೆಯನ್ನು ಹದಿನೆಂಟು ವರ್ಷಗಳ ವಯೋಮಿತಿಯನ್ನು ಪೂರ್ಣಗೊಳಿಸುವ ಅಥವಾ 12ನೇ ತರಗತಿ ವ್ಯಾಸಂಗ ಪೂರ್ಣಗೊಳಿಸುವವರೆಗೆ ಮಂಜೂರು ಮಾಡಿರುತ್ತಾರೆ. ಸದರಿ ಸರ್ಕಾರದ ಆದೇಶದಂತೆ ಪ್ರೊ. ಸತ್ಯನಾರಾಯಣ, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರು ತಮ್ಮ ಮಗಳಾದ ಕು. ಧನ್ಯ ಎಸ್. ಯಾದವ್ ಇವರು Autism Spectrum Disorder ಎಂಬ ಅಂಗವಿಕಲತೆಯನ್ನು ಹೊಂದಿರುವುದರಿಂದ ಪ್ರತಿ ಮಾಹೆಯಾನ ರೂ.2,000/–ಗಳ ಶೈಕ್ಷಣಿಕ ಭತ್ಯೆಯನ್ನು ಮಂಜೂರು ಮಾಡುವಂತೆ ಉಲ್ಲೇಖ (2)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಸರ್ಕಾರದ ಆದೇಶದಂತೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪ್ರೊ. ಸತ್ಯನಾರಾಯಣ, ಪ್ರಾಧ್ಯಾಪಕರು ಇವರಿಗೆ ಆಗಸ್ಟ್ 2026ರ ಮಾಹೆಯಿಂದ ಶೈಕ್ಷಣಿಕ ಭತ್ಯೆ ರೂ.1,000/–ಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ ಪಾವತಿಸಲು ಉಲ್ಲೇಖ (3)ರಲ್ಲಿ ಆದೇಶಿಸಲಾಗಿದೆ. ತತ್ಸಂಬಂಧ ಸದರಿ ಆದೇಶವನ್ನು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಪ್ರೊ. ಸತ್ಯನಾರಾಯಣ, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ತಮ್ಮ ಮಗಳಾದ ಕು. ಧನ್ಯ ಎಸ್. ಯಾದವ್ ಇವರು 'Autism Spectrum Disorder' ಎಂಬ ಅಂಗವಿಕಲತೆಯನ್ನು ಹೊಂದಿರುವುದರಿಂದ ಕರ್ನಾಟಕ ಸರ್ಕಾರದ ಆದೇಶದಂತೆ – ಪ್ರತಿ ಮಾಹೆಯಾನ ರೂ1,000/–ಗಳ ಶೈಕ್ಷಣಿಕ ಭತ್ಯೆಯನ್ನು ಮಂಜೂರು ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 10	
ವಿಷಯ ಸಂಖ್ಯೆ:	ಸಿ೦.02(f)/(08/26)

–: ಟಿಪ್ಪಣಿ :–

ವಿಷಯಃ **ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಇವರು – Malaysia ದಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡಿರುವ ಕುರಿತು.**

ಉಲ್ಲೇಖ: ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು ಇವರ ಮನವಿ ದಿನಾಂಕಃ29.07.2026
ವಿ.ವಿ. ಕಛೇರಿ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/431/ 2026–27/2321 ದಿನಾಂಕ:1308.2026

****

ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ01.09.2026 ರಿಂದ 02.09.2026ರವರೆಗೆ University of Malaysia Perlis (UniMAP) ಇವರು ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಭಾಷಣಗಾರರಾಗಿ ಆಹ್ವಾನಿಸಿರುವ ಹಿನ್ನೆಲೆಯಲ್ಲಿ ದಿನಾಂಕಃ29.08.2026 ರಿಂದ 08.09.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಹೋಗಿ ಬರಲು ಅನುಮತಿ ನೀಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರಿಗೆ ದಿನಾಂಕಃ29.08.2026 ರಿಂದ 08.09.2026 ರವರೆಗೆ (ಪ್ರಯಾಣ ದಿನಗಳನ್ನೊಳಗೊಂಡಂತೆ) University of Malaysia Perlis (UniMAP) ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಭಾಷಣಗಾರರಾಗಿ ಭಾಗವಹಿಸಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಿರುವುದಕ್ಕೆ ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ಪ್ರೊ. ನಾಗಸ್ವರೂಪ ಹೆಚ್.ಪಿ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರು ದಿನಾಂಕಃ29.08.2026 ರಿಂದ 08.09.2026 ರವರೆಗೆ (ಪ್ರಯಾಣ ದಿನಗಳನ್ನೊಳಗೊಂಡಂತೆ) University of Malaysia Perlis (UniMAP) ನಲ್ಲಿ ಆಯೋಜಿಲಾಗಿದ್ದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಮುಖ್ಯ ಭಾಷಣಗಾರರಾಗಿ ವಿಶ್ವವಿದ್ಯಾನಿಲಯದ ಮೇಲೆ ಆರ್ಥಿಕ ಹೊರೆ ಇಲ್ಲದೆ ಭಾಗವಹಿಸಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 11	
ವಿಷಯ ಸಂಖ್ಯೆ:	ಸಿಂ.02(g)/(08/26)

–ಃ ಟಿಪ್ಪಣಿ ಃ–

ವಿಷಯಃ ಪ್ರೊ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು – ಇವರು **Ocean University of China** ದೇಶಕ್ಕೆ ಹೋಗಿ ಬರಲು ಅನುಮತಿ ನೀಡುವ ಕುರಿತು

ಉಲ್ಲೇಖ: ಪ್ರೊ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿ/ ಆತ/109/2026–27, ದಿನಾಂಕಃ 20.07.2026

****

ಪ್ರೊ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ದಿನಾಂಕಃ15.10.2026 ರಿಂದ 15.11.2026 ರವರೆಗೆ Ocean University of China, Qingdao, Republic of China ಇಲ್ಲಿ ಆಯೋಜಿಸಿರುವ ಶೈಕ್ಷಣಿಕ ವಿನಿಮಯ ಕಾರ್ಯಕ್ರಮ (Academic Exchange Program) ದಲ್ಲಿ ಭಾಗವಹಿಸಲು ಅನುಮತಿ ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರ ಮುಖಾಂತರ ಕೋರಿರುತ್ತಾರೆ.

ಈ ಕುರಿತು ಪ್ರೊ. ಪ್ರಮೋದ್ ಎಸ್.ಎನ್, ಪ್ರಾಧ್ಯಾಪಕರು ಇವರಿಗೆ ಮೇಲ್ಕಂಡ ದಿನಾಂಕದಂದು Ocean University of China, Qingdao, Republic of China ದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವ ಕುರಿತು ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಪ್ರೊ. ಪ್ರಮೋದ್ ಎಸ್.ಎನ್., ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ – ಇವರು ದಿನಾಂಕಃ15.10.2026 ರಿಂದ 15.11.2026 ರವರೆಗೆ (ಪ್ರಯಾಣ ದಿನಗಳನ್ನೊಳಗೊಂಡಂತೆ) Ocean University of China, Qingdao, Republic of China ಇಲ್ಲಿ ಆಯೋಜಿಸಿರುವ ಶೈಕ್ಷಣಿಕ ವಿನಿಮಯ ಕಾರ್ಯಕ್ರಮದಲ್ಲಿ (Academic Exchange Program) ಭಾಗವಹಿಸಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಿ ವಿಶ್ವವಿದ್ಯಾನಿಲಯದ ಮೇಲೆ ಆರ್ಥಿಕ ಹೊರೆ ಇಲ್ಲದೆ ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ ವಿಭಾಗ – 12	
ವಿಷಯ ಸಂಖ್ಯೆ:	ಸಿಂ.02(h)/(08/26)

–ಃ ಟಿಪ್ಪಣಿ ಃ–

ವಿಷಯಃ **UGC ಮಾರ್ಗಸೂಚಿಗಳಂತೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ "ಪ್ರೊಫೆಸರ್ ಆಫ್ ಪ್ರಾಕ್ಟೀಸ್" ನೇಮಿಸಿಕೊಳ್ಳಲು ಅನುಮೋದನೆ ನೀಡುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:12.08.2026

****

ದಾವಣಗೆರೆ ವಿಶ್ವವಿದ್ಯಾನಿಲಯವು ಪ್ರಸ್ತುತ 29 ಸ್ನಾತಕೋತ್ತರ (PG) ವಿಭಾಗಗಳನ್ನು ಹೊಂದಿದ್ದು, ಪ್ರಮುಖ ಬೋಧನಾ ಅಗತ್ಯತೆಗಳನ್ನು ಆಧುನಿಕ ಹಾಗೂ ತಾಂತ್ರಿಕ ಜಗತ್ತಿಗೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಉದ್ಯಮ ರಂಗದ ನೇರ ಅನುಭವ ಹೊಂದಿರುವ ತಜ್ಞರ ಅಗತ್ಯತೆ ಪ್ರಮುಖವಾಗಿದೆ.

ರಾಷ್ಟ್ರೀಯ ಹಾಗೂ ರಾಜ್ಯ ಶಿಕ್ಷಣ ನೀತಿಯು ಉನ್ನತ ಶಿಕ್ಷಣದಲ್ಲಿ ಕೌಶಲ್ಯಾಧಾರಿತ, ಪ್ರಾಯೋಗಿಕ ಮತ್ತು ಬಹುಶಿಸ್ತೀಯ (Multidisciplinary) ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದೆ. ಇದರ ಭಾಗವಾಗಿ, ಯು.ಜಿ.ಸಿ (UGC) ಉದ್ಯಮ, ತಂತ್ರಜ್ಞಾನ, ಕಲೆ, ಆಡಳಿತ ಹಾಗೂ ಇತರೆ ರಂಗಗಳ ಪರಿಣಿತರನ್ನು ನೇರವಾಗಿ ವಿಶ್ವವಿದ್ಯಾನಿಲಯಗಳಿಗೆ ಕರೆತಂದು ಬೋಧನೆ ಮತ್ತು ಮಾರ್ಗದರ್ಶನದಲ್ಲಿ ತೊಡಗಿಸಿಕೊಳ್ಳಲು "ಪ್ರೊಫೆಸರ್ ಆಫ್ ಪ್ರಾಕ್ಟೀಸ್" (Professor of Practice) ಯೋಜನೆಯ ಮಾರ್ಗಸೂಚಿಗಳನ್ನು ಹೊರಡಿಸಿದೆ.

"ಪ್ರೊಫೆಸರ್ ಆಫ್ ಪ್ರಾಕ್ಟೀಸ್" ನೇಮಕಗೊಂಡಾಗ,

1. ವಿದ್ಯಾರ್ಥಿಗಳಿಗೆ ಸೈದ್ಧಾಂತಿಕ ಜ್ಞಾನದ ಜೊತೆಗೆ ಉದ್ಯಮ ಜಗತ್ತಿನ ಪ್ರಾಯೋಗಿಕ ಸವಾಲುಗಳು (Practical Industry Experience) ನೇರವಾಗಿ ದೊರೆಯಲಿವೆ.
2. ಮಾರುಕಟ್ಟೆಯ ಇತ್ತೀಚಿನ ಬದಲಾವಣೆಗಳಿಗೆ ತಕ್ಕಂತೆ ಪಠ್ಯಕ್ರಮವನ್ನು ಆಧುನೀಕರಿಸಲು ಈ ತಜ್ಞರ ಮಾರ್ಗದರ್ಶನ ಸಿಗಲಿದೆ.
3. ವಿವಿಧ ಕೈಗಾರಿಕೆಗಳು, ಕೇಂದ್ರ/ರಾಜ್ಯ ಸರ್ಕಾರದ ಸಂಸ್ಥೆಗಳಿಂದ ಕಾರ್ಪೊರೇಟ್ ಸಂಶೋಧನೆ ಮತ್ತು ಅನುದಾನಿತ ಯೋಜನೆಗಳನ್ನು (Sponsored Projects) ತರಲು ಸಹಕಾರಿಯಾಗುತ್ತದೆ.
4. 29 ವಿಭಾಗಗಳ ವಿದ್ಯಾರ್ಥಿಗಳಿಗೆ ಹೆಸರಾಂತ ಸಂಸ್ಥೆಗಳಲ್ಲಿ ನೇರ ಇಂಟರ್ನ್‌ಶಿಪ್, ಕೈಗಾರಿಕಾ ಭೇಟಿ (Industrial Visits) ಮತ್ತು ವಿಶ್ವವಿದ್ಯಾನಿಲಯದೊಂದಿಗೆ ಉದ್ಯಮಗಳ ಒಡಂಬಡಿಕೆಗೆ (MoU) ಇದು ನೆರವಾಗಲಿದೆ.

ಯು.ಜಿ.ಸಿ ಮಾರ್ಗಸೂಚಿಗಳು, ವೇತನ ಪಾವತಿ ಮಾದರಿಗಳು, ನಿಯಮ ಮತ್ತು ಷರತ್ತುಗಳನ್ನು ಪರಿಗಣಿಸಿ, ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ "ಪ್ರೊಫೆಸರ್ ಆಫ್ ಪ್ರಾಕ್ಟೀಸ್" ಆಗಿ ತಜ್ಞರನ್ನು ನೇಮಿಸಿಕೊಳ್ಳಲು ದಿನಾಂಕ: 31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

ವಿವರಣೆ:

ಡಾ. ಜಿ.ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು ಇವರು ಮಾತನಾಡಿ – ಕುವೆಂಪು ವಿಶ್ವವಿದ್ಯಾನಿಲಯದಲ್ಲಿ "ಪ್ರೊಫೆಸರ್ ಆಫ್ ಪ್ರಾಕ್ಟೀಸ್" ಹುದ್ದೆಯನ್ನು ನೇಮಿಸಿಕೊಳ್ಳಲಾಗಿದ್ದು, ನಮ್ಮ ವಿಶ್ವವಿದ್ಯಾನಿಲಯದಲ್ಲಿ ನೇಮಿಸಿಕೊಳ್ಳುವುದರಿಂದ, ವಿಶ್ವವಿದ್ಯಾನಿಲಯದ ಘನತೆ ಹೆಚ್ಚುತ್ತದೆ ಹಾಗೂ ನ್ಯಾಕ್ ಅನುಕೂಲವಾಗುತ್ತದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಎಲ್ಲಾ ಸದಸ್ಯರು ಈ ವಿಷಯಕ್ಕೆ ಧ್ವನಿಗೂಡಿಸಿ ಅನುಮೋದಿಸಿದರು.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಈ ಮೇಲ್ಕಂಡ ಶೈಕ್ಷಣಿಕ ಉದ್ದೇಶಗಳಿಗೆ ನೆರವಾಗುವ ಹಿತದೃಷ್ಟಿಯಿಂದ ಕೈಗಾರಿಕೋದ್ಯಮ, ರೈತ ಸಂಘಟನೆ ಹಾಗೂ ಶೈಕ್ಷಣಿಕ ರಂಗ ಹಾಗೂ ಇನ್ನಿತರೆ ರಂಗದಲ್ಲಿ ಪರಿಣಿತರನ್ನು "ಪ್ರೊಫೆಸರ್ ಆಫ್ ಪ್ರಾಕ್ಟೀಸ್" ಆಗಿ ತಜ್ಞರನ್ನು ನೇಮಿಸಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು. ಮುಂದುವರೆದು, ನಿಯಮಾನುಸಾರ ಪ್ರಯಾಣ ಭತ್ಯೆ ಹಾಗೂ ಉಪಸ್ಥಿತ ಭತ್ಯೆಯನ್ನು ನೀಡಲು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ ವಿಭಾಗ – 13	
ವಿಷಯ ಸಂಖ್ಯೆ:	ಸಿಂ.02(i)/(08/26)

–: ಟಿಪ್ಪಣಿ :–

ವಿಷಯಃ 'ಸಂಕಲ್ಪ' ಸ್ಪರ್ಧಾತ್ಮಕ ಉಚಿತ ತರಬೇತಿ ಕೇಂದ್ರಕ್ಕೆ ಒಬ್ಬ ಮೆಂಟರ್‌ನ್ನು ನೇಮಕ ಮಾಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:12.08.2026

****

ದಾವಣಗೆರೆ ವಿಶ್ವವಿದ್ಯಾನಿಲಯ ದಾವಣಗೆರೆ, ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ ಹಾಗೂ ಐ.ಎ.ಎಸ್ ಬಾಬಾ, ಬೆಂಗಳೂರು ಇವರ ಸಹಭಾಗಿತ್ವದಲ್ಲಿ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ 'ಸಂಕಲ್ಪ' ಸ್ಪರ್ಧಾತ್ಮಕ ಉಚಿತ ತರಬೇತಿ ಕಾರ್ಯಕ್ರಮವು ದಿನಾಂಕ:03.08.2025 ರಿಂದ ಪ್ರಾರಂಭಗೊಂಡಿರುತ್ತದೆ. ಸದರಿ ಕಾರ್ಯಕ್ರಮದ ಎರಡನೇ ಆವೃತ್ತಿ ದಿನಾಂಕ:08.08.2026 ರಂದು ಉದ್ಘಾಟಿಸಲಾಗಿರುತ್ತದೆ.

ಸದರಿ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಒಬ್ಬ ಮೆಂಟರ್ ಹುದ್ದೆ ಅವಶ್ಯಕತೆ ಇದ್ದು, SS Care Trust ಮತ್ತು IAS Baba ಇವರೊಂದಿಗೆ ಚರ್ಚಿಸಿ ಸದರಿ ಹುದ್ದೆಯ ಅರ್ಹತೆ, ವೇತನ ಹಾಗೂ ಸೇವಾ ಷರತ್ತುಗಳನ್ನು ನಿಗದಿ ಪಡಿಸಬೇಕಾಗಿರುತ್ತದೆ. ಈ ಕುರಿತು ದಿನಾಂಕಃ31.08.2026ರಂದು ಏರ್ಪಡಿಸಲಾಗಿರುವ ಸಾಮಾನ್ಯ ಸಿಂಡಿಕೇಟ್ ಸಭೆಯ ಚರ್ಚೆಗೆ ಮತ್ತು ಮುಂದಿನ ಸೂಕ್ತ ಕ್ರಮ ಕೋರಿ ವಿಷಯವನ್ನು ಮಂಡಿಸಲಾಗಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ದಾವಣಗೆರೆ, ಎಸ್.ಎಸ್. ಕೇರ್ ಟ್ರಸ್ಟ್, ದಾವಣಗೆರೆ ಹಾಗೂ ಐ.ಎ.ಎಸ್ ಬಾಬಾ, ಬೆಂಗಳೂರು ಇವರ ಸಹಭಾಗಿತ್ವದಲ್ಲಿ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಪ್ರಾರಂಭಿಸಿರುವ 'ಸಂಕಲ್ಪ' ಸ್ಪರ್ಧಾತ್ಮಕ ಉಚಿತ ತರಬೇತಿ ಕೇಂದ್ರಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬ ಮೆಂಟರ್‌ನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 14	
ವಿಷಯ ಸಂಖ್ಯೆ:	ಸಿಂ.11(j)/(08/26)

–: ಟಿಪ್ಪಣಿ :–

ವಿಷಯಃ **ವಿಶ್ವವಿದ್ಯಾನಿಲಯದ ಬೋಧಕೇತರ ಅಧಿಕಾರಿ/ನೌಕರರುಗಳಿಗೆ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಅನ್ವಯ ಮುಂಬಡ್ತಿ ನೀಡಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.**

ಉಲ್ಲೇಖ: 1. ದಿನಾಂಕಃ25.05.2026ರಂದು ನಡೆದ "ಇಲಾಖಾ ಬಡ್ತಿ ಸಮಿತಿ" ಸಭೆಯ ನಡಾವಳಿ ನಿರ್ಣಯ.

2. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/212/2026–27 /1020, ದಿನಾಂಕಃ 30.05.2026

3. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/213/2026–27/ 1021, ದಿನಾಂಕಃ 30.05.2026

4. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/214/2026–27/ 1022, ದಿನಾಂಕಃ 30.05.2026

****

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಧ್ಯಾಪಕೇತರ ನೌಕರರುಗಳಿಗೆ (ಸಹಾಯಕ ಕುಲಸಚಿವರು, ಅಧೀಕ್ಷಕರು, ಹಿರಿಯ ಸಹಾಯರು) ಮುಂಬಡ್ತಿ ನೀಡುವ ಸಂಬಂಧ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯನ್ನು ದಿನಾಂಕಃ 25.05.2026ರಂದು ಏರ್ಪಡಿಸಲಾಗಿತ್ತು. ಸದರಿ ಸಮಿತಿಯು ಈ ಕೆಳಕಂಡ ಅರ್ಹ ಸಿಬ್ಬಂದಿಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಉಲ್ಲೇಖ (2), (3) ಮತ್ತು (4)ರಲ್ಲಿ ಅನುಕ್ರಮವಾಗಿ ಸಹಾಯಕ ಕುಲಸಚಿವ, ಅಧೀಕ್ಷಕ ಹಾಗೂ ಹಿರಿಯ ಸಹಾಯಕ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿದೆ.

ಕ್ರ ಸಂ.	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ಹೆಸರು ಮತ್ತು ಪದನಾಮ	ವರ್ಗ	ಡಿಪಿಸಿ ಸಭೆಯ ಶಿಫಾರಸ್ಸಿನ ಮೇರೆಗೆ ಮುಂಬಡ್ತಿ ನೀಡಿದ ಹುದ್ದೆಗಳ ಪದನಾಮ	ಮುಂಬಡ್ತಿಗೆ ಶಿಫಾರಸ್ಸು ಮಾಡಿರುವ ಹುದ್ದೆಯ ವೇತನ ಶ್ರೇಣಿ	ಅರ್ಹತಾ ದಿನಾಂಕ
01	ಶ್ರೀ ರಂಗಸ್ವಾಮಿ ಆರ್. ಎಲ್. ಅಧೀಕ್ಷಕರು	ಪ.ಜಾತಿ	ಸಹಾಯಕ ಕುಲಸಚಿವರು	ರೂ.83,700–1,55,200	29.05.2026
02	ಶ್ರೀಮತಿ ರೇಣುಕ ಎಸ್.ಆರ್, ಹಿರಿಯ ಸಹಾಯಕರು	ಸಾಮಾನ್ಯ	ಅಧೀಕ್ಷಕರು	ರೂ.69,250–1,34,200	29.05.2026
03	ಶ್ರೀ ಆದರ್ಶ ಹೊಂಬಾಳೆ, ಪ್ರಥಮ ದರ್ಜೆ ಸಹಾಯಕರು	ಸಾಮಾನ್ಯ	ಹಿರಿಯ ಸಹಾಯಕರು	ರೂ.61,300–1,12,900	29.05.2026
04	ಶ್ರೀ ಪುನಿತ್ ಜೆ, ಪ್ರಥಮ ದರ್ಜೆ ಸಹಾಯಕರು	371ಜೆ	ಹಿರಿಯ ಸಹಾಯಕರು	ರೂ.61,300–1,12,900	19.06.2026

ತತ್ಸಂಬಂಧ ಇಲಾಖಾ ಮುಂಬಡ್ತಿ ಸಮಿತಿ ಶಿಫಾರಸ್ಸಿನ್ವಯ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮೇಲ್ಕಂಡ ಅಧಿಕಾರಿ/ಸಿಬ್ಬಂದಿಗಳಿಗೆ ಮುಂಬಡ್ತಿ ಆದೇಶ ನೀಡಿರುವುದಕ್ಕೆ ಹಾಗೂ ಆರ್ಥಿಕ ಸೌಲಭ್ಯವನ್ನು ಮುಂಬಡ್ತಿ ಆದೇಶದಲ್ಲಿ ನಿಗದಿಪಡಿಸಲಾದ ದಿನಾಂಕದಿಂದ ಮಂಜೂರು ಮಾಡಲು ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಮೇಲ್ಕಂಡ ಅಧ್ಯಾಪಕೇತರ ನೌಕರರುಗಳಿಗೆ (ಸಹಾಯಕ ಕುಲಸಚಿವ, ಅಧೀಕ್ಷಕ, ಹಿರಿಯ ಸಹಾಯಕರು) ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯ ನಿರ್ಣಯದನ್ವಯ ಮುಂಬಡ್ತಿ ಆದೇಶ ನೀಡಿರುವ ಕುರಿತಂತೆ ಸರ್ಕಾರಕ್ಕೆ ಪತ್ರಿಸಿ, ಸರ್ಕಾರದ ಆದೇಶಾನುಸಾರ ಮುಂದಿನ ಕ್ರಮವಹಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 15	
ವಿಷಯ ಸಂಖ್ಯೆ:	ಸಿಂ.11(k)/(08/26)

–: ಟಿಪ್ಪಣಿ :–

ವಿಷಯಃ **ವಿಶ್ವವಿದ್ಯಾನಿಲಯದ ಬೋಧಕೇತರ ಅಧಿಕಾರಿ/ನೌಕರರುಗಳಿಗೆ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಅನ್ವಯ ಉಪಕುಲಸಚಿವ/ ಸಹಾಯಕ ಕುಲಸಚಿವರ ಹುದ್ದೆಗೆ ಮುಂಬಡ್ತಿ ನೀಡಿರುವುದಕ್ಕೆ ಘಟನೋತ್ತರ ಅನುಮತಿ ನೀಡುವ ಬಗ್ಗೆ.**

ಉಲ್ಲೇಖ: 1. ದಿನಾಂಕಃ30.05.2026ರಂದು ನಡೆದ "ಇಲಾಖಾ ಬಡ್ತಿ ಸಮಿತಿ" ಸಭೆಯ ನಡಾವಳಿ ನಿರ್ಣಯ.

2. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/211/2026–27 /1028, ದಿನಾಂಕಃ 30.05.2026

3. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/212/2026–27/ 1029, ದಿನಾಂಕಃ 30.05.2026

****

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಧ್ಯಾಪಕೇತರ ನೌಕರರುಗಳಿಗೆ (ಉಪ ಕುಲಸಚಿವರು, ಸಹಾಯಕ ಕುಲಸಚಿವರು) ಮುಂಬಡ್ತಿ ನೀಡುವ ಸಂಬಂಧ ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯನ್ನು ದಿನಾಂಕಃ30.05.2026ರಂದು ಏರ್ಪಡಿಸಲಾಗಿತ್ತು. ಸದರಿ ಸಮಿತಿಯು ಈ ಕೆಳಕಂಡ ಅರ್ಹ ಸಿಬ್ಬಂದಿಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಮುಂಬಡ್ತಿ ನೀಡಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಉಲ್ಲೇಖ (2) ಮತ್ತು (3)ರಲ್ಲಿ ಅನುಕ್ರಮವಾಗಿ ಉಪ ಕುಲಸಚಿವ ಮತ್ತು ಸಹಾಯಕ ಕುಲಸಚಿವ ಹುದ್ದೆಗಳಿಗೆ ಮುಂಬಡ್ತಿ ನೀಡಲಾಗಿದೆ.

ಕ್ರ ಸಂ.	ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ನೌಕರರ ಹೆಸರು ಮತ್ತು ಪದನಾಮ	ವರ್ಗ	ಡಿಪಿಸಿ ಸಭೆಯ ಶಿಫಾರಸ್ಸಿನ ಮೇರೆಗೆ ಮುಂಬಡ್ತಿ ನೀಡಿದ ಹುದ್ದೆಗಳ ಪದನಾಮ	ಮುಂಬಡ್ತಿಗೆ ಶಿಫಾರಸ್ಸು ಮಾಡಿರುವ ಹುದ್ದೆಯ ವೇತನ ಶ್ರೇಣಿ	ಅರ್ಹತಾ ದಿನಾಂಕ
01	ಶ್ರೀ ದೇವರಾಜ್ ಹೆಚ್.ಬಿ. ಸಹಾಯಕ ಕುಲಸಚಿವ	ಪ.ಜಾತಿ	ಉಪ ಕುಲಸಚಿವ	ರೂ.1,07,500–1,67,200	30.05.2026
02	ಶ್ರೀಮತಿ ಗಿರಿಜಮ್ಮ ಎನ್.ಹೆಚ್. ಅಧೀಕ್ಷಕ	ಪ.ಪಂಗಡ	ಸಹಾಯಕ ಕುಲಸಚಿವ	ರೂ.83,700–1,55,200	30.05.2026

ತತ್ಸಂಬಂಧ ಇಲಾಖಾ ಮುಂಬಡ್ತಿ ಸಮಿತಿ ಶಿಫಾರಸ್ಸಿನ್ವಯ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಮೇಲ್ಕಂಡ ಅಧಿಕಾರಿ/ಸಿಬ್ಬಂದಿಗಳಿಗೆ ಮುಂಬಡ್ತಿ ಆದೇಶ ನೀಡಿರುವುದಕ್ಕೆ ಹಾಗೂ ಆರ್ಥಿಕ ಸೌಲಭ್ಯವನ್ನು ಮುಂಬಡ್ತಿ ಆದೇಶದಲ್ಲಿ ನಿಗದಿಪಡಿಸಲಾದ ದಿನಾಂಕದಿಂದ ಮಂಜೂರು ಮಾಡಲು ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಮೇಲ್ಕಂಡ ಅಧ್ಯಾಪಕೇತರ ನೌಕರರುಗಳಿಗೆ (ಉಪಕುಲಸಚಿವ, ಸಹಾಯಕ ಕುಲಸಚಿವ) ಇಲಾಖಾ ಮುಂಬಡ್ತಿ ಪರಿಶೀಲನಾ ಸಮಿತಿಯ ನಿರ್ಣಯದನ್ವಯ ಮುಂಬಡ್ತಿ ಆದೇಶ ನೀಡಿರುವ ಕುರಿತಂತೆ ಸರ್ಕಾರಕ್ಕೆ ಪತ್ರಿಸಿ, ಸರ್ಕಾರದ ಆದೇಶಾನುಸಾರ ಮುಂದಿನ ಕ್ರಮವಹಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 16	
ವಿಷಯ ಸಂಖ್ಯೆ:	ಸಿಂ.11(1)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳ ವಾಹನ ಚಾಲಕರಿಗೆ TA/DA ಪಾವತಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:17.08.2026

****

ವಿಶ್ವವಿದ್ಯಾನಿಲಯದ ಶಾಸನ ಬದ್ಧ ಅಧಿಕಾರಿಗಳು ಅನ್ಯ ಕಾರ್ಯ ನಿಮಿತ್ತ ಕೇಂದ್ರ ಸ್ಥಾನ ಬಿಟ್ಟು ಬೇರೆ ಸ್ಥಳಗಳಿಗೆ, ವಿವಿಧ ಸಭೆ ಹಾಗೂ ಪರಿವೀಕ್ಷಣೆಗಳಿಗೆ ಹಾಜರಾಗಲು ಹೋಗುವ ಸಂದರ್ಭದಲ್ಲಿ, ವಾಹನ ಚಾಲಕರಿಗೆ ಪ್ರಯಾಣ/ದಿನಭತ್ಯೆಯನ್ನು ನೀಡಬೇಕಾಗಿರುತ್ತದೆ.

ಸರ್ಕಾರ 'ಸಿ' ದರ್ಜೆ 'ಡಿ' ದರ್ಜೆ ಸಿಬ್ಬಂದಿಗಳಿಗೆ ನಿಗದಿಪಡಿಸಿರುವಂತೆ ಷರತ್ತಿಗೊಳಪಟ್ಟು ನಿಯಮಬದ್ಧ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಯನ್ನು ಪಾವತಿಸಲು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ಅನ್ಯಕಾರ್ಯ ನಿಮಿತ್ತ ಕೇಂದ್ರ ಸ್ಥಾನ ಬಿಟ್ಟು ಬೇರೆ ಸ್ಥಳಗಳಿಗೆ, ವಿವಿಧ ಸಭೆ ಹಾಗೂ ಪರಿವೀಕ್ಷಣೆಗಳಿಗೆ ಹಾಜರಾಗಲು ಹೋಗುವ ಸಂದರ್ಭದಲ್ಲಿ, ವಾಹನ ಚಾಲಕರಿಗೆ – ಸರ್ಕಾರವು 'ಸಿ' ದರ್ಜೆ 'ಡಿ' ದರ್ಜೆ ಸಿಬ್ಬಂದಿಗಳಿಗೆ ನಿಗದಿಪಡಿಸಿರುವಂತೆ ಷರತ್ತಿಗೊಳಪಟ್ಟು ನಿಯಮಾನುಸಾರ TA & DA ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 17	
ವಿಷಯ ಸಂಖ್ಯೆ:	ಸಿ.ಆ(m)/(08/26)

–: ಟಿಪ್ಪಣಿ :–

ವಿಷಯಃ **ಪ್ರೊ. ಅಶೋಕ್‌ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು – ಇವರಿಗೆ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: 1. ಡಾ. ಅಶೋಕ್‌ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು ಇವರ ಪತ್ರಸಂಖ್ಯೆ:ದಾವಿವಿ/ರಾಜ್ಯಶಾಸ್ತ್ರ/176/2025–26 ದಿನಾಂಕ:22.05.2026

2. ವಿವಿ ಕಛೇರಿ ಜ್ಞಾಪನಾ ಪತ್ರ ಸಂಖ್ಯೆ:ದಾವಿವಿ/ಮಾಸನಿ/ 442/2026–27/1002 ದಿನಾಂಕ:29.5.2026

****

ಡಾ. ಅಶೋಕ್ ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣೆಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ದಿನಾಂಕಃ 27.06.2026 ರಿಂದ 13.07.2026 (ಪ್ರಯಾಣ ದಿನಗಳು ಸೇರಿಸಿ) ರವರೆಗೆ University of Wolverhampton, UK ಇವರು ಆಯೋಜಿಸಿರುವ British Council Project "SCOUT (Scholars for Outstanding Undergraduate Talent) & CIRCLE (Climate Resilence Cities Leadership and Equity)" ಕಾರ್ಯಕ್ರಮದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಸದರಿಯವರು ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರಲ್ಲಿ ಡಾ. ಅಶೋಕ್ ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು ಇವರಿಗೆ ಮೇಲ್ಕಂಡ ದಿನಾಂಕದಂದು University of Wolverhampton, UK ಇಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ಆರ್ಥಿಕ ಸೌಲಭ್ಯ ರಹಿತ ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡಿರುವುದಕ್ಕೆ ದಿನಾಂಕಃ31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಡಾ. ಅಶೋಕ್ ಕುಮಾರ್ ವೀ. ಪಾಳೇದ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ದಿನಾಂಕಃ27.06.2026 ರಿಂದ 13.07.2026 (ಪ್ರಯಾಣ ದಿನಗಳು ಸೇರಿಸಿ) ರವರೆಗೆ University of Wolverhampton, UK ಇವರು ಆಯೋಜಿಸಿರುವ British Council Project "SCOUT (Scholars for Outstanding Undergraduate Talent) & CIRCLE (Climate Resilence Cities Leadership and Equity)" ಕಾರ್ಯಕ್ರಮದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 18	
ವಿಷಯ ಸಂಖ್ಯೆ:	ಸಿಂ.11(n)/(08/26)

–: ಟಿಪ್ಪಣಿ :–

ವಿಷಯಃ **ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ಕುರಿತು.**

ಉಲ್ಲೇಖ: 1. ದಿನಾಂಕ: 12.03.2026ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ.
2. ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣ ಸಂಖ್ಯೆ: W.P. No. 18515/2026
3. ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: ದಾವಿವಿ/ಮಾಸನಿ/522/2026–27/2506, ದಿನಾಂಕಃ 27.08.2026
4. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ದಾವಿವಿ/ಮಾಸನಿ/540/2025–26/4431, ದಿನಾಂಕ:16.01.2026
5. ವಿಶ್ವವಿದ್ಯಾನಿಲಯದ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ದಾವಿವಿ/ಮಾಸನಿ//522/2026–27/2183, ದಿನಾಂಕ10.08.2026
6. ಶ್ರೀ ಶೌರಿ ಹೆಚ್.ಆರ್. ಕಾನೂನು ಸಲಹೆಗಾರರ ಇ–ಮೇಲ್ ದಿನಾಂಕಃ 12.08.2026
7. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ: 27.08.2026

****

ಡಾ. ವಿಶ್ವನಾಥ ಹೆಚ್, ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ. ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕ:31.07.2026ರಂದು ವಯೋ ನಿವೃತ್ತಿ ಹೊಂದುತ್ತಿದ್ದು, ದಿನಾಂಕ: 12.03.2026 ರಂದು ನಡೆದ ಸಿಂಡಿಕೇಟ್ ಸಭೆಯು ಸದರಿಯವರನ್ನು ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಕರ್ತವ್ಯದಿಂದ ಬಿಡುಗಡೆಗೊಳಿಸಲು ನಿರ್ಣಯಿಸಿರುತ್ತದೆ. ಮುಂದುವರೆದು, ಸದರಿಯವರು ತಮ್ಮ ಸೇವೆಯನ್ನು 65 ವರ್ಷಗಳವರೆಗೆ ವಿಸ್ತರಿಸಲು ಕೋರಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಪ್ರಕರಣವನ್ನು (W.P. No. 18515/2026) ದಾಖಲಿಸಿ ಮಧ್ಯಂತರ ಆದೇಶದ ಪ್ರತಿಯೊಂದಿಗೆ ದಿನಾಂಕ:01.07.2026 (ಸ್ವೀಕೃತ ದಿನಾಂಕ: 03.07.2026) ರಂದು ಮನವಿಯನ್ನು ಸಲ್ಲಿಸಿರುತ್ತಾರೆ. ತತ್ಸಂಬಂಧ, ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಸದರಿ ಪ್ರಕರಣದ ಅಂತಿಮ ಆದೇಶಕ್ಕೊಳಪಟ್ಟು ಡಾ. ವಿಶ್ವನಾಥ್ ಹೆಚ್. ಪ್ರಾಧ್ಯಾಪಕರು ಇವರ ಸೇವೆಯನ್ನು ಕನ್ನಡ ಅಧ್ಯಯನ ವಿಭಾಗದಲ್ಲಿ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಯಥಾಸ್ಥಿತಿ (Status-quo) ಕಾಪಾಡಲಾಗಿದೆ ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನ ಕೋರಿ ಉಲ್ಲೇಖ (3)ರಲ್ಲಿ ಪತ್ರಿಸಲಾಗಿದೆ.

ಮುಂದುವರೆದು, ಉಲ್ಲೇಖ (4)ರಲ್ಲಿ ಡಾ. ವಿಶ್ವನಾಥ ಹೆಚ್. ಇವರನ್ನು ದಿನಾಂಕ:18.01.2026ರಿಂದ 31.07.2026 ರವರೆಗೆ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆದರೆ, ಸದರಿಯವರನ್ನು ಅಧ್ಯಕ್ಷರನ್ನಾಗಿ ಮುಂದುವರೆಸಲು ಕಾನೂನು ಅಭಿಪ್ರಾಯಕ್ಕಾಗಿ ಉಲ್ಲೇಖ (5)ರಲ್ಲಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರಿಗೆ ಪತ್ರಿಸಲಾಗಿತ್ತು. ಈ ಕುರಿತು ಕಾನೂನು ಸಲಹೆಗಾರರು ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರೆಸುವುದು ಅಥವಾ ಬಿಡುಗಡೆಗೊಳಿಸುವುದು ವಿಶ್ವವಿದ್ಯಾನಿಲಯದ ಸಕ್ಷಮ ಪ್ರಾಧಿಕಾರಕ್ಕೆ ಸಂಬಂಧಪಟ್ಟಿರುವುದರಿಂದ ವಿಶ್ವವಿದ್ಯಾನಿಲಯದ ಹಂತದಲ್ಲಿ ನಿರ್ಣಯ ತೆಗೆದುಕೊಳ್ಳಲು ಅಭಿಪ್ರಾಯಿಸಿರುತ್ತಾರೆ. ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:31.08.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ಡಾ. ವಿಶ್ವನಾಥ್ ಹೆಚ್. ಪ್ರಾಧ್ಯಾಪಕರು ಇವರ ಸೇವೆಯನ್ನು ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದಲ್ಲಿ ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಅಂತಿಮ ಆದೇಶ ಬರುವವರೆಗೆ ಯಥಾ ಸ್ಥಿತಿ (Status-quo) ಕಾಪಾಡುವಂತೆ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರಿಗೆ ವೇತನ ಪಾವತಿ ಹಾಗೂ ಇತರೆ ಸೌಲಭ್ಯಗಳನ್ನು ಮುಂದುವರಿಸುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರದ ನಿರ್ದೇಶನ ಪಡೆದ ನಂತರ ಮುಂದಿನ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

ಮುಂದುವರೆದು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆ ಹಾಗೂ ಸರದಿಯನುಸಾರ ಒಬ್ಬ ಪ್ರಾಧ್ಯಾಪಕರನ್ನು ಅಧ್ಯಕ್ಷರನ್ನಾಗಿ 02 ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 19	
ವಿಷಯ ಸಂಖ್ಯೆ:	ಸಿಂ.11(ಂ)/(08/26)

–ಃ ಟಿಪ್ಪಣಿ ಃ–

ವಿಷಯಃ ದೈಹಿಕ ಶಿಕ್ಷಣ ನಿರ್ದೇಶಕರ ಮಾಸಿಕ ಗೌರವ ಸಂಭಾವನೆಯನ್ನು ಪಾವತಿಸುವಂತೆ ಕೋರಿರುವ ಕುರಿತು.

ಉಲ್ಲೇಖ: 1. ವಿಶ್ವವಿದ್ಯಾನಿಲಯದ ಜ್ಞಾಪನ ಸಂಖ್ಯೆ:ದಾವಿವಿ/ಮಾಸನಿ/2020–21/4805, 00:29.01.2021

2. ದೈಹಿಕ ಶಿಕ್ಷಣ ನಿರ್ದೇಶಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರ ಟಿಪ್ಪಣಿ ಸಂಖ್ಯೆ: ದಾವಿವಿ/ಕ್ರೀಡಾ/9080/2026–27, ದಿನಾಂಕ:28.08.2026

3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:28.08.2026

****

ದಾವಣಗೆರೆ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ರಾಜಕುಮಾರ ಎಂ.ಎಸ್. ಇವರು ದಿನಾಂಕ:30.01.2021ರಂದು ವಯೋ ನಿವೃತ್ತಿ ಹೊಂದಿದ ನಂತರ ಸದರಿ ಜವಾಬ್ದಾರಿಯನ್ನು ನಿರ್ವಹಿಸಲು ಡಾ. ವೆಂಕಟೇಶ ಕೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ದಾವಿವಿ ಇವರಿಗೆ ಉಲ್ಲೇಖ (1)ರಲ್ಲಿ ಆದೇಶಿಸಲಾಗಿತ್ತು. ಮುಂದುವರೆದು ಡಾ. ವೆಂಕಟೇಶ್ ಕೆ. ಪ್ರಾಧ್ಯಾಪಕರು, ಇವರು ದಿನಾಂಕಃ01.02.2021ರಿಂದ ದೈಹಿಕ ಶಿಕ್ಷಣ ನಿರ್ದೆಶಕರಾಗಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಸದರಿ ದಿನಾಂಕದಿಂದ ಮಾಹೆಯಾನ ಗೌರವ ಸಂಭಾವನೆ ರೂ.1,000–00ಗಳನ್ನು ನಿಗದಿಪಡಿಸಿ ಪಾವತಿಸುವಂತೆ ಉಲ್ಲೇಖ (2)ರಲ್ಲಿ ಕೋರಿರುತ್ತಾರೆ. ಈ ಕುರಿತು ಉಲ್ಲೇಖ (3)ರ ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಸದರಿ ವಿಷಯವನ್ನು ದಿನಾಂಕಃ31.08.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ಡಾ. ವೆಂಕಟೇಶ್ ಕೆ. ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರು ತಮ್ಮ ವಿಭಾಗದ ದೈನಂದಿನ ಶೈಕ್ಷಣಿಕ ಕಾರ್ಯಭಾರಗಳ ಕರ್ತವ್ಯದ ಜೊತೆಗೆ ದಿನಾಂಕಃ01.02.2021 ರಿಂದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾಗಿ ಹೆಚ್ಚುವರಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಸದರಿ ದಿನಾಂಕದಿಂದ ಮಾಹೆಯಾನ ಗೌರವ ಸಂಭಾವನೆ ರೂ.1,000/– ಗಳನ್ನು ನಿಗದಿಪಡಿಸಿ ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 20	
ವಿಷಯ ಸಂಖ್ಯೆ:	ಸಿಂ.11(p)/(08/26)

–ಃ ಟಿಪ್ಪಣಿ ಃ–

ವಿಷಯಃ ಖಾಲಿ ಇರುವ ಸಹಾಯಕ ನಿಭಂದಕರ ಹುದ್ದೆಗೆ ತಾತ್ಕಾಲಿಕವಾಗಿ 06 ತಿಂಗಳ ಅವಧಿಗೆ ಮುಂಬಡ್ತಿ ನೀಡುವ ಕುರಿತು.

ಉಲ್ಲೇಖ: ಇಲಾಖಾ ಮುಂಬಡ್ತಿ ಸಮಿತಿ ಸಭೆ ದಿನಾಂಕ:30.05.2026

****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಈ ಮೂಲಕ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:30.05.2026 ರಂದು ಇಲಾಖಾ ಮುಂಬಡ್ತಿ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ವಿವಿಧ ವೃಂದಗಳ ನೌಕರರಿಗೆ ಮುಂಬಡ್ತಿಯನ್ನು ನೀಡಲಾಗಿರುತ್ತದೆ. ಆದರೆ, ರೊಷ್ಟರ್ ಬಿಂದು 12 ರಲ್ಲಿ ಸಾಮಾನ್ಯ ಅಭ್ಯರ್ಥಿಗೆ (GM) ಮೀಸಲಿಟ್ಟ ಸ್ಥಾನಕ್ಕೆ, ಕಛೇರಿ ಅಧೀಕ್ಷಕರ ಜೇಷ್ಠತಾ ಪಟ್ಟಿಯಲ್ಲಿ 6ನೇ ಸ್ಥಾನದಲ್ಲಿರುವ ಪ.ವರ್ಗ(ST)ದ ನೌಕರರಾದ ಶ್ರೀಮತಿ ಗಿರಿಜಮ್ಮ ಇವರಿಗೆ ಮುಂಬಡ್ತಿ ನೀಡಲಾಗಿರುತ್ತದೆ. ಆದರೆ, ಜೇಷ್ಠತಾ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿರುವ ನನಗೆ ಶ್ರೀ ರಂಗಸ್ವಾಮಿ ಆರ್.ಎಲ್., ಇವರ ವಯೋನಿವೃತ್ತಿ ನಂತರ ಮುಂಬಡ್ತಿಗೆ ಅವಕಾಶ ನೀಡಲಾಗಿರುತ್ತದೆ.

ಸಹಾಯಕ ಕುಲಸಚಿವ ಹುದ್ದೆಯ ಜೇಷ್ಠತಾ ಪಟ್ಟಿಯಲ್ಲಿ ರೊಷ್ಟರ್ ಬಿಂದು 11ಕ್ಕೆ SC ವರ್ಗದ ಶ್ರೀ ರಂಗಸ್ವಾಮಿ ಇವರಿಗೆ ಬಡ್ತಿ ನೀಡಲಾಗಿರುತ್ತದೆ. ಆದರೆ, ರೊಷ್ಟರ್ ಬಿಂದು 12ರಲ್ಲಿ GMಗೆ ಮೀಸಲಿದ್ದು ಅದನ್ನು ಪರಿಗಣಿಸಿ ನನಗೆ ಮುಂಬಡ್ತಿ ನೀಡಲಾಗಿರುವುದಿಲ್ಲ. ಹಾಗೂ ವಿಶ್ವವಿದ್ಯಾನಿಲಯದಲ್ಲಿ ಇದುವರೆಗೂ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇರುವ ಬಗ್ಗೆ ಅಧಿಸೂಚಿಸಲಾಗಿಲ್ಲ. ಮತ್ತು ಸಹಾಯಕ ಕುಲಸಚಿವರ ಹುದ್ದೆಯ ರೊಷ್ಟರ್ ಅನುಪಾತವನ್ನು ಕ್ರಮಬದ್ದವಾಗಿ ಮಾಡಿರುವುದಿಲ್ಲ.

ಸಾಮಾನ್ಯ ವರ್ಗದ ನೌಕರರಿಗೆ ನಿಯಮಾನುಸಾರ ಬಡ್ತಿಗೆ ಅವಕಾಶವಿದ್ದರೂ ಬಡ್ತಿ ನೀಡದೆ ಕೇವಲ ಪ.ಜಾತಿ/ಪ.ಪಂಗಡದ ನೌಕರರಿಗೆ ಮಾತ್ರ ಮುಂಬಡ್ತಿ ನೀಡಲಾಗಿರುತ್ತದೆ. ಇದರಿಂದ ನಿವೃತ್ತಿ ಅವಧಿ ಕಡಿಮೆ ಇರುವ ನನಗೆ ಅನ್ಯಾಯವಾಗಿದೆ. ಆದ್ದರಿಂದ, ತಾವುಗಳು **ವಿಶ್ವವಿದ್ಯಾನಿಲಯದ <u>ನೇಮಕಾತಿ ಪ್ರಾಧಿಕಾರ ಸಿಂಡಿಕೇಟ್ ಆಗಿರುವುದರಿಂದ – ಸದರಿ ಸಭೆಯ ಅನುಮೋದನೆ ಮೇರೆಗೆ</u>** ನನಗೆ ಈ ಕೆಳಕಂಡಂತೆ ನನಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇನೆ.

1. ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಹುದ್ದೆಯಾದ **<u>"ಸಹಾಯಕ ನಿಭಂದಕರ"</u>** ಹುದ್ದೆಯು ಸಹಾಯಕ ಕುಲಸಚಿವರ ಹುದ್ದೆಗೆ **ಸಮನಾದ ಹುದ್ದೆಯಾಗಿದ್ದು** ಸದರಿ ಹುದ್ದೆಗೆ ಈ ಹಿಂದೆ ಶ್ರೀಮತಿ ಹೇಮಲತ ಬಿ.ಕೆ. ಇವರಿಗೆ ನಿವೃತ್ತಿ ಅವಧಿಗೆ ಮುಂಬಡ್ತಿ ನೀಡಿ ಅವಕಾಶ ಕಲ್ಪಿಸಲಾಗಿತ್ತು. ಅದರನ್ವಯ,

2. ದಯಮಾಡಿ ತಾವುಗಳು ನನಗೂ ಕೂಡ ಅರ್ಹತಾ ದಿನಾಂಕದಿಂದ ಅನ್ವಯವಾಗುವಂತೆ, ತಾತ್ಕಾಲಿಕವಾಗಿ 6 ತಿಂಗಳ ಅವಧಿಯವರೆಗೆ ಮಾತ್ರ ಸಹಾಯಕ ನಿಭಂದಕರ ಹುದ್ದೆಗೆ ಎದುರಾಗಿ, ತದನಂತರದಲ್ಲಿ ಶ್ರೀ ರಂಗಸ್ವಾಮಿ ಆರ್.ಎಲ್. – ಇವರಿಂದ ತೆರವಾದ ಸಹಾಯಕ ಕುಲಸಚಿವ ಹುದ್ದೆಗೆದುರಾಗಿ ಮುಂದುವರೆಯುವಂತೆ ನನಗೆ ಮುಂಬಡ್ತಿ ನೀಡಿ ಆದೇಶಿಸಿ ನ್ಯಾಯ ದೊರಕಿಸಿಕೊಡಬೇಕಾಗಿ ಶ್ರೀ ನಂಜಪ್ಪ ಕೆ.ಎಂ. ಅಧೀಕ್ಷಕರು ಇವರು ವಿನಂತಿಸಿಕೊಂಡಿರುವುದರಿಂದ ಸದರಿ ವಿಷಯವನ್ನು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ಸದರಿ ವಿಷಯವನ್ನು ನಿಯಮಾನುಸಾರ ಪರಿಶೀಲಿಸಿ ತೀರ್ಮಾನಿಸುವ ಕುರಿತು ಮುಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 21	
ವಿಷಯ ಸಂಖ್ಯೆ:	ಸಿಂ.11(q)/(08/26)

–: ಟಿಪ್ಪಣಿ :–

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಹಂಗಾಮಿಯಾಗಿ ಸಹಾಯಕ ಇಂಜಿನಿಯರ್(ವಿದ್ಯುತ್) ಇವರನ್ನು ನೇಮಕ ಮಾಡಿರುವ ಬಗ್ಗೆ

ಉಲ್ಲೇಖ: 1. ವಿಶ್ವವಿದ್ಯಾನಿಲಯದಲ್ಲಿ ದಿನಾಂಕ: 30.12.2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಕೈಗೊಂಡ ನಿರ್ಣಯ.

2. ಅಧಿಕೃತ ಜ್ಞಾಪನಾ ಸಂಖ್ಯೆ:ದಾವಿವಿ:ಮಾಸನಿ:364(4):2026–27 ದಿನಾಂಕ:30.05.2026

****

ದಾವಣಗೆರೆ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗಕ್ಕೆ ಕಾರ್ಯಪಾಲಕ ಇಂಜಿನಿಯರ್ ಹುದ್ದೆ ಮಾತ್ರ ಮಂಜೂರಾಗಿದ್ದು, ಈ ಹುದ್ದೆಗೆದುರಾಗಿ ಸರ್ಕಾರದ ವತಿಯಿಂದ ಸಿವಿಲ್ ಇಂಜಿನಿಯರ್ ರವರನ್ನು ನಿಯೋಜನೆ ಮೇರೆಗೆ ನೇಮಕ ಮಾಡಲಾಗುತ್ತಿದೆ. ಆದರೆ ವಿಶ್ವವಿದ್ಯಾನಿಲಯದ ಮತ್ತು ಘಟಕ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಯನ ವಿಭಾಗಗಳ ಮತ್ತು ಇನ್ನಿತರೆ ಕಾರ್ಯಾಲಯಗಳ ವಿದ್ಯುತ್ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ದಿನದ 24 ಗಂಟೆ ನಿರ್ವಹಣೆ ಮಾಡುವ ಸಲುವಾಗಿ ದಿನಾಂಕ: 30.12.2025 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಸಹಾಯಕ ಇಂಜಿನಿಯರ್(ವಿದ್ಯುತ್) ರವರನ್ನು ಹಂಗಾಮಿಯಾಗಿ ಸಂಚಿತ ವೇತನದಡಿ ನೇಮಕ ಮಾಡುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಸದರಿ ಸಿಂಡಿಕೇಟ್ ನಿರ್ಣಯದ ಹಿನ್ನಲೆಯಲ್ಲಿ ಸಹಾಯಕ ಇಂಜಿನಿಯರ್(ವಿದ್ಯುತ್) ಹುದ್ದೆಗೆ ಹಂಗಾಮಿಯಾಗಿ ನೇಮಕ ಮಾಡುವ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡಿ, ಅರ್ಜಿಗಳನ್ನು ಆಹ್ವಾನಿಸಿ, ಪರಿಣಿತ ಸಮಿತಿಯನ್ನು ರಚಿಸಿ, ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆ ಆಧಾರದ ಮೇಲೆ ಶ್ರೀ ಮಯೂರಗೌಡ ಪಾಟೀಲ ಎಂಬುವರನ್ನು ಹಂಗಾಮಿಯಾಗಿ ಸಹಾಯಕ ಇಂಜಿನಿಯರ್(ವಿದ್ಯುತ್)ರನ್ನಾಗಿ ವಿದ್ಯಾರ್ಹತೆಗನುಗುಣವಾಗಿ ನೇಮಕ ಮಾಡಲಾಗಿದೆ. ಸದರಿಯವರು ದಿನಾಂಕ:30.05.2026 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ನೇಮಕಾತಿಯನ್ನು ಸ್ಥಿರೀಕರಣ ಮಾಡುವ ಬಗ್ಗೆ ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅನುಮೋದನೆಗೆ ಸಲ್ಲಿಸಿದೆ.

:: ನಿರ್ಣಯ ::

ಸರ್ಕಾರದ ನಿಯಮದಡಿ ಪರಿಶೀಲಿಸಿ ಕ್ರಮಕೈಗೊಳ್ಳಲು ಕುಲಪತಿಯವರಿಗೆ ಅಧಿಕಾರ ನೀಡಿ ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

ಹಣಕಾಸು ವಿಭಾಗ – 22	
ವಿಷಯ ಸಂಖ್ಯೆ:	ಸಿ.03(a)/(08/26)

–: ಟಿಪ್ಪಣಿ :–

ವಿಷಯಃ 2024–25ನೇ ಸಾಲಿನ ಲೆಕ್ಕ ಪರಿಶೋಧನ ವರದಿ ಹಾಗೂ ಅನುಸರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.07.2026

****

2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಸರಣಾ ವರದಿಯನ್ನು ಸಿದ್ಧಪಡಿಸಿ, ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಉಲ್ಲೇಖಿತ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ:17.07.2026ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಆದುದರಿಂದ, ಸದರಿ ವಿಷಯವನ್ನು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಗೂ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಸರಣಾ ವರದಿಯನ್ನು ಸಿದ್ಧಪಡಿಸಿ, ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ದಿನಾಂಕ:17.07.2026 ರಂದು ಸರ್ಕಾರಕ್ಕೆ ಸಲ್ಲಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಹಣಕಾಸು ವಿಭಾಗ – 23	
ವಿಷಯ ಸಂಖ್ಯೆ:	ಸಿ೦.03(b)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ವಾರ್ಷಿಕ ಲೆಕ್ಕಪತ್ರ ಹಾಗೂ Balance Sheet ಗಳ ಅನುಮೋದನೆ ಕುರಿತು.

****

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದ್ದು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಸದರಿ ವಿಷಯವನ್ನು ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಹಾಗೂ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಲಾಗಿದೆ.

:: ನಿರ್ಣಯ ::

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 48 ರನ್ವಯ ವಿಶ್ವವಿದ್ಯಾನಿಲಯದ 2025–26ನೇ ಆರ್ಥಿಕ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ನಿಯಮಾನುಸಾರ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಹಣಕಾಸು ವಿಭಾಗ – 24	
ವಿಷಯ ಸಂಖ್ಯೆ:	ಸಿಂ.03(c)/(08/26)

–: ಟಿಪ್ಪಣಿ :–

ವಿಷಯಃ **DISEC ಸಂಬಂಧಿಸಿದಂತೆ ಹೊಸದಾಗಿ ಜಂಟಿ ಉಳಿತಾಯ ಖಾತೆಯನ್ನು ತೆರೆದಿರುವ ಕುರಿತು.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026–27ನೇ ಸಾಲಿನಲ್ಲಿ ನವೀನತೆ, ಇನ್‌ಕ್ಯೂಬೇಷನ್, ಕೌಶಲ್ಯ ಮತ್ತು ಉದ್ಯಮಶೀಲತಾ ಕೇಂದ್ರ Davangere Innovation Incubation Skill and Entrepreneurship Council (DISEC) ಹೆಸರಿನಲ್ಲಿ ಸಂಸ್ಥೆ (Section-8) ಸ್ಥಾಪಿಸಲು ಹಾಗೂ Executive Director, Chief Financial Advisor, ಇವರ ಪದನಾಮದಲ್ಲಿ ಒಂದು ಜಂಟಿ ಉಳಿತಾಯ ಖಾತೆಯನ್ನು ಹೊಸದಾಗಿ ತೆರೆಯುವುದಕ್ಕೆ ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

2026–27ನೇ ಸಾಲಿನಲ್ಲಿ ನವೀನತೆ, ಇನ್‌ಕ್ಯೂಬೇಷನ್, ಕೌಶಲ್ಯ ಮತ್ತು ಉದ್ಯಮಶೀಲತಾ ಕೇಂದ್ರ Davangere Innovation Incubation Skill and Entrepreneurship Council (DISEC) ಹೆಸರಿನಲ್ಲಿ ಸಂಸ್ಥೆ (Section-8) ಸ್ಥಾಪಿಸಲು ಹಾಗೂ Executive Director, Chief Financial Advisor ಇವರ ಪದನಾಮದಲ್ಲಿ ಒಂದು ಜಂಟಿ ಉಳಿತಾಯ ಖಾತೆಯನ್ನು ಹೊಸದಾಗಿ ತೆರೆಯಲು ಸರ್ಕಾರದ ಅನುಮೋದನೆ ಪಡೆದ ನಂತರ ಮುಂದಿನ ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 25	
ವಿಷಯ ಸಂಖ್ಯೆ:	ಸಿ೦.04(a)/(08/26)

–: ಟಿಪ್ಪಣಿ :–

ವಿಷಯಃ **ಲೇಖನಾ ಸಾಮಾಗ್ರಿಗಳ ಮತ್ತು ಮುದ್ರಿತ ಲೇಖನಾ ಸಾಮಗ್ರಿಗಳನ್ನು ಖರೀದಿಸಿರುವ ಬಿಲ್ಲನ್ನು ಪಾವತಿಸಲು ಅನುಮೋದನೆ ನೀಡುವ ಕುರಿತು.**

ಉಲ್ಲೇಖ: 1. ಇ–ಟೆಂಡರ್ ಪ್ರಕಟಣೆ ಸಂ:DU/EV/GSPS/84/2025-26/2659, Date:24.12.2025
2. ಕರಾರು ದರ ಒಪ್ಪಂದ ದಿನಾಂಕ:10.01.2026
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.07.2026

****

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳಿಗೆ ಲೇಖನಾ ಸಾಮಾಗ್ರಿಗಳು ಮತ್ತು ಮುದ್ರಿತ ಲೇಖನಾ ಸಾಮಾಗ್ರಿಗಳನ್ನು ಖರೀದಿಸಲು ಉಲ್ಲೇಖ (2) ರಲ್ಲಿ M/s Kesari Technologies, Davanagere - ಈ ಸಂಸ್ಥೆಯವರೊಂದಿಗೆ ಇ–ಟೆಂಡರ್‌ಗಳ ನಿಯಮಾನುಸಾರ ಒಂದು ವರ್ಷದ ಅವಧಿಗೆ ಕರಾರು ದರ ಒಪ್ಪಂದ ಮಾಡಿಕೊಳ್ಳಲಾಗಿದೆ.

ವಿಶ್ವವಿದ್ಯಾನಿಲಯದ 2025–26ನೇ ಸಾಲಿನ ಪರೀಕ್ಷೆಗಳಿಗೆ ಅಗತ್ಯವಾಗಿ ಬೇಕಾಗಿದ್ದ ಲೇಖನಾ ಸಾಮಾಗ್ರಿಗಳು ಮತ್ತು ಮುದ್ರಿತ ಲೇಖನಾ ಸಾಮಾಗ್ರಿಗಳನ್ನು M/s Kesari Technologies, Davanagere– ಈ ಸಂಸ್ಥೆಯವರಿಂದ ಕರಾರು ದರ ಒಪ್ಪಂದದನ್ವಯ ಖರೀದಿ ಮಾಡಲಾಗಿದೆ. ಈ ಸಂಬಂಧವಾಗಿ, ಸದರಿ ಸಂಸ್ಥೆಯವರು ಖರೀದಿ ಮೊತ್ತ ರೂ.12,95,555–00 ಗಳಿಗೆ (ರೂಪಾಯಿಗಳು ಹನ್ನೆರಡು ಲಕ್ಷದ ತೊಂಬತ್ತೈದು ಸಾವಿರದ ಐದು ನೂರ ಐವತ್ತೈದು ಮಾತ್ರ) ಈ ಕೆಳಕಂಡಂತೆ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ.

Sl. No.	Bill No	Bill Date	Amount
01	002	06.05.2026	12,95,555=00

ಲೇಖನಾ ಸಾಮಾಗ್ರಿಗಳು ಮತ್ತು ಮುದ್ರಿತ ಲೇಖನಾ ಸಾಮಾಗ್ರಿಗಳನ್ನು ಖರೀದಿಸಿದ ಒಟ್ಟು ಬಿಲ್ ಮೊತ್ತ ರೂ.12,95,555–00 ಗಳನ್ನು M/s Kesari Technologies, Davanagere ಈ ಸಂಸ್ಥೆಯವರಿಗೆ ಪಾವತಿ ಮಾಡಲು ದಿನಾಂಕ:31.08.2026 ರಂದು ಏರ್ಪಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ ದಿನಾಂಕ:29.08.2026ರಂದು ಜರುಗಿದ ಉಪಸಮಿತಿ ಸಭಾ ನಡಾವಳಿಯನ್ನು ಸಭೆಯು ಅನುಮೋದಿಸಿತು ಹಾಗೂ 2025–26ನೇ ಶೈಕ್ಷಣಿಕ ಸಾಲಿನ ಪರೀಕ್ಷೆಗಳಿಗೆ ಅಗತ್ಯವಾಗಿ ಬೇಕಾಗಿದ್ದ ಲೇಖನಾ ಸಾಮಾಗ್ರಿಗಳು ಮತ್ತು ಮುದ್ರಿತ ಲೇಖನಾ ಸಾಮಾಗ್ರಿಗಳನ್ನು ಇ–ಟೆಂಡರ್ ಅನ್ವಯ ಕರಾರು ದರ ಒಪ್ಪಂದ ಮಾಡಿಕೊಂಡು ಖರೀದಿಸಲಾದ ಬಿಲ್ಲಿನ ಮೊತ್ತ ರೂ.12,95,555/–ಗಳನ್ನು M/s Kesari Technologies, Davanagere - ಈ ಸಂಸ್ಥೆಯವರಿಗೆ ಪಾವತಿಸಲು ಸಭೆಯು ಅನುಮೋದಿಸಿತು

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 26	
ವಿಷಯ ಸಂಖ್ಯೆ:	ಸಿ.04(b)/(08/26)

–: ಟಿಪ್ಪಣಿ :–

ವಿಷಯಃ **M/s Logisys, Bengaluru – ಈ ಸಂಸ್ಥೆಯವರಿಂದ ಸ್ನಾತಕ / ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾದ ಸೇವಾ ಶುಲ್ಕವನ್ನು ಪಾವತಿಸುವ ಬಗ್ಗೆ.**

ಉಲ್ಲೇಖ: 1. M/s Logisys, Bengaluru– ಈ ಸಂಸ್ಥೆಯವರೊಂದಿಗೆ ಮಾಡಿಕೊಂಡ ಕರಾರು ದರ ಒಪ್ಪಂದ ದಿನಾಂಕ:01.11.2025.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.06.2025.

****

ವಿಶ್ವವಿದ್ಯಾನಿಲಯದಲ್ಲಿ CBCS ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಪರೀಕ್ಷಾ ಕಾರ್ಯಗಳಿಗೆ ಪರೀಕ್ಷಾ ತಂತ್ರಾಂಶ ಸೇವೆ ಪಡೆಯಲು ಉಲ್ಲೇಖ (1)ರಲ್ಲಿ M/s Logisys, Bengaluru – ಈ ಸಂಸ್ಥೆಯವರೊಂದಿಗೆ ಇ-ಟೆಂಡರ್‌ಗಳ ನಿಯಮಗಳನುಸಾರ ಒಂದು ವರ್ಷದ ಅವಧಿಗೆ (ನವಂಬರ್ 2025 ರಿಂದ ಅಕ್ಟೋಬರ್ 2026ರವರೆಗೆ) ಕರಾರು ದರ ಒಪ್ಪಂದ ಅವಧಿಯನ್ನು ಮುಂದುವರೆಸಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಡಿಸೆಂಬರ್–2025, ಜನವರಿ/ಫೆಬ್ರವರಿ–2026ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲಾಗಿದೆ. ಈ ಸಂಬಂಧವಾಗಿ, M/s Logisys, Bengaluru – ಈ ಸಂಸ್ಥೆಯವರು ಪರೀಕ್ಷಾ ತಂತ್ರಾಂಶ ಸೇವೆ ಒದಗಿಸಿದ್ದಕ್ಕಾಗಿ (1ನೇ, 2ನೇ, 3ನೇ ಮತ್ತು ಅಂತಿಮ ಕಂತು) ಈ ಕೆಳಕಂಡಂತೆ ಪರೀಕ್ಷಾ ಸೇವಾ ಶುಲ್ಕ ರೂ.1,28,700=00ಗಳಿಗೆ (ರೂಪಾಯಿ ಒಂದು ಲಕ್ಷದ ಇಪ್ಪತ್ತೆಂಟು ಸಾವಿರದ ಏಳು ನೂರು ಮಾತ್ರ) ಈ ಕೆಳಕಂಡಂತೆ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸಿರುತ್ತಾರೆ.

Sl. No.	Bill No	Bill Date	Amount
1	BN/024/26-27	12.05.2026	38,610=00
2	BN/025/26-27	12.05.2026	38,610=00
3	BN/026/26-27	12.05.2026	38,610=00
4	BN/027/26-27	12.05.2026	12,870=00
		ಒಟ್ಟು ರೂ.	**1,28,700=00**

ಪರೀಕ್ಷಾ ತಂತ್ರಾಂಶ ಸೇವಾ ಶುಲ್ಕ (1ನೇ, 2ನೇ, 3ನೇ ಮತ್ತು ಅಂತಿಮ ಕಂತು) ರೂ.1,28,700=00 ಗಳನ್ನು M/s Logisys, Bengaluru– ಈ ಸಂಸ್ಥೆಯವರಿಗೆ ಪಾವತಿ ಮಾಡಬೇಕಾಗಿರುತ್ತದೆ. ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ ದಿನಾಂಕ:29.08.2026ರಂದು ಜರುಗಿದ ಉಪಸಮಿತಿ ಸಭಾ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಡಿಸಂಬರ್–2025, ಜನವರಿ/ಫೆಬ್ರವರಿ–2026ರ ಮಾಹೆಗಳಲ್ಲಿ ನಡೆಸಲಾದ ವಿವಿಧ ಸ್ನಾತಕ / ಸ್ನಾತಕೋತ್ತರ ಪರೀಕ್ಷೆಗಳಿಗೆ ಕರಾರು ದರ ಒಪ್ಪಂದದಂತೆ ಪರೀಕ್ಷಾ ತಂತ್ರಾಂಶ ಸೇವೆ ಒದಗಿಸಿದ ಬಿಲ್ಲಿನ ಬಾಬ್ತು ರೂ.1,28,700=00ಗಳನ್ನು ನಿಯಮಾನುಸಾರ M/s Logisys, Bengaluru – ಈ ಸಂಸ್ಥೆಯವರಿಗೆ ಪಾವತಿಸಲು ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 27	
ವಿಷಯ ಸಂಖ್ಯೆ:	ಸಿ೦.04(c)/(08/26)

–ಃ ಟಿಪ್ಪಣಿ ಃ–

ವಿಷಯಃ ಖಾಲಿ ಉತ್ತರ ಪತ್ರಿಕೆಗಳನ್ನು ಮುದ್ರಿಸುವ ಸಂಬಂಧ (ಇ–ಪೋರ್ಟಲ್‌ನಲ್ಲಿ) ಟೆಂಡರ್ ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ:DU/2024-25/4676 Dated:26.03.2026
2. M/s. Orient Press Ltd., Bengalore, ಇವರ ಕರಾರು ಒಪ್ಪಂದ ದಿನಾಂಕ:12.05.2025
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.07.2026

****

ವಿಶ್ವವಿದ್ಯಾನಿಲಯದಲ್ಲಿ 2025–26ನೇ ಸಾಲಿನಲ್ಲಿ ನಡೆದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ಖರೀದಿಸಲು ಉಲ್ಲೇಖ (2)ರಲ್ಲಿ M/s Orient Press Ltd., Bangalore - ಈ ಸಂಸ್ಥೆಯವರೊಂದಿಗೆ ಇ–ಟೆಂಡರ್‌ಗಳ ನಿಯಮಗಳನುಸಾರ ಒಂದು ವರ್ಷದ ಅವಧಿಗೆ (ದಿನಾಂಕ:12.05.2025 ರಿಂದ ದಿನಾಂಕ:11.05.2026ರವರೆಗೆ) ಕರಾರು ದರ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸದರಿ ಸಂಸ್ಥೆಯವರೊಂದಿಗೆ ಮಾಡಿಕೊಂಡಿರುವ ದರ ಒಪ್ಪಂದ ಕರಾರ ಅವಧಿಯು ದಿನಾಂಕ:11.05.2026ಕ್ಕೆ ಮುಕ್ತಾಯಗೊಂಡಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ 2026–27ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಖಾಲಿ ಉತ್ತರ ಪತ್ರಿಕೆಗಳು ಅವಶ್ಯಕವಾಗಿ ಬೇಕಾಗಿರುವುದರಿಂದ, ಖಾಲಿ ಉತ್ತರ ಪತ್ರಿಕೆಗಳನ್ನು ಇ–ಟೆಂಡರ್ ಪ್ರಕ್ರಿಯೆಗಳ ಮೂಲಕ ಖರೀದಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸುವ ಸಂಬಂಧ, ನಿಯಮಾನುಸಾರ (ಇ–ಪೋರ್ಟಲ್‌ನಲ್ಲಿ) ಇ–ಟೆಂಡರ್‌ನಲ್ಲಿ ಅರ್ಜಿ ಆಹ್ವಾನಿಸಲು ಹಾಗೂ ಮುಂದಿನ ಸೂಕ್ತ ಕ್ರಮಕೈಗೊಳ್ಳುವ ಕುರಿತು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಹಾಗನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ 2026–27ನೇ ಸಾಲಿನಲ್ಲಿ ಜರುಗಲಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಅವಶ್ಯವಾಗಿ ಬೇಕಾಗಿರುವ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸಲು ನಿಯಮಾನುಸಾರ ಇ–ಟೆಂಡರ್ (ಇ–ಪೋರ್ಟಲ್) ನಲ್ಲಿ ಅರ್ಜಿ ಅಹ್ವಾನಿಸಲು ಸಭೆಯು ನಿರ್ಣಹಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 28	
ವಿಷಯ ಸಂಖ್ಯೆ:	ಸಿಂ.04(d)/(08/26)

–: ಟಿಪ್ಪಣಿ :–

ವಿಷಯಃ **ಪರೀಕ್ಷಾ ಕಾರ್ಯಗಳಿಗೆ ಹೊಸ Tempo Traveler ಖರೀದಿಸಲು ಅನುಮೋದನೆ ನೀಡುವ ಬಗ್ಗೆ.**

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಪಿಡಿ 97 ಪಿಡಿಒ 2023 ಬೆಂಗಳೂರು ದಿನಾಂಕ:12.09.2025

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.07.2026.

****

ಸರ್ಕಾರದ ಉಲ್ಲೇಖ (1)ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆ/ ನಿಗಮ/ ಮಂಡಳಿ/ ನಗರಸಭೆ/ ಸರ್ಕಾರದ ಇತರೆ ಅಧೀನ ಸಂಸ್ಥೆಗಳಿಗೆ ಸೇರಿದ, ನೋಂದಣಿಯಾಗಿ 15 ವರ್ಷಗಳನ್ನು ಮೀರಿದ ವಾಹನಗಳನ್ನು ಕಡ್ಡಾಯವಾಗಿ ರಾಜ್ಯದಲ್ಲಿ ಸ್ಥಾಪಿತವಾಗಿರುವ ನೋಂದಾಯಿತ RVSF (Registered Vehicle Scrapping Policy of Karnataka) ಕೇಂದ್ರಗಳಲ್ಲಿಯೇ ನಾಶಪಡಿಸಲು ಆದೇಶ ಹೊರಡಿಸಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳ ಸಂಬಂಧವಾಗಿ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಖಾಲಿ ಉತ್ತರ ಪತ್ರಿಕೆಗಳು ಮತ್ತು ಮುದ್ರಿತ ಲೇಖನಾ ಸಾಮಾಗ್ರಿಗಳನ್ನು ಸುರಕ್ಷಿತವಾಗಿ ವಿತರಣೆ ಮಾಡಿ ಬರಲು 2010ರಲ್ಲಿ Tempo Traveler (KA-17 B-3599) ವಾಹನವನ್ನು 2010ರಲ್ಲಿ ಖರೀದಿಸಲಾಗಿತ್ತು. ಸದರಿ ವಾಹನವನ್ನು ಖರೀದಿಸಿ ಈಗಾಗಲೇ 15 ವರ್ಷಗಳು ಪೂರ್ಣವಾಗಿರುತ್ತದೆ.

ತತ್ಸಬಂಧವಾಗಿ, ಸರ್ಕಾರದ ಆದೇಶಾನುಸಾರ Tempo Traveler (KA-17 B-3599) ವಾಹನವನ್ನು RVSF ಕೇಂದ್ರದಲ್ಲಿ ನಾಶಗೊಳಿಸಲು ಹಾಗೂ ಪರೀಕ್ಷಾ ಕಾರ್ಯಗಳಿಗೆ ಹೊಸ Tempo Traveler ಅನ್ನು GeM/ ಇ-ಟೆಂಡರ್ ಅಡಿಯಲ್ಲಿ ಖರೀದಿ (ಎಲ್ಲ ತೆರಿಗೆಗಳು & Interior Customization ಸೇರಿ, ಅಂದಾಜು ವೆಚ್ಚ ರೂ.15.00 ಲಕ್ಷಗಳು ತಗಲುಬಹುದಾಗಿದೆ) ಮಾಡುವ ಕುರಿತು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಹೊಸ Tempo Traveler ವಾಹನವನ್ನು ಖರೀದಿಸುವ ಕುರಿತಂತೆ Corporate Social Responsibility (CSR) ಅವರಿಗೆ ಕೋರಲಾಗಿದ್ದು, ಸದರಿಯವರು ನೀಡದೇ ಇದ್ದ ಪಕ್ಷದಲ್ಲಿ ಸರ್ಕಾರಕ್ಕೆ ಪತ್ರಿಸಿ, ಸರ್ಕಾರದ ಅನುಮೋದನೆ ಪಡೆದ ನಂತರ ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಯನುಸಾರ ನಿಯಮಾನುಸಾರ ಖರೀದಿಸಲು ಸಭೆಯು ನಿರ್ಣಹಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 29	
ವಿಷಯ ಸಂಖ್ಯೆ:	ಸಿ.04(e)/(08/26)

–: ಟಿಪ್ಪಣಿ :–

ವಿಷಯಃ ಅನಿಯಮಿತ ಮೌಲ್ಯಮಾಪನದಿಂದ **(Erratic Valuation)** ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿಸಿರುವ ಮರುಮೌಲ್ಯಮಾಪನ ಶುಲ್ಕಗಳನ್ನು ಹಿಂತಿರುಗಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.08.2026.

****

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಕೇಂದ್ರೀಯ ಮೌಲ್ಯಮಾಪನ ಕಾರ್ಯ ನಡೆಸಿ, ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶಗಳನ್ನು ಪರೀಕ್ಷಾ ತಂತ್ರಾಂಶದಲ್ಲಿ ಪ್ರಕಟಿಸಲಾಗುತ್ತಿದೆ. ತದನಂತರ, ವಿದ್ಯಾರ್ಥಿಗಳ ಕುಂದು–ಕೊರತೆ ಪರಿಹಾರಕ್ಕಾಗಿ ವಿದ್ಯಾರ್ಥಿಗಳು ನಿಯಮಾನುಸಾರ ಉತ್ತರ ಪತ್ರಿಕೆಗಳ ಅಂಕಗಳ ಮರು ಸಂಕಲನ / ಜೆರಾಕ್ಸ್ ಪ್ರತಿ ಪಡೆಯಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಅವಕಾಶ ಪರೀಕ್ಷಾ ವ್ಯವಸ್ಥೆಯಲ್ಲಿದೆ.

ಆದರೆ, ಉತ್ತರ ಪತ್ರಿಕೆಗಳ ಅನಿಯಮಿತ ಮೌಲ್ಯಮಾಪನ (Erratic Valuation), ಅಂಕಗಳ ಮರು ಸಂಕಲನದಿಂದ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳಿಗಿಂತ ಶೇಕಡ 15ರಷ್ಟು ಹಾಗೂ ಹೆಚ್ಚು ಅಂಕಗಳ ವ್ಯತ್ಯಾಸಗಳಿದ್ದಲ್ಲಿ, ಕೆಲ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿ ಮಾಡಿದ ಶುಲ್ಕಗಳನ್ನು ಹಿಂದಿರುಗಿಸಲು ಮನವಿ ಸಲ್ಲಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ Ordinance ಪ್ರಕಾರ Erratic Valuation ಮಾಡುವ ಅಧ್ಯಾಪಕರುಗಳಿಗೆ ರೂ.5,000/-ಗಳ ದಂಡ ವಿಧಿಸಲು ಅವಕಾಶವಿರುತ್ತದೆ.

ಅಧ್ಯಾಪಕರುಗಳಿಂದ ಸಂಗ್ರಹಿಸುವ ದಂಡ ಶುಲ್ಕದಲ್ಲಿ ವಿದ್ಯಾರ್ಥಿಗಳ ಮರು ಮೌಲ್ಯಮಾಪನ ಅಂಕಗಳ ಮರುಸಂಕಲನಗಳ ಶುಲ್ಕಗಳನ್ನು ಶುಲ್ಕ ಹಿಂದಿರುಗಿಸುವ ಬಗ್ಗೆ ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿರುತ್ತದೆ. ಈ ಕುರಿತು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯ/ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ ವಿವಿಧ ಪದವಿ ಪರೀಕ್ಷೆಗಳ ಪರೀಕ್ಷಾ ಫಲಿತಾಂಶಗಳನ್ನು ಪ್ರಕಟಿಸಿದ ನಂತರದಲ್ಲಿ ವಿದ್ಯಾರ್ಥಿಗಳು ನಿಯಮಾನುಸಾರ ಮರುಮೌಲ್ಯಮಾಪನಕ್ಕೆ ಆನ್‌ಲೈನ್ ಮೂಲಕ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದಂತಹ ಸಂದರ್ಭದಲ್ಲಿ ಉತ್ತರ ಪತ್ರಿಕೆಗಳ ಅನಿಯಮಿತ ಮೌಲ್ಯಮಾಪನದಿಂದಾಗಿ (Erratic Valuation) ವಿದ್ಯಾರ್ಥಿಗಳು ಗಳಿಸಿದ ಅಂಕಗಳಿಗಿಂತ ಶೇಕಡ 15 ಅಥವಾ ಅದಕ್ಕಿಂತ ಹೆಚ್ಚು ಅಂಕಗಳ ವ್ಯತ್ಯಾಸಗಳು ಕಂಡು ಬಂದಲ್ಲಿ, ವಿಶ್ವವಿದ್ಯಾನಿಲಯದ Ordinance ಪ್ರಕಾರ Erratic Valuation ಮಾಡುವ ಅಧ್ಯಾಪಕರುಗಳಿಗೆ ರೂ.5,000/-ಗಳ ದಂಡ ವಿಧಿಸಲು ಹಾಗೂ ಅಧ್ಯಾಪಕರುಗಳಿಂದ ಸಂಗ್ರಹಿಸುವ ದಂಡ ಶುಲ್ಕದಲ್ಲಿ ವಿದ್ಯಾರ್ಥಿಗಳು ಪಾವತಿಸಿರುವ ಶುಲ್ಕಗಳನ್ನು ನಿಯಮಾನುಸಾರ ಹಿಂದಿರುಗಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 30	
ವಿಷಯ ಸಂಖ್ಯೆ:	ಸಿ.04(f)/(08/26)

–: ಟಿಪ್ಪಣಿ :–

ವಿಷಯ ಪರೀಕ್ಷಾಂಗ ವಿಭಾಗಕ್ಕೆ ಕಂಪ್ಯೂಟರ್/ಪರಿಕರಗಳನ್ನು ಖರೀದಿಸುವ ಕುರಿತು.

ಉಲ್ಲೇಖ: 1. ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ:29.10.2025
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.08.2026.

****

ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಪರೀಕ್ಷೆಗಳ ಭದ್ರತೆ / ನಿರ್ವಹಣೆ ದೃಷ್ಟಿಯಿಂದ ಈ ಕೆಳಕಂಡ ಕಂಪ್ಯೂಟರ್/ಪರಿಕರಗಳು ಅವಶ್ಯಕವಾಗಿ ಬೇಕಾಗಿರುತ್ತವೆ. ಸದರಿ ಸಾಮಾಗ್ರಿಗಳನ್ನು ಖರೀದಿಸಲು ತಗಲುವ ವೆಚ್ಚ ರೂ.12.00 ಲಕ್ಷಗಳು ಎಂದು ಅಂದಾಜಿಸಲಾಗಿದೆ. ಆದುದರಿಂದ ಸದರಿ ಕಂಪ್ಯೂಟರ್/ ಪರಿಕರಗಳನ್ನು ನಿಯಮಾನುಸಾರ ಖರೀದಿಸಲು ಕ್ರಮಕೈಗೊಳ್ಳಬೇಕಾಗಿರುತ್ತದೆ.

ಕ್ರ ಸಂ.	ವಿವರ	ಪ್ರಮಾಣ
1.	Desktop Computer Specifications: Intel Core i5 (12th/13th Gen), 16 GB RAM (DDR4), 512GB SSD, 19.5" Monitor, Wired KB+Mouse, Windows 11 Professional version OEM, MS Office 2024	05
2.	Laptop Specifications: CPU Model Intel Core i5 13th Generation, Hard Disk Size 512 GB SSD, RAM Memory Installed Size 16 GB, Operating System Windows 11 Home, Preinstalled Software: Windows 11 Professional version OEM, MS Office 2024	01
3.	Central Storage Server (NAS) Specifications: Synology DS923+ / QNAP TS-473A, 4-bay, expandable RAM, storage	01
4.	External SSD Specifications: 2TB SSD	02
5.	Multifunction Network Printer Specifications: HP LaserJet Pro 4104dw (Print/Scan/Copy, Duplex, Wi-Fi + LAN)	01
6.	Networking Specifications: 24-port Gigabit Switch + LAN cabling + Wi-Fi Access Point	01
7.	Installation, Networking Setup, OS/Software Config	All Set
8.	Barcode Sticker Printer	01
9.	High speed Scanner	01

ತತ್ಸಂಬಂಧವಾಗಿ, ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿ ಬೇಕಾಗಿರುವ ಮೇಲ್ಕಂಡ ಕಂಪ್ಯೂಟರ್/ಪರಿಕರಗಳನ್ನು GeM/ ಕೆ.ಟಿ.ಟಿ.ಪಿ ನಿಯಮಾನುಸಾರ ಖರೀದಿಸುವ ಕುರಿತು ಈ ವಿಷಯವನ್ನು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಪರೀಕ್ಷೆಗಳ ಭದ್ರತೆ / ನಿರ್ವಹಣೆ ದೃಷ್ಟಿಯಿಂದ ಈ ಮೇಲ್ಕಂಡ ಕಂಪ್ಯೂಟರ್ ಹಾಗೂ ಇತರೆ ಪರಿಕರಗಳನ್ನು ಖರೀದಿಸಲು ತಗಲುವ ಅಂದಾಜು ವೆಚ್ಚ ರೂ.12.00 ಲಕ್ಷಗಳ ಮಿತಿಯೊಳಗೆ KTTP/GeM ಮುಖಾಂತರ ಖರೀದಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 31	
ವಿಷಯ ಸಂಖ್ಯೆ:	ಸಿಂ.04(g)/(08/26)

–: ಟಿಪ್ಪಣಿ :–

ವಿಷಯ **ದಿನಾಂಕ:25.08.2026ರಂದು ಜರುಗಿದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

ಉಲ್ಲೇಖ: 1. ಸಂಖ್ಯೆ:ದಾವಿ:ಪವಿ:ಎಂಪಿಐಸಿ:(23):2026–27/1787 ದಿನಾಂಕ:18.08.2026
2. ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/161/2026–27/2164 ದಿನಾಂಕ:06.08.2026
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29.08.2026.

****

ಉಲ್ಲೇಖಿತ (1)ರ ಪತ್ರದಲ್ಲಿ, ಮೇ/ಜೂನ್–2026ರ ಮಾಹೆಗಳಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜರುಗಿದ ಸ್ನಾತಕ ಮತ್ತು ಬಿ.ಇಡಿ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳನ್ನು ತನಿಖೆ/ವಿಚಾರಣೆ ನಡೆಸುವ ಸಂಬಂಧವಾಗಿ ದಿನಾಂಕ:25.08.2026ರಂದು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ" ಸಭೆಯನ್ನು ಏರ್ಪಡಿಸಲಾಗಿತ್ತು.

ಸದರಿ ಸಭೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಎಸಗಿರುವ ಅಕ್ರಮಗಳ ತೀವ್ರತೆಯ ಮೇರೆಗೆ ತನಿಖೆ/ವಿಚಾರಣೆ ನಡೆಸಿ, ಸಭೆಯಲ್ಲಿ ಕೂಲಂಕುಷವಾಗಿ ಚರ್ಚೆ ನಡೆಸಿದ ಬಳಿಕ ಸಮಿತಿಯು ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕ:25.08.2026ರಂದು ನಡೆದ ಪರೀಕ್ಷಾ ಅಕ್ರಮಗಳ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ ಸಭೆಯ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿ, ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 32	
ವಿಷಯ ಸಂಖ್ಯೆ:	ಸಿಂ.05(a)/(08/26)

–ಃ ಟಿಪ್ಪಣಿ ಃ–

ವಿಷಯಃ **ಹಣಕಾಸು ವಿಭಾಗಕ್ಕೆ ಹಾಗೂ ಸ್ನಾತಕೋತ್ತರ ಯೋಗವಿಜ್ಞಾನ ಅಧ್ಯಯನ ವಿಭಾಗಕ್ಕೆ ಬೇಕಾಗಿರುವ ಯಂತ್ರೋಪಕರಣಗಳನ್ನು ಖರೀದಿಸುವ ಬಗ್ಗೆ.**

ಉಲ್ಲೇಖ: 1. ಪತ್ರ ಸಂಖ್ಯೆ: ದಾವಿವಿ:ಹವಿ–1:2026–27/140 ದಿನಾಂಕ:14.06.2026
2. ಪತ್ರ ಸಂಖ್ಯೆ:ದಾವಿವಿ:ಯೋವಿ:2026–27/120 ದಿನಾಂಕ:02.07.2026
3. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:06.08.2026

****

ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ – ಇವರು ವಿಭಾಗದಲ್ಲಿರುವ ಜೆರಾಕ್ಸ್ ಮಷಿನ್ ದುರಸ್ಥಿಗೆ ಬಂದಿದ್ದು, ದೈನಂದಿನ ಚಟುವಟಿಕೆಗಳಿಗೆ ತುಂಬಾ ತೊಂದರೆಯಾಗುತ್ತಿರುವುದರಿಂದ ಹಣಕಾಸು ವಿಭಾಗಕ್ಕೆ ಹೊಸದಾಗಿ 01 ಜೆರಾಕ್ಸ್ ಯಂತ್ರವನ್ನು ಖರೀದಿಸಿ ಒದಗಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ.

ಹಾಗೂ ವಿಭಾಗಾಧ್ಯಕ್ಷರು, ಯೋಗವಿಜ್ಞಾನ ಅಧ್ಯಯನ ವಿಭಾಗ ಇವರು ಕಛೇರಿ ಕೆಲಸಗಳಿಗೆ 01 ಪ್ರಿಂಟರ್ ಖರೀದಿಸಿ ಒದಗಿಸುವಂತೆ ಉಲ್ಲೇಖ(2)ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಯಂತ್ರೋಪಕರಣಗಳನ್ನು ಎರಡು ವಿಭಾಗಗಳಿಗೆ ಖರೀದಿಸಲು ಖರ್ಚಾಗುವ ಅಂದಾಜು ಒಟ್ಟು ಮೊತ್ತ ರೂ.5.00ಲಕ್ಷದ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗಕ್ಕೆ 01 ಜೆರಾಕ್ಸ್ ಯಂತ್ರವನ್ನು ಹಾಗೂ ಸ್ನಾತಕೋತ್ತರ ಯೋಗ ವಿಜ್ಞಾನ ಅಧ್ಯಯನ ವಿಭಾಗಕ್ಕೆ 01 ಪ್ರಿಂಟರ್‌ನ್ನು ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಗುಣವಾಗಿ ಅಂದಾಜು ಮೊತ್ತ 5.00 ಲಕ್ಷದ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಆದಾರದ ಮೇಲೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 33	
ವಿಷಯ ಸಂಖ್ಯೆ:	ಸಿಂ.05(b)/(08/26)

–ಃ ಟಿಪ್ಪಣಿ ಃ–

ವಿಷಯಃ **ವಿಶ್ವವಿದ್ಯಾನಿಲಯದ 2026–27ನೇ ಸಾಲಿಗೆ ಲೇಖನಾ ಸಾಮಗ್ರಿ ಹಾಗೂ ಸ್ವಚ್ಛತಾ ಸಾಮಗ್ರಿಗಳ ಟೆಂಡರ್ ಕರೆಯಲು ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ06.08.2026

****

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಅವಶ್ಯಕವಿರುವ ಲೇಖನಾ ಸಾಮಗ್ರಿ ರೂ.15,00,000=00 ಮತ್ತು ಸ್ವಚ್ಛತಾ ಸಾಮಗ್ರಿ ರೂ.10,00,000=00 ಗಳಿಗೆ ಖರೀದಿಸಲು ಒಟ್ಟು ರೂ.25,00,000/– ಗಳ ಇ–ಟೆಂಡರ್ ಕರೆಯುವ ಸಂಬಂಧ ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳು, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಹಾಗೂ ದೃಶ್ಯಕಲಾ ಮಹಾವಿದ್ಯಾಲಯಕ್ಕೆ ಅವಶ್ಯವಿರುವ ಲೇಖನಾ ಸಾಮಗ್ರಿ ರೂ.15,00,000=00 ಮತ್ತು ಸ್ವಚ್ಛತಾ ಸಾಮಗ್ರಿ ರೂ.10,00,000=00 ಗಳಿಗೆ (ಒಟ್ಟು ರೂ.25,00,000/–) ಪ್ರತ್ಯೇಕವಾಗಿ ನಿಯಮಾನುಸಾರ ಇ–ಟೆಂಡರ್ ಕರೆಯಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 34	
ವಿಷಯ ಸಂಖ್ಯೆ:	ಸಿ೦.05(c)/(08/26)

–ಃ ಟಿಪ್ಪಣಿ ಃ–

ವಿಷಯಃ **2026–27ನೇ ಸಾಲಿಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಟೆಂಡರ್ ಕರೆಯಲು ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ06.08.2026

****

ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ಘಟಕ ಕಾಲೇಜುಗಳಿಗೆ ಬೇಕಾಗಿರುವ ವಿವಿಧ ವೃಂದದ ಹುದ್ದೆಗಳಿಗೆ – ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಇ–ಟೆಂಡರ್ ಮೂಲಕ ಮೆ: ಬಿ.ಕೆ.ಆರ್. ಸರ್ವಿಸಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರಿಂದ ದಿನಾಂಕ:01.09.2025 ರಿಂದ ದಿನಾಂಕ:31.08.2026 ರ ವರೆಗೆ ಕರಾರು ಒಪ್ಪಂದದ ಮೂಲಕ ಸೇವೆಯನ್ನು ಪಡೆಯಲಾಗಿತ್ತು.

ಆದರೆ, ಸದರಿ ಟೆಂಡರ್ ಅವಧಿಯು 31.08.2026ಕ್ಕೆ ಮುಕ್ತಾಯಗೊಳ್ಳುವುದರಿಂದ, 2026–27ನೇ ಸಾಲಿಗೆ ಇ–ಟೆಂಡರ್ ಆಹ್ವಾನಿಸಿ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಹಾಗೂ ಘಟಕ ಕಾಲೇಜುಗಳಿಗೆ ಬೇಕಾಗಿರುವ ವಿವಿಧ ವೃಂದದ ಹುದ್ದೆಗಳಿಗೆ – ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಈ ಕೆಳಕಂಡಂತೆ 2 ಭಾಗಗಳಾಗಿ ವಿಂಗಡಣೆ ಮಾಡಿ ನಿಯಮಾನುಸಾರ ಇ–ಟೆಂಡರ್ ಕರೆಯಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

1. ಗ್ರೂಪ್ 'ಸಿ', ಸೆಕ್ಯೂರಿಟಿ ಹಾಗೂ ಇತರೆ.
2. ಗ್ರೂಪ್ 'ಡಿ' ಹಾಗೂ ಇತರೆ.

ಮುಂದುವರೆದು, ಸದರಿ ಇ–ಟೆಂಡರ್ ಪ್ರಕ್ರಿಯೆ ಕಾರ್ಯಗಳು ಮುಕ್ತಾಯಗೊಳ್ಳುವವರೆಗೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಟೆಂಡರ್‌ದಾರರಾದ ಬಿ.ಕೆ.ಆರ್. ಸರ್ವಿಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರನ್ನು ನಿಯಮಾನುಸಾರ ಮುಂದುವರೆಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 35	
ವಿಷಯ ಸಂಖ್ಯೆ:	ಸಿ೦.05(d)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿದ್ಯಾರ್ಥಿನಿಲಯಗಳ ಮೆಸ್, ಕ್ಯಾಂಟೀನ್, ಜೆರಾಕ್ಸ್ ಮತ್ತು ಫ್ರೂಟ್ಸ್ ಜ್ಯೂಸ್ ಸ್ಟಾಲ್ ಮಳಿಗೆಗಳಿಗೆ ಬಾಡಿಗೆ ಆಧಾರದ ಮೇಲೆ ಟೆಂಡರ್ ಕರೆದಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಪುರುಷ/ಮಹಿಳಾ ವಿದ್ಯಾರ್ಥಿ ನಿಲಯಗಳಿಗೆ ಮೆಸ್ ನಡೆಸಲು ಹಾಗೂ ಕ್ಯಾಂಟಿನ್/ ಜೆರಾಕ್ಸ್ ಮಳಿಗೆ / ಜ್ಯೂಸ್ ಸ್ಟಾಲ್ / ಸ್ಟೇಷನರಿ ಮಳಿಗೆಗಳಿಗೆ ಬಾಡಿಗೆ ಆಧಾರದ ಮೇಲೆ ಟೆಂಡರ್ ಆಹ್ವಾನಿಸಿರುವುದಕ್ಕೆ ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಪುರುಷ/ಮಹಿಳಾ ವಿದ್ಯಾರ್ಥಿ ನಿಲಯಗಳಿಗೆ ಮೆಸ್ ನಡೆಸಲು ಹಾಗೂ ಕ್ಯಾಂಟಿನ್/ ಜೆರಾಕ್ಸ್ ಮಳಿಗೆ / ಜ್ಯೂಸ್ ಸ್ಟಾಲ್ / ಸ್ಟೇಷನರಿ ಮಳಿಗೆಗಳಿಗೆ ಬಾಡಿಗೆ ಆಧಾರದ ಮೇಲೆ ನಿಯಮಾನುಸಾರ ಟೆಂಡರ್ ಆಹ್ವಾನಿಸಿರುವುದಕ್ಕೆ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 36	
ವಿಷಯ ಸಂಖ್ಯೆ:	ಸಿ೦.05(e)/(08/26)

–ಃ ಟಿಪ್ಪಣಿ ಃ–

ವಿಷಯಃ **ಸ್ನಾತಕೋತ್ತರ ಕೇಂದ್ರ ಜ್ಞಾನಗಂಗೋತ್ರಿ, ಚಿತ್ರದುರ್ಗ ಗ್ರಂಥಾಲಯಕ್ಕೆ ಬೇಕಾಗಿರುವ ಪೀಠೋಪಕರಣಗಳನ್ನು ಖರೀದಿಸುವ ಕುರಿತು.**

ಉಲ್ಲೇಖಃ 1. ಪತ್ರ ಸಂಖ್ಯೆ: ದಾವಿವಿ:ಸ್ನಾಕೇಚಿ/ಗ್ರಂಥ/2026–27 ದಿನಾಂಕ:04.05.2026

2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:06.08.2026

****

ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ ಚಿತ್ರದುರ್ಗ – ಇವರು ಉಲ್ಲೇಖ(1)ರ ಪತ್ರದಲ್ಲಿ ಸ್ನಾತಕೋತ್ತರ ಕೇಂದ್ರ ಜ್ಞಾನಗಂಗೋತ್ರಿ ಚಿತ್ರದುರ್ಗ ಇಲ್ಲಿನ ಗ್ರಂಥಾಲಯ ವಿಭಾಗಕ್ಕೆ ಪುಸ್ತಕಗಳನ್ನು ಜೋಡಿಸಲು ರ್ಯಾಕ್‌ಗಳು, ಕಂಪ್ಯೂಟರ್, ಸಿ.ಸಿ ಕ್ಯಾಮರಾಗಳನ್ನು ಒದಗಿಸಬೇಕೆಂದು ಕೋರಿರುತ್ತಾರೆ.

ಅಂದಾಜು ಮೊತ್ತ ರೂ.5.00ಲಕ್ಷದ ಮಿತಿಯೊಳಗೆ ಚಿತ್ರದುರ್ಗ ಗ್ರಂಥಾಲಯಕ್ಕೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ – ಇಲ್ಲಿನ ಗ್ರಂಥಾಲಯದ ಪುಸ್ತಕಗಳನ್ನು ಹೊಂದಿಸಲು ಅವಶ್ಯವಿರುವ ರ್ಯಾಕ್‌ಗಳು, ಕಂಪ್ಯೂಟರ್–1, ಸಿ.ಸಿ ಕ್ಯಾಮರಾಗಳನ್ನು ವಿಶ್ವವಿದ್ಯಾನಿಲಯದ ಹಣಕಾಸಿನ ಲಭ್ಯತೆಗನುಗುಣವಾಗಿ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 37	
ವಿಷಯ ಸಂಖ್ಯೆ:	ಸಿಂ.05(f)/(08/26)

–ಃ ಟಿಪ್ಪಣಿ ಃ–

ವಿಷಯಃ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಕ್ಕೆ ಪೀಠೋಪಕರಣಗಳನ್ನು ಖರೀದಿಸುವ ಕುರಿತು.

ಉಲ್ಲೇಖ: 1. ಪತ್ರ ಸಂಖ್ಯೆ: ದಾವಿವಿ:ಶಿವಿ:2026–27/35
ದಿನಾಂಕ:02.06.2026
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:06.08.2026

****

ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಇವರು ವಿಭಾಗದಲ್ಲಿ ಎಂ.ಇಡಿ, ಪ್ರಥಮ ವರ್ಷದಲ್ಲಿ 20 ವಿದ್ಯಾರ್ಥಿಗಳು, ದ್ವಿತೀಯ ವರ್ಷದಲ್ಲಿ 17 ವಿದ್ಯಾರ್ಥಿಗಳು ಮತ್ತು 16 ಪಿಹೆಚ್.ಡಿ ವಿದ್ಯಾರ್ಥಿಗಳು ಸಂಶೋಧನೆ ಕೈಗೊಂಡಿರುತ್ತಾರೆ. ವಿಭಾಗಕ್ಕೆ ಅಗತ್ಯವಾಗಿ ಬೇಕಾಗಿರುವ ಈ ಕೆಳಕಂಡ ಪೀಠೋಪಕರಣಗಳನ್ನು ಒದಗಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ.

ಕ್ರ.ಸಂ	ವಿವರ	ಸಂಖ್ಯೆ
1	ಮುಖ್ಯಸ್ಥರ ಟೇಬಲ್	01
2	ತರಗತಿಗಳಿಗೆ ಫ್ಯಾನ್	01
3	ಎಲ್.ಸಿ.ಡಿ ಪ್ರಾಜೆಕ್ಟರ್	01
4	ಯು.ಪಿ.ಎಸ್ ಸೆಟ್	01
5	ಕಂಪ್ಯೂಟರ್	03
6	ಕಚೇರಿ ಟೇಬಲ್	01

ಮೇಲ್ಕಂಡ ಪೀಠೋಪಕರಣಗಳನ್ನು/ಯಂತ್ರೋಪಕರಣಗಳನ್ನು ಖರೀದಿಸಲು ಬೇಕಾಗಿರುವ ಅಂದಾಜು ಮೊತ್ತ ರೂ.5.00ಲಕ್ಷಗಳ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ದಿನಾಂಕ:31.08.2026ರಂದು ನಡೆಯುವ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಕ್ಕೆ ಅವಶ್ಯವಿರುವ ಈ ಮೇಲ್ಕಂಡ ಪಟ್ಟಿಯಲ್ಲಿನ ಪೀಠೋಪಕರಣಗಳು/ಯಂತ್ರೋಪಕರಣಗಳನ್ನು ವಿಶ್ವವಿದ್ಯಾನಿಲಯದ ಹಣಕಾಸಿನ ಲಭ್ಯತೆಗನುಗುಣವಾಗಿ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 38	
ವಿಷಯ ಸಂಖ್ಯೆ:	ಸಿ.05(g)/(08/26)

–ಃ ಟಿಪ್ಪಣಿ ಃ–

ವಿಷಯಃ **2026–27ನೇ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಕೆಮಿಕಲ್ಸ್/ಗ್ಲಾಸವೇರ್ಸ್/ಸಣ್ಣ ಉಪಕರಣಗಳನ್ನು ದರ ಒಪ್ಪಂದದಡಿಯಲ್ಲಿ ಖರೀದಿಸಲು ಟೆಂಡರ್ ಕರೆಯಲು ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ06.08.2026

****

ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳ ಪ್ರಯೋಗಶಾಲೆಗಳಿಗೆ ಕೆಮಿಕಲ್ಸ್ / ಗ್ಲಾಸವೇರ್ಸ್ / ಸಣ್ಣ ಉಪಕರಣಗಳನ್ನು ದರ ಒಪ್ಪಂದದಡಿಯಲ್ಲಿ ನಿಯಮಾನುಸಾರ ಖರೀದಿಸಲು ಅಂದಾಜು ಮೊತ್ತ ರೂ.42.00 ಲಕ್ಷಗಳಿಗೆ ಇ–ಟೆಂಡರ್ ಆಹ್ವಾನಿಸುವ ಕುರಿತು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ವಿದ್ಯಾರ್ಥಿಗಳ ಪ್ರಯೋಗಶಾಲೆಗಳಿಗೆ ಕೆಮಿಕಲ್ಸ್ / ಗ್ಲಾಸವೇರ್ಸ್ / ಸಣ್ಣ ಉಪಕರಣಗಳನ್ನು ದರ ಒಪ್ಪಂದದಡಿಯಲ್ಲಿ ಇ–ಟೆಂಡರ್ ಆಹ್ವಾನಿಸಿ ನಿಯಮಾನುಸಾರ ಖರೀದಿಸಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 39	
ವಿಷಯ ಸಂಖ್ಯೆ:	ಸಿಂ.05(h)/(08/26)

–: ಟಿಪ್ಪಣಿ :–

ವಿಷಯಃ ಸಿಂಡಿಕೇಟ್ ಅನುಮೋದನೆ ಪಡೆದಿರುವುದಕ್ಕಿಂತ ಹೆಚ್ಚುವರಿಯಾಗಿ 2025–26ನೇ ಸಾಲಿನಲ್ಲಿ ಟೆಂಡರ್ ಮೂಲಕ ಲೇಖನಾ ಸಾಮಗ್ರಿಗಳನ್ನು ಖರೀದಿಸಿರುವ ಮೊತ್ತ ರೂ.2,54,893/– ಗಳನ್ನು ಪಾವತಿಗೆ ಅನುಮೋದನೆ ನೀಡುವ ಕುರಿತು.

****

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ AAA ಕಮಿಟಿ ಬಂದಿದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನಾ ಸಾಮಾಗ್ರಿಗಳನ್ನು ರೂ.15,00,000/– ಮಿತಿಯೊಳಗೆ ಟೆಂಡರ್ ಮೂಲಕ ಖರೀದಿಸಲು ಸಿಂಡಿಕೇಟ್ ಸಭೆ ದಿನಾಂಕ:21.01.2025ರಂದು ಅನುಮೋದನೆ ಪಡೆಯಲಾಗಿತ್ತು.

ಮುಂದುವರೆದು, ದಿನಾಂಕ:02.06.2025 ರಂದು ನಡೆದ ಟೆಂಡರ್‌ನಲ್ಲಿ ಆಯ್ಕೆಯಾದ ಮೆ॥ ಎಸ್.ಜೆ. ಎಂಟರ್ ಪ್ರೈಸಸ್, ದಾವಣಗೆರೆ ಇವರಿಂದ ಖರೀದಿಸುವುದಕ್ಕೆ ಸಿಂಡಿಕೇಟ್ ದಿನಾಂಕ:04.07.2025ರಲ್ಲಿ ಅನುಮೋದನೆ ನೀಡಿದೆ.

ಆದರೆ, ಈಗಾಗಲೇ ಸಿಂಡಿಕೇಟ್ ಅನುಮೋದನೆ ಪಡೆದ ಮೊತ್ತ ರೂ.15,00,000/–ಗಳಿಗೆ ಲೇಖನಾ ಸಾಮಾಗ್ರಿಗಳನ್ನು ಖರೀದಿ ಮಾಡಿ ಮೆ॥ ಎಸ್.ಜೆ. ಎಂಟರ್ ಪ್ರೈಸಸ್ ದಾವಣಗೆರೆ ಸಂಸ್ಥೆಯವರಿಗೆ ಪಾವತಿ ಮಾಡಲಾಗಿದೆ. 2026–27ನೇ ಸಾಲಿನ ಆಯವ್ಯಯದಲ್ಲಿ ನಿಗಧಿಯಾಗಿರುವ ಅನುದಾನದ ಮೀತಿಯಲ್ಲಿಯೇ, ಈ ಹೆಚ್ಚುವರಿಯಾಗಿ ಲೇಖನಾ ಸಾಮಾಗ್ರಿಗಳನ್ನು ಖರೀದಿ ಮಾಡಿದ ಮೊತ್ತ ರೂ.2,54,893/–ಗಳನ್ನು ಸದರಿ ಸಂಸ್ಥೆಯವರಿಗೆ ಪಾವತಿಗೆ ದಿನಾಂಕ:31.08.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದ ಕಛೇರಿಗಳಿಗೆ, ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಹಾಗೂ AAA ಕಮಿಟಿಯು ವಿಶ್ವವಿದ್ಯಾನಿಲಯಕ್ಕೆ ಆಗಮಿಸಿದ ಹಿನ್ನೆಲೆಯಲ್ಲಿ ಸಿಂಡಿಕೇಟ್ ಅನುಮೋದನೆ ಪಡೆದ ರೂ.15,00,000/– ಮೊತ್ತಕ್ಕಿಂತ ಹೆಚ್ಚುವರಿಯಾಗಿ ಲೇಖನಾ ಸಾಮಾಗ್ರಿಗಳನ್ನು ಖರೀದಿಸಲಾದ ಮೊತ್ತ.2,54,893/– ಗಳ ಪಾವತಿಗೆ ಸಂಬಂಧಪಟ್ಟಂತೆ ಸಿಂಡಿಕೇಟ್ ಸದಸ್ಯನ್ನೊಳಗೊಂಡಂತೆ ಸಮಿತಿ ರಚಿಸಿ, ಸಮಿತಿಯು ಪರಿಶೀಲಿಸಿ ನೀಡಿದ ವರದಿಯನ್ವಯ ಮುಂದಿನ ಕ್ರಮವಹಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 40	
ವಿಷಯ ಸಂಖ್ಯೆ:	ಸಿಂ.05(i)/(08/26)

–ಃ ಟಿಪ್ಪಣಿ ಃ–

ವಿಷಯಃ **ವಿಶ್ವವಿದ್ಯಾನಿಲಯದ ಆವರಣದಲ್ಲಿ 'ನಂದಿನಿ ಮಿಲ್ಕ ಪಾರ್ಲರ್' ಪ್ರಾರಂಭಿಸಲು ಖಾಲಿ ನಿವೇಶನ ನೀಡಲು ಅನುಮೋದನೆ ನೀಡುವ ಕುರಿತು.**

ಉಲ್ಲೇಖ: 1. ಪತ್ರಸಂಖ್ಯೆ:ಶಿವದಾಚಿಹಾಒ/ಮಾರುಕಟ್ಟೆ/ನಿ.ಮ:4942/2025–26 ದಿನಾಂಕ:05.12.2025

2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:10.08.2026

****

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಕ್ಯಾಂಪಸ್‌ನಲ್ಲಿ **'ನಂದಿನಿ ಮಿಲ್ಕ ಪಾರ್ಲರ್'** ಮಳಿಗೆ ಪ್ರಾರಂಭಿಸಲು 20x20 ಅಡಿ ಅಳತೆಯ ಖಾಲಿ ಸ್ಥಳವನ್ನು ಒದಗಿಸುವಂತೆ **ವ್ಯವಸ್ಥಾಪಕ ನಿರ್ದೇಶಕರು,** ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತ, ಮಾಚೇನಹಳ್ಳಿ, ಶಿವಮೊಗ್ಗ – 577222 ಇವರು ಕೋರಿರುತ್ತಾರೆ. ತತ್ಸಂಬಂಧ, ವಿಶ್ವವಿದ್ಯಾನಿಲಯವು ನಿಗದಿಪಡಿಸುವ ಬಾಡಿಗೆ ಹಾಗೂ ಷರತ್ತು/ನಿಬಂಧನೆಗಳಿಗೆ ಒಳಪಟ್ಟು, ನಿಯತಕಾಲಿಕ ನವೀಕರಣದ ಷರತ್ತಿನೊಂದಿಗೆ ಕೋರಲಾದ ಅಳತೆಯ ಖಾಲಿ ನಿವೇಶನವನ್ನು ಒದಗಿಸುವ ಕುರಿತು ದಿನಾಂಕ:31.08.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿಯಮಿತ, ಮಾಚೇನಹಳ್ಳಿ, ಶಿವಮೊಗ್ಗ – ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ ಒಳಭಾಗದಲ್ಲಿ 'ನಂದಿನಿ ಮಿಲ್ಕ್ ಪಾರ್ಲರ್' ಮಳಿಗೆಯನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯ ನಿಗದಿಪಡಿಸುವ ಷರತ್ತು/ನಿಬಂಧನೆಗೊಳಪಟ್ಟು ನಿಯಮಾನುಸಾರ ಕರಾರು ಒಪ್ಪಂದ ಮಾಡಿಕೊಂಡು 20X20 ಅಡಿ ಅಳತೆಯ ಖಾಲಿ ಸ್ಥಳವನ್ನು ನೀಡಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 41	
ವಿಷಯ ಸಂಖ್ಯೆ:	ಸಿಂ.05(j)/(08/26)

–: ಟಿಪ್ಪಣಿ :–

ವಿಷಯಃ **ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರ (USIC) ಸಂಬಂಧಿಸಿದ ಉಪಕರಣಗಳು ಹಾಳಾಗಿರುವುದರಿಂದ ಉಪಕರಣಗಳನ್ನು ದುರಸ್ಥಿ ಮಾಡಿಸಲು ಅಂದಾಜು ವೆಚ್ಚ ರೂ.2,90,000/– ಗಳಿಗೆ ಸಿಂಡಿಕೇಟ್ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ನಿರ್ದೇಶಕರು, ವೈಜ್ಞಾನಿಕ ಉಪಕರಣ ಕೇಂದ್ರ ಇವರ ಪತ್ರ ಸಂಖ್ಯೆ: ದಾವಿವಿ/2026–27/58 ದಿನಾಂಕ:06.07.2026

****

ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರ(USIC) ಉಲ್ಲೇಖಿತ ಪತ್ರದಲ್ಲಿ Fourier Transform Infrared Spectrophotometer (FTIR) ಉಪಕರಣವು ದುರಸ್ಥಿಯಲ್ಲಿರುವುದರಿಂದ ಅದರ ಬಿಡಿಭಾಗಗಳಾದ IR Source ಮತ್ತು ZN-Se Crystal Plate ಗಳನ್ನು ಉಪಕರಣಕ್ಕೆ ಅಳವಡಿಸಬೇಕಾಗಿರುವುದರಿಂದ ಈ ಉಪಕರಣಗಳನ್ನು ಅಂದಾಜು ವೆಚ್ಚ ರೂ.2,90,000/– ಗಳ ಮಿತಿಯೊಳಗೆ ದರಪಟ್ಟಿ ಮೂಲಕ ಖರೀದಿಸಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಹಾಗನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರದ (USIC) Fourier Transform Infrared Spectrophotometer (FTIR) ಉಪಕರಣದ ಬಿಡಿಭಾಗಗಳಾದ IR Source ಮತ್ತು ZN-Se Crystal Plate ಉಪಕರಣಗಳನ್ನು ಅಂದಾಜು ವೆಚ್ಚ ರೂ.2,90,000/– ಗಳ ಮಿತಿಯೊಳಗೆ ದರಪಟ್ಟಿ ಮೂಲಕ ಖರೀದಿಸಿ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕ್ರೀಡಾ ವಿಭಾಗ – 42	
ವಿಷಯ ಸಂಖ್ಯೆ:	ಸಿ೦.06(a)/(08/26)

–ಃ ಟಿಪ್ಪಣಿ ಃ–

ವಿಷಯಃ 2026–27ನೇ ಸಾಲಿನ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗೆ ಕ್ರೀಡಾಪಟುಗಳು ಭಾಗವಹಿಸಲು ಅವಶ್ಯವಾಗಿ ಬೇಕಾಗಿರುವ ಸಮವಸ್ತ್ರಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು

****

2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳು ದಿನಾಂಕ:17.08.2026ರಿಂದ ಪ್ರಾರಂಭವಾಗುತ್ತಿರುವುದರಿಂದ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗೆ ಭಾಗವಹಿಸುವ ಕ್ರೀಡಾಪಟುಗಳಿಗೆ ಸಮವಸ್ತ್ರಗಳನ್ನು ವಿತರಿಸಬೇಕಾಗಿರುತ್ತದೆ. ಆದ್ದರಿಂದ, ಅವಶ್ಯವಾಗಿ ಬೇಕಾಗಿರುವ ಸಮವಸ್ತ್ರಗಳ ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ಖರೀದಿಸಲು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳು ದಿನಾಂಕ:17.08.2026ರಿಂದ ಪ್ರಾರಂಭವಾಗಿರುವುದರಿಂದ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಸಮವಸ್ತ್ರಗಳನ್ನು ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕ್ರೀಡಾ ವಿಭಾಗ – 43	
ವಿಷಯ ಸಂಖ್ಯೆ:	ಸಿ.06(b)/(08/26)

–: ಟಿಪ್ಪಣಿ :–

ವಿಷಯಃ 2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳಿಗೆ ಅವಶ್ಯವಾಗಿ ಬೇಕಾಗಿರುವ ಟ್ರೋಪಿಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.

****

2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳು ದಿನಾಂಕ:17.08.2026ರಿಂದ ಪ್ರಾರಂಭವಾಗುತ್ತಿರುವುದರಿಂದ ಅಂತರ ಕಾಲೇಜು ಪಂದ್ಯಾವಳಿಗಳಲ್ಲಿ ವಿಜೇತರಾದ ತಂಡಗಳಿಗೆ ಟ್ರೋಪಿಗಳನ್ನು ವಿತರಿಸಬೇಕಾಗಿರುತ್ತದೆ. ಆದ್ದರಿಂದ, ಅವಶ್ಯವಾಗಿ ಬೇಕಾಗಿರುವ ಟ್ರೋಪಿಗಳ ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳು ದಿನಾಂಕ:17.08.2026ರಿಂದ ಪ್ರಾರಂಭವಾಗಿರುವುದರಿಂದ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಲ್ಲಿ ವಿಜೇತರಾದ ತಂಡಗಳಿಗೆ ಟ್ರೋಪಿಗಳನ್ನು ವಿತರಿಸಬೇಕಾಗಿರುವುದರಿಂದ ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಟ್ರೋಪಿಗಳನ್ನು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕ್ರೀಡಾ ವಿಭಾಗ – 44	
ವಿಷಯ ಸಂಖ್ಯೆ:	ಸಿ೦.06(c)/(08/26)

–ಃ ಟಿಪ್ಪಣಿ ಃ–

ವಿಷಯಃ 2026–27ನೇ ಸಾಲಿನ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗೆ ಕ್ರೀಡಾಪಟುಗಳು ಭಾಗವಹಿಸಲು ಅವಶ್ಯವಾಗಿ ಬೇಕಾಗಿರುವ ಟ್ರ್ಯಾಕ್‌ಸೂಟ್‌ಗಳನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು

****

2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳು ದಿನಾಂಕ:17.08.2026ರಿಂದ ಪ್ರಾರಂಭವಾಗುತ್ತಿರುವುದರಿಂದ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗೆ ಭಾಗವಹಿಸುವ ಕ್ರೀಡಾಪಟುಗಳಿಗೆ ಟ್ರ್ಯಾಕ್‌ಸೂಟ್‌ಗಳನ್ನು ವಿತರಿಸಬೇಕಾಗಿರುತ್ತದೆ. ಆದ್ದರಿಂದ, ಅವಶ್ಯವಾಗಿ ಬೇಕಾಗಿರುವ ಟ್ರ್ಯಾಕ್‌ಸೂಟ್‌ಗಳ ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಲು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳು ದಿನಾಂಕ:17.08.2026ರಿಂದ ಪ್ರಾರಂಭವಾಗಿದ್ದರಿಂದ ಅಂತರ ಕಾಲೇಜು ಮತ್ತು ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಟ್ರ್ಯಾಕ್‌ಸೂಟ್‌ಗಳನ್ನು ವಿತರಿಸಬೇಕಾಗಿರುವುದರಿಂದ ಅಂದಾಜು ಮೊತ್ತ ರೂ.5.00 ಲಕ್ಷ ಮಿತಿಯೊಳಗೆ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಟ್ರ್ಯಾಕ್‌ಸೂಟ್‌ಗಳನ್ನು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕ್ರೀಡಾ ವಿಭಾಗ – 45	
ವಿಷಯ ಸಂಖ್ಯೆ:	ಸಿ.06(d)/(08/26)

–: ಟಿಪ್ಪಣಿ :–

ವಿಷಯಃ 2025–26 ಮತ್ತು 2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳಿಗೆ ಪ್ರಮಾಣ ಪತ್ರಗಳನ್ನು ಮತ್ತು ಅಂತರ ವಿಶ್ವವಿದ್ಯಾನಿಲಯಗಳ ದಕ್ಷಿಣ ವಲಯ/ಅಖಿಲ ಭಾರತ ಪಂದ್ಯಾವಳಿಗಳಿಗೆ ಕ್ರೀಡಾಪಟುಗಳು ಭಾಗವಹಿಸಲು ಗುರುತಿನ ಚೀಟಿಗಳನ್ನು ಮುದ್ರಣ ಮಾಡಿ ಸರಬರಾಜು ಮಾಡಿರುವುದಕ್ಕೆ ಹಣ ಪಾವತಿ ಮಾಡುವ ಕುರಿತು.

****

2025–26 ಮತ್ತು 2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳಿಗೆ ಪ್ರಮಾಣ ಪತ್ರಗಳನ್ನು ಮತ್ತು ಅಂತರ ವಿಶ್ವವಿದ್ಯಾನಿಲಯಗಳ ದಕ್ಷಿಣ ವಲಯ/ಅಖಿಲ ಭಾರತ ಪಂದ್ಯಾವಳಿಗಳಿಗೆ ಕ್ರೀಡಾಪಟುಗಳು ಭಾಗವಹಿಸಲು ಗುರುತಿನ ಚೀಟಿಗಳನ್ನು ವಿತರಿಸಬೇಕಾಗಿರುವುದರಿಂದ ದರಪಟ್ಟಿ ಆಧಾರದ ಮೇಲೆ ಖರೀದಿಸಲು ನಿಯಮಾನುಸಾರ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು L1 ಸಂಸ್ಥೆಯಾದ M/s. Sri Malleshwara Printers & Enterprises, Govt. Hospital Cross, CN road, Bhadravathi-577301 – ಇವರಿಂದ ಕ್ರೀಡಾ ಪ್ರಮಾಣ ಪತ್ರಗಳನ್ನು ಮತ್ತು ಗುರುತಿನ ಚೀಟಿಗಳನ್ನು ಮುದ್ರಣ ಮಾಡಿಸಿ ಖರೀದಿಸಲಾಗಿರುತ್ತದೆ. ಈಗ ಸದರಿ ಸಂಸ್ಥೆಯವರು ರೂ.1,21,776/– (ರೂಪಾಯಿಗಳು ಒಂದು ಲಕ್ಷದ ಇಪ್ಪತ್ತೊಂದು ಸಾವಿರದ ಏಳು ನೂರ ಎಪ್ಪತ್ತಾರು ಮಾತ್ರ)ಗಳ ಬಿಲ್ಲನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಮೇಲ್ಕಂಡ ಸಂಸ್ಥೆಯವರಿಗೆ ಹಣ ಪಾವತಿಸಲು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

2025–26 ಮತ್ತು 2026–27ನೇ ಸಾಲಿನ ಅಂತರ ಕಾಲೇಜು ಪಂದ್ಯಾವಳಿಗಳಿಗೆ ಪ್ರಮಾಣ ಪತ್ರಗಳನ್ನು ಮತ್ತು ಅಂತರ ವಿಶ್ವವಿದ್ಯಾನಿಲಯಗಳ ದಕ್ಷಿಣ ವಲಯ/ಅಖಿಲ ಭಾರತ ಪಂದ್ಯಾವಳಿಗಳಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಲು ದರಪಟ್ಟಿಯಲ್ಲಿ L1 ಯಶಸ್ವಿಯಾದ ಸಂಸ್ಥೆ M/s. Sri Malleshwara Printers & Enterprises, Govt. Hospital Cross, CN road, Bhadravathi-577301 – ಇವರಿಂದ ಕ್ರೀಡಾ ಪ್ರಮಾಣ ಪತ್ರಗಳನ್ನು ಮತ್ತು ಗುರುತಿನ ಚೀಟಿಗಳನ್ನು ಮುದ್ರಣ ಮಾಡಿಸಿದ ಮೊತ್ತ ರೂ.1,21,776/– ಗಳನ್ನು ಸದರಿ ಸಂಸ್ಥೆಗೆ ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕ್ರೀಡಾ ವಿಭಾಗ – 46	
ವಿಷಯ ಸಂಖ್ಯೆ:	ಸಿಂ.06(e)/(08/26)

–: ಟಿಪ್ಪಣಿ :–

ವಿಷಯಃ 2026–27ನೇ ಸಾಲಿನ ದೈಹಿಕ ಶಿಕ್ಷಣ ನಿರ್ದೇಶಕರ/ಪ್ರತಿನಿಧಿಗಳ ಸಭಾ ನಡಾವಳಿಯನ್ನು ಅನುಮೋದಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:21.07.2026ರಂದು ವಿಶ್ವವಿದ್ಯಾನಿಲಯದ ಎಂ.ಬಿ.ಎ ಸಭಾಂಗಣದಲ್ಲಿ ಜರುಗಿದ 2026–27ನೇ ಸಾಲಿನ ದೈಹಿಕ ಶಿಕ್ಷಣ ನಿರ್ದೇಶಕರ/ಪ್ರತಿನಿಧಿಗಳ ವಾರ್ಷಿಕ ಸಭೆಯ ಸಭಾ ನಡಾವಳಿಯನ್ನು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2026–27ನೇ ಸಾಲಿನ ದೈಹಿಕ ಶಿಕ್ಷಣ ನಿರ್ದೇಶಕರ/ಪ್ರತಿನಿಧಿಗಳ ವಾರ್ಷಿಕ ಸಭೆಯ ಸಭಾ ನಡಾವಳಿಯ ಕುರಿತು ಚರ್ಚಿಸಿದ ಬಳಿಕ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಕಾನೂನು ಕೋಶ – 47	
ವಿಷಯ ಸಂಖ್ಯೆ:	ಸಿಂ.07(a)/(08/26)

–ಃ ಟಿಪ್ಪಣಿ ಃ–

ವಿಷಯಃ **ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ವೃತ್ತಿಪರ ಶುಲ್ಕವನ್ನು ಪರಿಷ್ಕರಿಸುವ ಕುರಿತು.**

ಉಲ್ಲೇಖ: ವಿ.ವಿ. ಆದೇಶ ಸಂಖೆ:ದಾವಿವಿ/ಮಾಸನಿ/84/2017–18/9840 ದಿನಾಂಕ:31.03.2018.

****

ವಿಶ್ವವಿದ್ಯಾನಿಲಯದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ, ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ ಮಾಹಿತಿ ಆಯೋಗ ಹಾಗೂ ಸ್ಥಳೀಯ ಇತರೆ ನ್ಯಾಯಾಲಯಗಳಲ್ಲಿ ದಾಖಲಾಗುವ ವಿವಿಧ ಮೊಕದ್ದಮೆಗಳ ಕುರಿತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಲು ಕಾನೂನು ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಉಲ್ಲೇಖಿತ ಪತ್ರದನ್ವಯ ಕಾನೂನು ಸಲಹೆಗಾರರಿಗೆ ವಿಶ್ವವಿದ್ಯಾನಿಲಯವು 2018ರಲ್ಲಿ ನಿಗದಿಪಡಿಸಲಾದ ವೃತ್ತಿಪರ ಶುಲ್ಕವು ಇತ್ತೀಚಿನ ದಿನಗಳಿಗೆ ಹೋಲಿಸಿದರೆ ಬಹಳ ಕಡಿಮೆ ಇದ್ದು, ಪರಿಷ್ಕರಿಸುವಂತೆ ಕಾನೂನು ಸಲಹೆಗಾರರು ಕೋರಿರುತ್ತಾರೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ, ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ ಮಾಹಿತಿ ಆಯೋಗ ಹಾಗೂ ಸ್ಥಳೀಯ ಇತರೆ ನ್ಯಾಯಾಲಯಗಳಲ್ಲಿ ದಾಖಲಾಗುವ ವಿವಿಧ ಮೊಕದ್ದಮೆಗಳ ಕುರಿತು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸುವ ಕಾನೂನು ಸಲಹೆಗಾರರಿಗೆ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ವೃತ್ತಿಪರ ಶುಲ್ಕವನ್ನು ಪರಿಷ್ಕರಿಸುವ ಕುರಿತಂತೆ 3 ರಿಂದ 4 ವಿಶ್ವವಿದ್ಯಾನಿಲಯಗಳಿಂದ ಮಾಹಿತಿ ಪಡೆದು, ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದಂತೆ ಮುಂದಿನ ಕ್ರಮವಹಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಶೈಕ್ಷಣಿಕ ವಿಭಾಗ – 48	
ವಿಷಯ ಸಂಖ್ಯೆ:	ಸಿ.08(a)/(08/26)

–: ಟಿಪ್ಪಣಿ :–

ವಿಷಯಃ 2026–27ನೇ ಸಾಲಿನ ಸ್ನಾತಕೋತ್ತರ ಪ್ರವೇಶಾತಿ ಮತ್ತು ಶುಲ್ಕದ ಕುರಿತು

ಉಲ್ಲೇಖ: ಡೀನರು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು/ಸಂಯೋಜನಾಧಿಕಾರಿಗಳ ಸಭಾ ನಡಾವಳಿ ದಿನಾಂಕ:25.06.2026

****

ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ವಿವಿಧ ಅಧ್ಯಯನ ವಿಭಾಗಗಳು ದಾವಣಗೆರೆ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ, ಸ್ನಾತಕೋತ್ತರ ಸಂಯೋಜಿತ ಕಾಲೇಜುಗಳಲ್ಲಿನ – 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕವನ್ನು ಹೆಚ್ಚಿಸದೆ 2025–26ನೇ ಸಾಲಿನ ಶುಲ್ಕವನ್ನೇ ಯಥಾವತ್ತಾಗಿ ಮುಂದುವರೆಸಲಾಗಿರುತ್ತದೆ. (ಎಂ.ಎಸ್.ಡಬ್ಲೂ ವಿಭಾಗದ ಶುಲ್ಕವನ್ನು ರೂ.30,000/– ಗಳಿಂದ ರೂ.25,000/– ಗಳಿಗೆ ಕಡಿಮೆಮಾಡಲಾಗಿರುತ್ತದೆ) ಪ್ರವೇಶಾತಿ ಶುಲ್ಕ ಹಾಗೂ ಇತರೆ ವಿಷಯಗಳ ಕುರಿತಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:15.06.2026 ರಂದು ನಡೆದ ಎಲ್ಲಾ ನಿಕಾಯದ ಡೀನರು ಹಾಗೂ ವಿಭಾಗದ ಅಧ್ಯಕ್ಷರು/ಸಂಯೋಜನಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ಸಭಾ ನಡವಾಳಿಯನ್ನು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ವಿವಿಧ ಅಧ್ಯಯನ ವಿಭಾಗಗಳು ದಾವಣಗೆರೆ, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ, ಸ್ನಾತಕೋತ್ತರ ಸಂಯೋಜಿತ ಕಾಲೇಜುಗಳಲ್ಲಿನ – 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಶುಲ್ಕ ಹಾಗೂ ಇತರೆ ವಿಷಯಗಳ ಕುರಿತಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:15.06.2026 ರಂದು ನಡೆದ ವಿವಿಧ ನಿಕಾಯದ ಡೀನರುಗಳ ಹಾಗೂ ವಿಭಾಗದ ಅಧ್ಯಕ್ಷರು/ ಸಂಯೋಜನಾಧಿಕಾರಿಗಳ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ದಿ:15.06.2026 ಸಭಾ ನಡವಾಳಿಯ ಕುರಿತು ಚರ್ಚಿಸಿದ ಬಳಿಕ ನಡಾವಳಿಯನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಶೈಕ್ಷಣಿಕ ವಿಭಾಗ – 49	
ವಿಷಯ ಸಂಖ್ಯೆ:	ಸಿ೦.08(b)/(08/26)

–: ಟಿಪ್ಪಣಿ :–

ವಿಷಯಃ ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಯ ಪ್ರವೇಶಾತಿಗೆ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ಸ್ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1. ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ದಾವಿವಿ– ಇವರ ಪತ್ರ ಸಂಖ್ಯೆ:ದಾವಿವಿ/ವಾಣಿಜ್ಯ/2026–27/75 ದಿನಾಂಕ:06.07.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:07.08.2026

****

ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ – ಅಧ್ಯಕ್ಷರು, ಸ್ನಾತಕೋತ್ತರ ಎಂ.ಕಾಂ. ಅಧ್ಯಯನ ವಿಭಾಗ – ಇವರು ಹೆಚ್ಚುವರಿ ಸೀಟುಗಳಿಗೆ ಪ್ರವೇಶ ಮಿತಿಯನ್ನು ನಿಗದಿಪಡಿಸಿ ಪರಿಷ್ಕೃತ ಪ್ರಸ್ತುತ ಸೀಟ್ ಮ್ಯಾಟ್ರಿಕ್ಸ್‌ನ್ನು ಸಿದ್ದಪಡಿಸಿ ಅನುಮೋದನೆಗೆ ಉಲ್ಲೇಖ (1)ರ ಪತ್ರದಲ್ಲಿ ಸಲ್ಲಿಸಿರುತ್ತಾರೆ. ಉಲ್ಲೇಖ (2)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಈ ಕೆಳಕಂಡ ಸೀಟ್ ಮ್ಯಾಟ್ರಿಕ್ಸ್‌ನ್ನು ಅನುಮೋದಿಸಲಾಗಿರುತ್ತದೆ.

Existing Merit Seat Matrix - 2026-27

Sl. No	Centre	GM (44%)	SC (17%)	ST (7%)	C1 (4%)	2A (15%)	2B (4%)	3A (4%)	3B (5%)	KM	NSS	NCC	SG	SP	DQ	PH	OU	HK	TOTAL
1	Shivaganogtri Main Campus	13	6	2	1	5	1	1	2	1	1	1	1	1	1	1	2	3	43
2	Jnanagangotri P.G. Centre, Chitradurga	13	6	2	1	5	1	1	2	1	1	1	1	1	1	1	2	3	43

Existing Enhanced Merit Seats - 2026-27

Sl. No	Centre	GM (44%)	SC (17%)	ST (7%)	C1 (4%)	2A (15%)	2B (4%)	3A (4%)	3B (5%)	OU (15%)	HK (8%)	TOTAL
1	Shivaganogtri Main Campus	32	13	5	3	11	3	3	4	2	6	82
2	Jnanagangotri P.G. Centre, Chitradurga	9	4	1	1	3	1	1	1	2	2	25

Additional Intake Merit Seats 2026-27

Sl. No	Centre	GM (44%)	SC (17%)	ST (7%)	C1 (4%)	2A (15%)	2B (4%)	3A (4%)	3B (5%)	KM	NSS	NCC	SG	SP	DQ	PH	OU	HK	TOTAL
1	Shivaganogtri Main Campus	29	11	04	02	09	02	02	03	01	01	01	01	01	01	01	09	05	83
2	Jnanagangotri P.G. Centre, Chitradurga	13	06	02	01	05	01	01	02	01	01	01	01	01	01	01	05	03	46

Additional Intake Enhanced Merit Seats - 2026-27

Sl. No	Centre	GM (44%)	SC (17%)	ST (7%)	C1 (4%)	2A (15%)	2B (4%)	3A (4%)	3B (5%)	OU (15%)	HK (8%)	TOTAL
1	Shivaganogtri Main Campus	39	15	6	4	13	4	4	4	13	07	109
2	Jnanagangotri P.G. Centre, Chitradurga	33	12	5	3	11	3	3	4	11	6	91

ಸದರಿ ವಿಷಯವನ್ನು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2026–27ನೇ ಶೈಕ್ಷಣಿಕ ಸಾಲಿನ ಎಂ.ಕಾಂ. ಪದವಿಗೆ ಹೆಚ್ಚುವರಿ ಪ್ರವೇಶಾತಿ ಮಿತಿ ನಿಗದಿಪಡಿಸಿ ಸಿದ್ದಪಡಿಸಿದ ಈ ಮೇಲ್ಕಂಡ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ಸ್ ಕುರಿತು ಚರ್ಚಿಸಿ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಶೈಕ್ಷಣಿಕ ವಿಭಾಗ – 50	
ವಿಷಯ ಸಂಖ್ಯೆ:	ಸಿ.08(c)/(08/26)

–ಃ ಟಿಪ್ಪಣಿ ಃ–

ವಿಷಯಃ ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ ಇವರು ಸ್ವರ್ಣ ಪದಕ ದೇಣಿಗೆ ನೀಡಿರುವ ಕುರಿತು.

ಉಲ್ಲೇಖ: 1. ಕಾರ್ಯದರ್ಶಿಗಳು, ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ– ಇವರ ಪತ್ರದ ಸಂಖ್ಯೆ:ಕೆಇಎಸ್/05/2026–27, ದಿನಾಂಕ:11.06.2026.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13.08.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ –ಇವರು ಪೂಜ್ಯಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ ಇವರ ಹೆಸರಿನಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಸಿ.ಎ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕವನ್ನು 2027–28ನೇ ಘಟಿಕೋತ್ಸವದಲ್ಲಿ ಪ್ರಧಾನ ಮಾಡಲು ರೂ. 1,00,000/– ಗಳ (ಚೆಕ್ ನಂ.056280 ದಿನಾಂಕ:11.06.2026) ಚೆಕ್‌ನ್ನು ನೀಡಿರುತ್ತಾರೆ. ಈ ಕುರಿತಂತೆ ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ. ವಿವರ ಈ ಕೆಳಗಿನಂತಿದೆ.

Sl. No.	Name of the Doner and Address	Amount DD/Ch.No./ Date	In the Name of	Subject which related to
1.	Dr. Shivaraj Kabbur Founder Kabbur Education Society (R) Winners Group of Institutions Davangere	Rs.1,00,000/- Cq/DD No:056280, 11.06.2026	Taralabalu Jagadguru Sri. 1108 Dr. Shivamurthy Shivacharya Mahaswamiji, Endowment Gold Medal	Bachelor of Computer Application **Subject:**Scored Highest Marks in B.C.A First Rank of Davangere University

:: ನಿರ್ಣಯ ::

ಕಬ್ಬೂರ್ ಎಜುಕೇಷನ್ ಸೊಸೈಟಿ, ದಾವಣಗೆರೆ ಇವರು – ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ ಬಿ.ಸಿ.ಎ ಪದವಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ – ಪೂಜ್ಯಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ ಇವರ ಹೆಸರಿನಲ್ಲಿ ಸ್ವರ್ಣ ಪದಕವನ್ನು 2027–28ನೇ ಘಟಿಕೋತ್ಸವದಿಂದ ಪ್ರಧಾನ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಧ್ಯಯನ ಮಂಡಳಿ ವಿಭಾಗ – 51	
ವಿಷಯ ಸಂಖ್ಯೆ:	ಸಿ.09(a)/(08/26)

–: ಟಿಪ್ಪಣಿ :–

ವಿಷಯಃ **ಬಿ.ಕಾಂ. ಪದವಿಯ AEDP ಪಠ್ಯಕ್ರವನ್ನು ಅನುಮೋದಿಸುವ ಕುರಿತು.**

ಉಲ್ಲೇಖ: ಸರ್ಕಾರದ ಆದೇಶ ಪತ್ರ ಸಂಖ್ಯೆಃ ಇಡಿ 93 ಡಿ.ಸಿ.ಇ. 2026(ಇ)
ಬೆಂಗಳೂರು ದಿನಾಂಕಃ 13.05.2026

****

ಸರ್ಕಾರದ ನಡಾವಳಿಯನುಸಾರ ಹಾಗೂ ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಪದವಿಯ AEDP (Apprenticeship-Embedded Degree Programme) ಕೌಶಲ್ಯಾಧಾರಿತ ಪದವಿ ಕೋರ್ಸನ ಪಠ್ಯಕ್ರಮವನ್ನು ವಾಣಿಜ್ಯ ಅಧ್ಯಯನ ಮಂಡಳಿ ಅಧ್ಯಕ್ಷರು ಸಭೆಯನ್ನು ಏರ್ಪಡಿಸಿ 1 ಮತ್ತು 2ನೇ ಸೆಮಿಸ್ಟರ್ ಪಠ್ಯಕ್ರಮವನ್ನು ಸಿದ್ಧಪಡಿಸಿ ಅಧ್ಯಯನ ಮಂಡಳಿಯ ಅನುಮೋದನೆಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ಪಠ್ಯಕ್ರಮವನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಿರುವುದಕ್ಕೆ ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲಾಗಿದೆ. ಈ ಕುರಿತು ದಿನಾಂಕ:31.08.2026ರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ರಾಜ್ಯ ಶಿಕ್ಷಣ ನೀತಿ (SEP)ಯ ಮಾರ್ಗಸೂಚಿಗಳನ್ವಯ 2026–27ನೇ ಶೈಕ್ಷಣಿಕ ಸಾಲಿನ ಬಿ.ಕಾಂ. ಪದವಿಯ AEDP (Apprenticeship-Embedded Degree Programme) ಕೌಶಲ್ಯಾಧಾರಿತ ಪದವಿ ಕೋರ್ಸಿನ 1 ಮತ್ತು 2ನೇ ಸೆಮಿಸ್ಟರ್ B.Com (Human Resource Operations - AEDP) ಪಠ್ಯಕ್ರಮವನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಧ್ಯಯನ ಮಂಡಳಿ ವಿಭಾಗ – 52	
ವಿಷಯ ಸಂಖ್ಯೆ:	ಸಿ.09(b)/(08/26)

–: ಟಿಪ್ಪಣಿ :–

ವಿಷಯಃ **2026–27ನೇ ಶೈಕ್ಷಣಿಕ ಸಾಲಿನಲ್ಲಿ Short-Term Skill Development Course ಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಅನುಮೋದಿಸುವ ಕುರಿತು.**

ಉಲ್ಲೇಖ: ಡೀನರ ಸಭೆಯ ನಿರ್ಣಯ ದಿನಾಂಕ:11.06.2026.

****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸಂಯೋಜಿತ ಕಾಲೇಜುಗಳಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ, Short-Term Skill Development Course ಗಳನ್ನು ಪರಿಚಲಿಸಲು ನಿರ್ಣಯಿಸಿರುವ ಹಿನ್ನಲೆಯಲ್ಲಿ ಉಲ್ಲೇಖ–1ರ ಸಮಿತಿಯು "Draft Guidelines for Short-Term Skill Development Courses at Davangere University" ಮಾರ್ಗಸೂಚಿಗಳನ್ನು ಸಿದ್ಧಪಡಿಸಿದ್ದು ಸದರಿ ಮಾರ್ಗಸೂಚಿಗಳನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಪರಿಚಲಿಸಿರುವ ಕುರಿತು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಈ ಕುರಿತು ದಿನಾಂಕ:31.08.2026ರ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸಂಯೋಜಿತ ಕಾಲೇಜುಗಳ ವಿವಿಧ ಸ್ನಾತಕ/ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ, Short-Term Skill Development Course ಗಳನ್ನು ಪರಿಚಲಿಸಲು ನಿರ್ಣಯಿಸಿರುವ ಹಿನ್ನಲೆಯಲ್ಲಿ – "Draft Guidelines for Short-Term Skill Development Courses at Davangere University" ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಪರಿಚಲಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಧ್ಯಯನ ಮಂಡಳಿ ವಿಭಾಗ – 53	
ವಿಷಯ ಸಂಖ್ಯೆ:	ಸಿ.09(c)/(08/26)

–: ಟಿಪ್ಪಣಿ :–

ವಿಷಯಃ ದಾವಣಗೆರೆ ವಿದ್ಯಾನಿಲಯದಲ್ಲಿ **Academic and Research advisory Committee** ರಚಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:12.08.2026

*****

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Academic and Research advisory Committee ಯನ್ನು ರಚಿಸಿಕೊಳ್ಳಲು ವಿವಿಧ ಪ್ರಖ್ಯಾತ ವಿಶ್ವವಿದ್ಯಾನಿಲಯ/ ರಾಷ್ಟ್ರೀಯ ಸಂಸ್ಥೆ/ ಕೈಗಾರಿಕೆ/ಹಿರಿಯ ವಿದ್ಯಾರ್ಥಿ ಹಾಗೂ ಇತರೆ ಸಂಸ್ಥೆಗಳಿಂದ ತಜ್ಞರನ್ನು ನೇಮಿಸಿಕೊಂಡು ಸಮಿತಿಯನ್ನು ರಚಿಸಲುದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:28.08.2026ರ ವಿದಂ ದಿನಾಂಕ:31.08.2026 ರಂದು ಏರ್ಪಡಿಸಲಾದ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಪ್ರಖ್ಯಾತ ವಿಶ್ವವಿದ್ಯಾನಿಲಯದಿಂದ/ ರಾಷ್ಟ್ರೀಯ ಸಂಸ್ಥೆಗಳಿಂದ/ ಕೈಗಾರಿಕೆಗಳಿಂದ/ಹಿರಿಯ ವಿದ್ಯಾರ್ಥಿ ಹಾಗೂ ಇತರೆ ಸಂಸ್ಥೆಗಳಿಂದ ತಜ್ಞರನ್ನು ನೇಮಿಸಿಕೊಂಡು – Academic and Research advisory Committee ಎಂಬ ತಜ್ಞರ ಸಮಿತಿಯನ್ನು ರಚಿಸಿಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಮುಂದುವರೆದು, ಸದರಿ ಸಮಿತಿಗೆ ಆಗಮಿಸುವ ಸದಸ್ಯರುಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆ ಹಾಗೂ ಉಪಸ್ಥಿತ ಭತ್ಯೆಯನ್ನು ಪಾವತಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಅಧ್ಯಯನ ಮಂಡಳಿ ವಿಭಾಗ – 54	
ವಿಷಯ ಸಂಖ್ಯೆ:	ಸಿ.09(d)/(08/26)

–: ಟಿಪ್ಪಣಿ :–

ವಿಷಯಃ **2026–27ನೇ ಶೈಕ್ಷಣಿಕ ಸಾಲಿನಿಂದ Short-Term Skill Development ಕೋರ್ಸ್‌ಗಳ ಪಠ್ಯಕ್ರಮಗಳನ್ನು ಪರಿಚಲಿಸುವ ಕುರಿತು.**

****

2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ/ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಅಧ್ಯಯನ ಮಂಡಳಿ ಸಭೆ ನಡೆಸಿ Short-Term Skill Development ಕೋರ್ಸ್‌ನ ಮಾರ್ಗಸೂಚಿಗಳನ್ವಯ ಪಠ್ಯಕ್ರಮ ರಚನೆ ಮಾಡಿ ಸಲ್ಲಿಸಿದಲ್ಲಿ ವಿವಿಧ ನಿಕಾಯಗಳ ಸಭೆ ಹಾಗೂ ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ ಪಠ್ಯಕ್ರಮವನ್ನು ಪರಿಚಲಿಸಲು ದಿನಾಂಕ:28.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜುಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ Short-Term Skill Development ಕೋರ್ಸ್‌ನ ಮಾರ್ಗಸೂಚಿಗಳನ್ವಯ ವಿವಿಧ ಅಧ್ಯಯನ ಮಂಡಳಿ ಅಧ್ಯಕ್ಷರುಗಳು ಅಧ್ಯಯನ ಮಂಡಳಿ ಸಭೆ ನಡೆಸಿ ಸ್ನಾತಕ/ ಸ್ನಾತಕೋತ್ತರ ಪದವಿಗೆ ಸಂಬಂಧಿಸಿದಂತೆ ಪಠ್ಯಕ್ರಮ ರಚಿಸಿ ಸಲ್ಲಿಸಿದ್ದಲ್ಲಿ ಸದರಿ ಪಠ್ಯಕ್ರಮವನ್ನು ನಿಯಮಾನುಸಾರ ಪರಿಚಲಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕಾಲೇಜು ಅಭಿವೃದ್ಧಿ ಪರಿಷತ್ತು – 55	
ವಿಷಯ ಸಂಖ್ಯೆ:	ಸಿ.10(a)/(08/26)

–: ಟಿಪ್ಪಣಿ :–

ವಿಷಯಃ **2026–27ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಭೌತಿಕ ಪರಿಶೀಲನೆಗೆ ರಚಿಸಲಾಗಿರುವ ಸ್ಥಳೀಯ ತಪಾಸಣಾ ಸಮಿತಿಗಳನ್ನು ಅನುಮೋದಿಸುವ ಹಾಗೂ ಸದರಿ ಸಮಿತಿಗೆ ಸಂಭಾವನೆ ಪಾವತಿಗೆ ಅನುಮತಿ ಕುರಿತು.**

ಉಲ್ಲೇಖ: 1. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–155/2025–26/ 3276 ದಿನಾಂಕ:07.11.2025
2. ಕಛೇರಿ ಪತ್ರ ಸಂ:ದಾವಿವಿ/ಸಿಡಿಸಿ/53/2025–26/2498 ದಿನಾಂಕ:06.09.2026
3. ಕಛೇರಿ ಪತ್ರ ಸಂ:ದಾವಿವಿ/ಸಿಡಿಸಿ/51/2025–26/2499 ದಿನಾಂಕ:06.09.2026
4. ಸರ್ಕಾರದ ಆದೇಶ ಸಂ;ಇಡಿ 305 ಯುಎನ್‌ಇ 2025, ದಿನಾಂಕ:26.05.2026
5. ಸರ್ಕಾರದ ಆದೇಶ ಸಂ;ಇಡಿ 306 ಯುಎನ್‌ಇ 2025, ದಿನಾಂಕ:26.05.2026

****

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಉಲ್ಲೇಖಿತ (1)ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು.

ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಯ ನಿರ್ಣಯದನುಸಾರ – (1) ಶ್ರೀ ಭಾನುಪ್ರಕಾಶ ಪಿ.ವಿ. ಶಿಕ್ಷಣ ಮಹಾವಿದ್ಯಾಲಯ, ಹೊನ್ನಾಳಿ ಹಾಗೂ (2) ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು ಕಾಲೇಜುಗಳ ಸಂಯೋಜನೆಯನ್ನು 03 ವರ್ಷಗಳ (2025–26 ರಿಂದ 2027–28) ಅವಧಿಗೆ ಅಮಾನಿತ್ತಿನಲ್ಲಿಡಲು ನಿರ್ಣಯ ಕೈಗೊಂಡು ಉಲ್ಲೇಖ (2) ಮತ್ತು (3) ರಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಮುಂದುವರೆದು, ಉಲ್ಲೇಖಿತ (4) ಮತ್ತು (5)ರ ಸರ್ಕಾರದ ಪತ್ರಗಳಲ್ಲಿ ಸದರಿ ಕಾಲೇಜುಗಳ 2025–26ನೇ ಸಾಲಿನ ಸಂಯೋಜನಾ ಆದೇಶ ನೀಡುವಂತೆ ಹಾಗೂ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಯನ್ನು ಕೈಗೊಂಡು ಸರ್ಕಾರಕ್ಕೆ ಪತ್ರಿಸಲು ಸೂಚಿಸಲಾಗಿದೆ.

ತತ್ಸಂಬಂಧವಾಗಿ, (1) ಶ್ರೀ ಭಾನುಪ್ರಕಾಶ ಪಿ.ವಿ. ಶಿಕ್ಷಣ ಮಹಾವಿದ್ಯಾಲಯ, ಹೊನ್ನಾಳಿ ಹಾಗೂ (2) ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು – ಕಾಲೇಜುಗಳು ಸಂಯೋಜನೆಗೆ ಅರ್ಜಿ ಸಲ್ಲಿಸಿದ್ದು ಕಾರಣಾಂತರಗಳಿಂದ ಸದರಿ ಕಾಲೇಜುಗಳ ಭೌತಿಕ ಪರಿಶೀಲನೆಯನ್ನು ಮುಂದೂಡಲಾಗಿತ್ತು. ಉಲ್ಲೇಖಿತ (4) ಮತ್ತು (5)ರ ಸರ್ಕಾರದ ನಿರ್ದೇಶನದಂತೆ ಸದರಿ ಕಾಲೇಜುಗಳ 2026–27ನೇ ಸಾಲಿನ ಸ್ಥಳೀಯ ತಪಾಸಣೆ ಕಾರ್ಯವನ್ನು ದಿನಾಂಕ:30.05.2026ರಂದು ಕೈಗೊಳ್ಳಲಾಗಿದೆ.

ಸದರಿ ಕಾಲೇಜುಗಳ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಭೋಧಕರನ್ನೊಳಗೊಂಡಂತೆ ರಚಿಸಲಾಗಿರುವ ಸಮಿತಿಯನ್ನು (ಪಟ್ಟಿ ಲಗತ್ತಿಸಿದೆ) ಅನುಮೋದಿಸುವ ಬಗ್ಗೆ ಹಾಗೂ ಸದರಿ ಸಮಿತಿಗೆ ಗೌರವ ಸಂಭಾವನೆ ಪಾವತಿಸಲು ಅನುಮತಿ ನೀಡುವಂತೆ ದಿನಾಂಕ:31.08.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳಾದ ಶ್ರೀ ಭಾನುಪ್ರಕಾಶ ಪಿ.ವಿ. ಶಿಕ್ಷಣ ಮಹಾವಿದ್ಯಾಲಯ, ಹೊನ್ನಾಳಿ ಹಾಗೂ ಶ್ರೀ ಮಾಲತೇಶ ಶಿಕ್ಷಣ ಮಹಾವಿದ್ಯಾಲಯ, ಮಲೆಬೆನ್ನೂರು ಕಾಲೇಜುಗಳ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರನ್ನೊಳಗೊಂಡಂತೆ ರಚಿಸಲಾಗಿರುವ ಸಮಿತಿಯ ಪಟ್ಟಿಗೆ ಘಟನೋತ್ತರವಾಗಿ ಅನುಮೋದಿಸಿ ಹಾಗೂ 2026–27ನೇ ಸಾಲಿನ ಸ್ಥಳೀಯ ತಪಾಸಣೆ ಭೌತಿಕ ಕಾರ್ಯವನ್ನು ನಿರ್ವಹಿಸಿದ ಸಮಿತಿಯ ಸದಸ್ಯರುಗಳಿಗೆ ಗೌರವ ಸಂಭಾವನೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು. ಮುಂದುವರೆದು, ಸದರಿ ಕಾಲೇಜುಗಳಿಗೆ 2026–27ನೇ ಸಾಲಿಗೆ ನಿಯಮಾನುಸಾರ ಸಂಯೋಜನಾ ಆದೇಶ ನೀಡಲು ನಿರ್ಣಯಿಸಲಾಯಿತು.

ಕುಲಸಚಿವರು

ಕುಲಪತಿಗಳು

ಕಾಲೇಜು ಅಭಿವೃದ್ಧಿ ಪರಿಷತ್ತು – 56	
ವಿಷಯ ಸಂಖ್ಯೆ:	ಸಿಂ.10(b)/(08/26)

–: ಟಿಪ್ಪಣಿ :–

ವಿಷಯ : **2027–28ನೇ ಶೈಕ್ಷಣಿಕ ಸಾಲಿನಿಂದ 04 ವರ್ಷಗಳ ಬಿ.ಎ.ಬಿ.ಇಡ್. ಇಂಟಿಗ್ರೇಟೆಡ್ ಕೋರ್ಸ್‌ನ್ನು ಪ್ರಾರಂಭಿಸಲು ಸಂಯೋಜನೆ/ನಿರಾಪೇಕ್ಷಣಾ ಪತ್ರ ನೀಡುವ ಕುರಿತು.**

ಉಲ್ಲೇಖ : 1. Ministry of Social Justice & empowerment, Govt of India Ltr No: CRC-DVG/ACAD/ISITEP/2026/10 dated:04.06.2026
2. ಸರ್ಕಾರದ ಪತ್ರ ಸಂ:ಇಡಿ 169 ಯುಎನ್‌ಇ 2026 ದಿನಾಂಕ:14.08.2026

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Composite Regional Centre for Development, Rehabiliation & Empowerment of Person with Disablities (Divyangjan), under administration of Ministry of Social Justice & empowerment, Govt of India - ಇವರು ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಡಿ 2027–28ನೇ ಶೈಕ್ಷಣಿಕ ಸಾಲಿನಿಂದ 04 ವರ್ಷಗಳ ಬಿ.ಎ.ಬಿ.ಇಡ್. ಇಂಟಿಗ್ರೇಟೆಡ್ ಕೋರ್ಸ್‌ನ್ನು ಪ್ರಾರಂಭಿಸಲು ಉದ್ದೇಶಿಸಿರುತ್ತಾರೆ. ಸದರಿ ಕೋರ್ಸ್‌ನ ರೂಪುರೇಷುಗಳನ್ನು ಭಾರತದ ಪುನರ್ವಸತಿ ಮಂಡಳಿಯ ಸಮಗ್ರ ವಿಶೇಷ ಮತ್ತು ಅಂತರ್ಗತ ಶಿಕ್ಷಕರ ಶಿಕ್ಷಣ ನೀತಿ ಕಾರ್ಯಕ್ರಮದಡಿಯಲ್ಲಿ ಸೂಚಿಸಿರುವ ಮಾನದಂಡಗಳು, ನಿಯಮಗಳಿಗನುಗುಣವಾಗಿ ಅಭಿವೃದ್ಧಿಪಡಿಸಲಾಗಿದೆ.

ಸದರಿ ಸಂಸ್ಥೆಯವರು ನಮ್ಮ ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ 04 ವರ್ಷಗಳ ಬಿ.ಎ.ಬಿ.ಇಡ್. ಕೋರ್ಸ್‌ನ ಸಂಯೋಜನೆಗೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ NOC ಪಡೆಯುವಂತೆ ಒತ್ತಾಯಿಸಿದೆ, ಸಂಯೋಜನೆಗಾಗಿ ಪ್ರಸ್ತಾವನೆಯನ್ನು ಪರಿಗಣಿಸುವಂತೆ ಅಥವಾ ದಾವಣಗೆರೆಯ CRC ವಿಶೇಷ ಸ್ಥಾನಮಾನವನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ವಿನಾಯಿತಿ ನೀಡಲು ಕೋರಿರುತ್ತಾರೆ.

ಉಲ್ಲೇಖ(1)ರ ಪತ್ರದಲ್ಲಿ Rehabilitation Council of India (RCI) ಪೋರ್ಟಲ್‌ನಲ್ಲಿ ಕೋರ್ಸ್ ಪ್ರಾರಂಭಿಸುವ ಕುರಿತು ನೋಂದಣಿ ಹಾಗೂ ಅನುಮೋದನೆ ಪಡೆಯುವ ಸಂಬಂಧ ವಿಶ್ವವಿದ್ಯಾನಿಲಯದಿಂದ NOC ಕೋರಿ ಮನವಿ ಸಲ್ಲಿಸಿರುತ್ತಾರೆ. ಮುಂದುವರೆದು, ಉಲ್ಲೇಖ (2)ರ ಪತ್ರದಲ್ಲಿ ಸದರಿ ಸಂಸ್ಥೆಗೆ ನಿರಾಪೇಕ್ಷಣಾ ಪತ್ರ ನೀಡಲು ಈ ಸಂಸ್ಥೆಯು ಹೊಂದಿರುವ ಮೂಲಭೂತ ಸೌಲಭ್ಯಗಳನ್ನು ಒಳಗೊಂಡಂತೆ Integrated Special Teacher Education Programme (ISITEP) ಕೋರ್ಸ್ ಪ್ರಾರಂಭಿಸಲು ಸರ್ಕಾರವು ನಿರಾಪೇಕ್ಷಣಾ ಪತ್ರವನ್ನು ನೀಡಲು ಸಂಬಂಧಪಟ್ಟ ಮಾನದಂಡಗಳನ್ನು ಪರಿಶೀಲಿಸಿ ಉನ್ನತ ಶಿಕ್ಷಣ ಇಲಾಖೆಗೆ ವಿಶ್ವವಿದ್ಯಾನಿಲಯದ ಅಭಿಪ್ರಾಯ ಸಲ್ಲಿಸಲು ತಿಳಿಸಲಾಗಿದೆ. ತತ್ಸಂಬಂಧ ಸದರಿಯವರ ಮನವಿ ಹಾಗೂ ಸರ್ಕಾರದ ಸೂಚನೆಯನ್ನು ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026ರಂದು ಜರುಗಲಿರುವ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಲಾಗಿದೆ.

:ನಿರ್ಣಯ:

Composite Regional Centre for Development, Davangere - ಸಂಸ್ಥೆಯು ಭಾರತ ಸರ್ಕಾರದ ಅಂಗಸಂಸ್ಥೆಯಾಗಿದ್ದು, Integrated Special Teacher Education Programme (ISITEP) ಕೋರ್ಸ್‌ನ್ನು ವಿಶೇಷ ಚೇತನ ಮಕ್ಕಳಿಗೆ ಬೋಧಿಸುವ ಶಿಕ್ಷಕರಿಗಾಗಿ ಸಿದ್ಧಪಡಿಸಲಾಗಿರುತ್ತದೆ. ಸದರಿ ಸಂಸ್ಥೆಯು ISITEP ಕೋರ್ಸ್‌ನ್ನು RCI ನಿಂದ ಮಾನ್ಯತೆ ಪಡೆದು ಪ್ರಾರಂಭಿಸಲು ಉದ್ದೇಶಿಸಿರುತ್ತಾರೆ.

ಈ ಸಂಬಂಧ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ISITEP ಕೋರ್ಸ್‌ಗೆ Rehabilitation Council of India (RCI) ಮಾನದಂಡಗಳನುಸಾರ CRC Davangere ಯಲ್ಲಿ ಪ್ರಾರಂಭಿಸಲು ಸಂಸ್ಥೆ ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಲು ವಿಶ್ವವಿದ್ಯಾನಿಲಯದಿಂದ ನಿಯೋಜಿಸಲ್ಪಡುವ ಸಮಿತಿಯ ವರದಿಯನ್ನು ಆಧರಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯವನ್ನು ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಕಾಲೇಜು ಅಭಿವೃದ್ಧಿ ಪರಿಷತ್ತು – 57	
ವಿಷಯ ಸಂಖ್ಯೆ:	ಸಿಂ.10(c)/(08/26)

–: ಟಿಪ್ಪಣಿ :–

ವಿಷಯಃ **ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು – ಇಲ್ಲಿನ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಮಿತಿ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: 1. ಸಂಯೋಜನಾಧಿಕಾರಿಗಳು, ದಾ.ವಿ.ಘ.ಕಾ. ತುರುವನೂರು – ಇವರ ಪತ್ರ ಸಂ:ದಾವಿವಿ/ಘಕಾ/2025–26/173 ದಿನಾಂಕ:06.06.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.06.2026

****

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು, ಇಲ್ಲಿನ ಸಂಯೋಜನಾಧಿಕಾರಿಗಳು ಉಲ್ಲೇಖಿತ(1) ಪತ್ರದಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ **ವಿವಿಧ ಹೆಚ್ಚುವರಿ ಸ್ನಾತಕ ಪದವಿ** ಕೋರ್ಸ್/ಸಮೂಹಗಳಿಗೆ ಪ್ರವೇಶ ಮಿತಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2026–27ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಪದವಿ	ವಿಷಯ/ಸಮೂಹ	ಪ್ರವೇಶ ಮಿತಿ
1	ಬಿ.ಎ.	ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ – HEP	60
		ಇತಿಹಾಸ, ಅರ್ಥಶಾಸ್ತ್ರ, ಇಂಗ್ಲೀಷ್ – HEEn	60
		ಇತಿಹಾಸ, ರಾಜ್ಯಶಾಸ್ತ್ರ, ಇಂಗ್ಲೀಷ್ – HPEn	60
		ಇತಿಹಾಸ, ರಾಜ್ಯಶಾಸ್ತ್ರ, ಕನ್ನಡ – HPK	60

ತತ್ಸಂಬಂಧವಾಗಿ, ದಿನಾಂಕ:28.08.2026ರ ವಿದ್ಯಾವಿಷಯಕ ಪರಿಷತ್ ಸಭೆಯನಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಈ ಕುರಿತು ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜು ತುರುವನೂರು – ಕಾಲೇಜಿಗೆ 2026–27ನೇ ಶೈಕ್ಷಣಿಕ ಸಾಲಿನಿಂದ ಈ ಮೇಲ್ಕಂಡ ವಿವಿಧ ಹೆಚ್ಚುವರಿ ಸ್ನಾತಕ ಪದವಿ ಕೋರ್ಸ್/ಸಮೂಹಗಳಿಗೆ ಪ್ರವೇಶ ಮಿತಿ ನೀಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕಾಲೇಜು ಅಭಿವೃದ್ಧಿ ಪರಿಷತ್ತು – 58	
ವಿಷಯ ಸಂಖ್ಯೆ:	ಸಿ.10(d)/(08/26)

–: ಟಿಪ್ಪಣಿ :–

ವಿಷಯಃ **2026–27ನೇ ಶೈಕ್ಷಣಿಕ ಸಾಲಿಗೆ ಬಿ.ಕಾಂ. (AEDP) ಕೋರ್ಸುಗಳಿಗೆ ಪಠ್ಯಕ್ರಮ ರಚಿಸಿಕೊಡುವ ಕುರಿತು.**

ಉಲ್ಲೇಖ: 1. ಸರ್ಕಾರದ ಆದೇಶ ಪತ್ರ ಸಂ:ಇಡಿ 93 ಡಿಸಿಇ 2026(ಇ) ಬೆಂಗಳೂರು, ದಿನಾಂಕ:13.05.2026

2. ದಾವಿವಿ/ಸಿಡಿಸಿ/ಸಂಯೋ–155/2026–27/1610 ದಿನಾಂಕ:05.06.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಸರ್ಕಾರದ ಪತ್ರದನುಸಾರ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸರ್ಕಾರಿ ಕಾಲೇಜುಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಪದವಿಯ ಈ ಕೆಳಕಂಡ ಎಇಡಿಪಿ ಕೋರ್ಸುಗಳಿಗೆ ಸರ್ಕಾರ ಅನುಮತಿ ನೀಡಿರುತ್ತದೆ.

ಬಿ.ಕಾಂ. (AEDP)			
1	ವಾಣಿ ಸಕ್ಕರೆ ಸ.ಪ್ರ.ದ.ಕಾ. ಹಿರಿಯೂರು.	ನೂತನ ಕೋರ್ಸು(AEDP)	B.Com (E-Commerce Operations AEDP)
2	ಸ.ಪ್ರ.ದ.ಕಾ. ಹೊನ್ನಾಳಿ.	ನೂತನ ಕೋರ್ಸು(AEDP)	B.Com (BFSI AEDP)
3	ಹೆಚ್.ಪಿ.ಪಿ.ಸಿ.ಸ.ಪ್ರ.ದ.ಕಾ. ಚಳ್ಳಕೆರೆ	ನೂತನ ಕೋರ್ಸು(AEDP)	B.Com (Human Resource Operations AEDP)
4	ಸ.ಪ್ರ.ದ.ಕಾ. ಹೊಸದುರ್ಗ	ನೂತನ ಕೋರ್ಸು(AEDP)	B.Com. (Retail Operations AEDP)
5	ಸ.ಪ್ರ.ದ.ಕಾ. ಹೊಳಲ್ಕೆರೆ.	ನೂತನ ಕೋರ್ಸು(AEDP)	B.Com (BFSI AEDP)
6	ಸ.ಪ್ರ.ದ.ಕಾ. ಹರಿಹರ.	ನೂತನ ಕೋರ್ಸು(AEDP)	B.Com (Logistics AEDP)
7	ಸ.ಪ್ರ.ದ.ಮ.ಕಾ. ಚಿತ್ರದುರ್ಗ	ನೂತನ ಕೋರ್ಸು(AEDP)	B.Com. (Retail Operations AEDP)

ಅದರಂತೆ, ಉಲ್ಲೇಖ (2)ರಲ್ಲಿ ಈಗಾಗಲೇ ಸರ್ಕಾರಿ ಕಾಲೇಜುಗಳಿಗೆ ಸಂಯೋಜನಾ ಆದೇಶ ನೀಡಲಾಗಿರುತ್ತದೆ. ದಿನಾಂಕ:21.07.2026ರಂದು ನಡೆದ ಆನ್‌ಲೈನ್ ಸಭೆಯ ಚರ್ಚೆಯ ಬಳಿಕ ಮಾನ್ಯ ಕುಲಪತಿಗಳು ನಿರ್ದೇಶಿಸಿದಂತೆ ಸದರಿ ಹೊಸ ಕೋರ್ಸುಗಳಿಗೆ ಅಗತ್ಯ ಪಠ್ಯಕ್ರಮ ರಚಿಸುವ ಕುರಿತು ಸಂಬಂಧಪಟ್ಟ ವಿಭಾಗಕ್ಕೆ ಪತ್ರಿಸಲಾಗಿರುತ್ತದೆ.

ತತ್ಸಂಬಂಧವಾಗಿ, 2026–27ನೇ ಸಾಲಿನಿಂದ ಸರ್ಕಾರ ಅನುಮತಿ ನೀಡಿರುವ ಬಿ.ಕಾಂ.(AEDP) ಕೋರ್ಸುಗಳಿಗೆ ಸಂಯೋಜನೆ ಆದೇಶ ನೀಡಲಾಗಿರುತ್ತದೆ. ಈ ಕುರಿತು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ಸರ್ಕಾರದ ಆದೇಶಾನುಸಾರ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸರ್ಕಾರಿ ಕಾಲೇಜುಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಬಿ.ಕಾಂ. ಪದವಿಯ ಈ ಮೇಲ್ಕಂಡ ಎಇಡಿಪಿ ಕೋರ್ಸುಗಳಿಗೆ ಸಂಯೋಜನೆ ಆದೇಶ ನೀಡಿರುವುದಕ್ಕೆ ಹಾಗೂ ಪಠ್ಯಕ್ರಮ ರಚಿಸುವ ಕುರಿತು ಪತ್ರಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಕಾಲೇಜು ಅಭಿವೃದ್ಧಿ ಪರಿಷತ್ತು – 59	
ವಿಷಯ ಸಂಖ್ಯೆ:	ಸಿಂ.10(e)/(08/26)

–: ಟಿಪ್ಪಣಿ :–

ವಿಷಯಃ **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ School of Engineering Course ಮತ್ತು Bachelor of Computer Applications (BCA) ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ.**

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:07.08.2026

****

2027–28 ನೇ ಶೈಕ್ಷಣಿಕ ಸಾಲಿನಿಂದ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ **School of Engineering ಮತ್ತು Bachelor of Computer Applications (BCA)** ಪದವಿ ಕೋರ್ಸ್‌ಗಳನ್ನು ಪ್ರಾರಂಭಿಸಲು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ, ದಿನಾಂಕ:31.08.2026 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ 2027–28ನೇ ಶೈಕ್ಷಣಿಕ ಸಾಲಿನಿಂದ School of Engineering ಮತ್ತು Bachelor of Computer Applications (BCA) ಪದವಿ ಕೋರ್ಸ್‌ಗಳನ್ನು ಘಟಕ ಕಾಲೇಜುಗಳಲ್ಲಿ ಹಾಗೂ MBA/MCA ಕೋರ್ಸ್‌ಗಳನ್ನು ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗದಲ್ಲಿ ಪ್ರಾರಂಭಿಸಲು ಸಮಿತಿಯನ್ನು ರಚಿಸಿ ನಂತರ AICTE ನಿಯಮಾನುಸಾರ ಕೋರ್ಸುಗಳನ್ನು ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 60	
ವಿಷಯ ಸಂಖ್ಯೆ:	ಸಿ.11(a)/(08/26)

–: ಟಿಪ್ಪಣಿ :–

ವಿಷಯಃ **ವಿಶ್ವವಿದ್ಯಾನಿಲಯದ ಆವರಣದಲ್ಲಿ Day Care Center ನಿರ್ಮಾಣ ಮಾಡಿರುವ ಕುರಿತು.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆವರಣದಲ್ಲಿ Day Care Center ಕಾಮಗಾರಿಯನ್ನು ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲಾಗಿರುತ್ತದೆ. ಇದರ ವೆಚ್ಚ ರೂ.1,90,000/– ಆಗಿರುತ್ತದೆ.

ಆದ್ದರಿಂದ ಸದರಿ ಕಾಮಗಾರಿಯನ್ನು ನಿರ್ವಹಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಮತ್ತು ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.1,90,000/– (ರೂಪಾಯಿ ಒಂದು ಲಕ್ಷದ ತೊಂಬತ್ತು ಸಾವಿರ ಮಾತ್ರ)ಗಳನ್ನು ಪಾವತಿಸಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

:: ನಿರ್ಣಯ ::

ಯು.ಜಿ.ಸಿ ನಿಯಮಾವಳಿಗಳನುಸಾರ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ Day Care Center ಕಾಮಗಾರಿಯನ್ನು ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಕೈಗೊಂಡಿರುವುದರಿಂದ, ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.1,90,000/– ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 61	
ವಿಷಯ ಸಂಖ್ಯೆ:	ಸಿಂ.11(b)/(08/26)

–: ಟಿಪ್ಪಣಿ :–

ವಿಷಯಃ **ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗಕ್ಕೆ Aluminium Partition ನಿರ್ಮಾಣ ಕಾಮಗಾರಿ ಮಾಡಿರುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ಇವರ ಪತ್ರ ಸಂಖ್ಯೆ: ದಾವಿವಿ: ಶಿವಿ:2026–27/35 ದಿನಾಂಕ:02.06.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ 02 ಸಂಖ್ಯೆ ಸಹಾಯಕ ಪ್ರಾಧ್ಯಾಪಕರ ಕೊಠಡಿಗಳಿಗೆ ಮತ್ತು 02 ಸಂಖ್ಯೆ ತರಗತಿ ಕೊಠಡಿಗಳಿಗೆ Aluminium Partition ಮಾಡಿಸುವಂತೆ ಅಧ್ಯಕ್ಷರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಕಾಮಗಾರಿಯನ್ನು ನಿಯಮಾನುಸಾರ ದರಪಟ್ಟಿ ಆಹ್ವಾನಿಸಿ ಕ್ರಮ ಕೈಗೊಳ್ಳಲಾಗಿದೆ. ಇದರ ವೆಚ್ಚ ರೂ.3,01,930/– ಆಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಯನ್ನು ನಿರ್ವಹಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಮತ್ತು ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.3,01,930/– (ರೂಪಾಯಿ ಮೂರು ಲಕ್ಷದ ಒಂದು ಸಾವಿರದ ಒಂಬತ್ತುನೂರ ಮೂವತ್ತು ಮಾತ್ರ)ಗಳನ್ನು ಪಾವತಿಸಲು, ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ 02 ಸಂಖ್ಯೆ ಸಹಾಯಕ ಪ್ರಾಧ್ಯಾಪಕರ ಕೊಠಡಿಗಳಿಗೆ ಮತ್ತು 02 ಸಂಖ್ಯೆ ತರಗತಿ ಕೊಠಡಿಗಳಿಗೆ Aluminium Partition ನ್ನು ದರಪಟ್ಟಿ ಆಧಾರದ ಮೇಲೆ ಕೈಗೊಂಡಿರುವುದರಿಂದ, ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.3,01,930/– ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 62	
ವಿಷಯ ಸಂಖ್ಯೆ:	ಸಿಂ.11(c)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ಆವರಣದಲ್ಲಿ Women Cell ನಿರ್ಮಾಣ ಮಾಡಿರುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆವರಣದಲ್ಲಿ Women Cell ಕಾಮಗಾರಿಯನ್ನು ನಿಯಮಾಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲಾಗಿದ್ದು, ಇದರ ವೆಚ್ಚ ರೂ.3,60,000/– ಆಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಯನ್ನು ನಿರ್ವಹಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಮತ್ತು ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.3,60,000/– (ರೂಪಾಯಿ ಮೂರು ಲಕ್ಷದ ಅರವತ್ತು ಸಾವಿರ ಮಾತ್ರ)ಗಳನ್ನು ಪಾವತಿಸಲು, ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ Women Cell ನಿರ್ಮಾಣ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ಕೈಗೊಂಡಿರುವುದರಿಂದ, ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.3,60,000/– ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 63	
ವಿಷಯ ಸಂಖ್ಯೆ:	ಸಿಂ.11(d)/(08/26)

–: ಟಿಪ್ಪಣಿ :–

ವಿಷಯಃ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಕಛೇರಿಗೆ 10 KVA Online UPS and Battery ಗಳನ್ನು ಖರೀದಿಸಿ ಅಳವಡಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಕಛೇರಿಗೆ 10 KVA Online UPS and Battery ಗಳನ್ನು ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಅಂದಾಜು ಮೊತ್ತ ರೂ.5.00 ಲಕ್ಷದೊಳಗೆ ಖರೀದಿಸಿ ಅಳವಡಿಸಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರ ಕಛೇರಿಗೆ 10 KVA Online UPS and Battery ಗಳನ್ನು ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಿ ಅಳವಡಿಸಿರುವುದರಿಂದ ದರಪಟ್ಟಿಯಲ್ಲಿ ಆಯ್ಕೆಯಾದ ಸಂಸ್ಥೆಗೆ ರೂ.4,46,866/– ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 64	
ವಿಷಯ ಸಂಖ್ಯೆ:	ಸಿಂ.11(e)/(08/26)

–: ಟಿಪ್ಪಣಿ :–

ವಿಷಯಃ ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯಕ್ಕೆ Interactive Display ಮತ್ತು ಕಾರಿಡಾರ್‌ಗೆ CCTV ಅಳವಡಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಮಾನ್ಯ ಕುಲಪತಿಗಳ ಕಛೇರಿಗೆ Interactive Display ಮತ್ತು ಕಾರಿಡಾರ್‌ಗೆ CCTVಗಳನ್ನು ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಕ್ರಮಕೈಗೊಳ್ಳಲು ಅಂದಾಜು ವೆಚ್ಚ ರೂ.4,50,000/– ರಿಂದ ರೂ.5,00,000/– ಒಳಗಡೆ ಕಾಮಗಾರಿ ನಿರ್ವಹಿಸಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ವಿಷಯ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ ಮಾನ್ಯ ಕುಲಪತಿಗಳ ಕಛೇರಿಗೆ Interactive Display ಮತ್ತು ಕಾರಿಡಾರ್‌ಗೆ CCTV ಗಳನ್ನು ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಖರೀದಿಸಿ ಅಳವಡಿಸಿರುವುದರಿಂದ ದರಪಟ್ಟಿಯಲ್ಲಿ ಆಯ್ಕೆಯಾದ ಸಂಸ್ಥೆಯವರಿಗೆ ರೂ.4,90,125/–ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 65	
ವಿಷಯ ಸಂಖ್ಯೆ:	ಸಿ.ಂ.11(f)/(08/26)

–: ಟಿಪ್ಪಣಿ :–

ವಿಷಯಃ ವಾರ್ಷಿಕ ನಿರ್ವಹಣೆ (AMC) ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ಆವರಣದ ಹಾಗೂ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಕೋಷ್ಟಕದಲ್ಲಿರುವ ಕ್ರಮಸಂಖ್ಯೆ 01 ರಿಂದ 09ರಲ್ಲಿನ ಸಂಬಂಧಿಸಿದ ವಿಷಯಗಳಿಗೆ ವಾರ್ಷಿಕ ನಿರ್ವಹಣೆಯನ್ನು ನೀಡುವುದು ಅವಶ್ಯಕವಾಗಿರುತ್ತದೆ.

ಆದ್ದರಿಂದ, ಸದರಿ ವಿಷಯಗಳಿಗೆ ವಾರ್ಷಿಕ ನಿರ್ವಹಣೆ ಕಾರ್ಯ ಕೈಗೊಳ್ಳಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

–:ವಾರ್ಷಿಕ ನಿರ್ವಹಣೆ ವಿವರಗಳು:–

Sl. No.	Subject Name
1.	ಆಡಳಿತ ಭವನದಲ್ಲಿರುವ 30KVA ಸಾಮರ್ಥದ 3 ಸಂಖ್ಯೆಯ UPSಗಳನ್ನು ವಾರ್ಷಿಕ ನಿರ್ವಹಣೆ ಮಾಡುವ ಕುರಿತು.
2.	ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿರುವ Photocopier (Xerox machines)ಗಳ ವಾರ್ಷಿಕ ನಿರ್ವಹಣೆ AMCಗೆ ನೀಡಿರುವ ಕುರಿತು.
3.	ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ printerಗಳನ್ನು AMCಗೆ ನೀಡಿರುವ ಕುರಿತು.
4.	ವಿಶ್ವವಿದ್ಯಾನಿಲಯದ ಆಡಳಿತ ಭವನದಲ್ಲಿರುವ Desktop Computer ಗಳನ್ನು AMCಗೆ ನೀಡಿರುವ ಕುರಿತು.
5.	ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವಣದಲ್ಲಿರುವ MBA ಕಟ್ಟಡದಲ್ಲಿರುವ ಪ್ರಯೋಗಾಲಯಗಳ, ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾನಿಲಯ ಹಾಗೂ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದ ವಿಭಾಗಗಳ desktop computer ಗಳನ್ನು ವಾರ್ಷಿಕ ನಿರ್ವಹಣೆ (AMC) ನೀಡಿರುವ ಕುರಿತು.
6.	ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವಣದಲ್ಲಿರುವ English ಭಾಷಾ ಪ್ರಯೋಗಾಲಯ ಮತ್ತು Common Computer ಪ್ರಯೋಗಾಲಯಗಳಲ್ಲಿರುವ Desktop Computer ಗಳನ್ನು ವಾರ್ಷಿಕ ನಿರ್ವಹಣೆ (AMC) ನೀಡಿರುವ ಕುರಿತು.
7.	ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿವಿಧ ವಿಭಾಗಗಳ Projector ಗಳನ್ನು AMCಗೆ ನೀಡಿರುವ ಕುರಿತು.
8.	ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವಣದಲ್ಲಿರುವ CCTVಗಳನ್ನು ವಾರ್ಷಿಕ ನಿರ್ವಹಣೆ (AMC) ನೀಡಿರುವ ಕುರಿತು.
9.	ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ ಆವರಣದಲ್ಲಿರುವ ಹವಾನಿಯಂತ್ರಣಗಳನ್ನು (Air Conditioner) AMCಗೆ ನೀಡಿರುವ ಕುರಿತು.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆವರಣದ ಹಾಗೂ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ದೃಶ್ಯಕಲಾ ಮಹಾವಿದ್ಯಾಲಯ ಮತ್ತು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗಕ್ಕೆ ಸಂಬಂಧಿಸಿದಂತೆ ಈ ಮೇಲ್ಕಂಡ ಕೋಷ್ಟಕದಲ್ಲಿರುವ ಕ್ರಮ ಸಂಖ್ಯೆ 1 ರಿಂದ 9 ರ ವರೆಗೆ ನಮೂದಿಸಿರುವ ವಿಷಯಗಳಿಗೆ ವಾರ್ಷಿಕ ನಿರ್ವಹಣೆ (AMC) ನೀಡಲು ಮಾನ್ಯ ಕುಲಪತಿಗಳ ನಿರ್ದೇಶನದಂತೆ Estimation ಸಿದ್ಧಪಡಿಸಿ ಮುಂಬರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 66	
ವಿಷಯ ಸಂಖ್ಯೆ:	ಸಿಂ.11(g)/(08/26)

–: ಟಿಪ್ಪಣಿ :–

ವಿಷಯಃ **ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರಕ್ಕೆ UPS Battery (5KVA)ನ್ನು ಖರೀದಿಸುವ ಕುರಿತು.**

ಉಲ್ಲೇಖ: ನಿರ್ದೇಶಕರು, USIC, ಇವರ ಪತ್ರ ಸಂಖ್ಯೆ:ದಾವಿವಿ: ಯುಎಸ್ಐಸಿ:2025–26/38 ದಿನಾಂಕ:08.05.2025.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ UPS Battery ಗಳು ಹಾಳಾಗಿದ್ದು ಇದರಿಂದ Instrument ಗಳಿಗೆ ತೊಂದರೆ ಆಗುತ್ತದೆ. ಆದ್ದರಿಂದ, 5KVA UPS Battery ತುರ್ತಾಗಿ ಖರೀದಿಸಿ ಕೊಡುವಂತೆ ಉಲ್ಲೇಖಿತ ಪತ್ರದಲ್ಲಿ ನಿರ್ದೇಶಕರು, USIC, ಇವರು ಕೋರಿರುತ್ತಾರೆ. ಈ ಸಂಬಂಧ ವಿದ್ಯುತ್ S.R. ದರಗಳನ್ವಯ ಖರೀದಿಸಲು ಅವುಗಳ ಅಂದಾಜು ಮೊತ್ತ ರೂ. 4.90 ಲಕ್ಷಗಳು ಆಗುತ್ತದೆ. ಆದ್ದರಿಂದ ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಖರೀದಿಸಲು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ ಕೇಂದ್ರಕ್ಕೆ (USIC) ಹೊಸದಾಗಿ 5KVA UPS Battery ಗಳನ್ನು ವಿದ್ಯುತ್ S.R. ದರಗಳನ್ವಯ ಅಂದಾಜು ಮೊತ್ತ ರೂ. 4.90 ಲಕ್ಷಗಳ ಮಿತಿಯೊಳಗೆ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ನಿಯಮಾನುಸಾರ ಪರಿಶೀಲಿಸಿ ಮುಂದಿನ ಕ್ರಮ ವಹಿಸಲು ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 67	
ವಿಷಯ ಸಂಖ್ಯೆ:	ಸಿ೦.11(h)/(08/26)

–ಃ ಟಿಪ್ಪಣಿ ಃ–

ವಿಷಯಃ **MBA ಕಟ್ಟಡಕ್ಕೆ Sanitary & Plumbing ಸಾಮಾಗ್ರಿಗಳನ್ನು ಸರಬರಾಜು ಮಾಡಿದ ಬಾಬ್ತು ರೂ. 4,90,000/– ಗಳನ್ನು ಪಾವತಿಸುವ ಕುರಿತು.**

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದ MBA ಕಟ್ಟಡದಲ್ಲಿರುವ ವಿಭಾಗದ ಅಧ್ಯಕ್ಷರ ಹಾಗೂ ವಿವಿಧ ಶೌಚಾಲಯಗಳಿಗೆ Sanitary & Plumbing ಸಾಮಾಗ್ರಿಗಳನ್ನು ಸರಬರಾಜು ಮಾಡಲು ದರಪಟ್ಟಿ ಕರೆಯಲಾಗಿತ್ತು. ಅದರಲ್ಲಿ ಸ್ಪರ್ಧಾತ್ಮಕ ದರಗಳಲ್ಲಿ ಆಯ್ಕೆಯಾದ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ ಕೆಲಸವನ್ನು ನಿರ್ವಹಿಸಿದ್ದು, ಅವರಿಗೆ ರೂ. 4,90,000/– ಗಳನ್ನು ಪಾವತಿಸಲು ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಆವರಣದ MBA ಕಟ್ಟಡದಲ್ಲಿರುವ ವಿಭಾಗದ ಅಧ್ಯಕ್ಷರ ಹಾಗೂ ವಿವಿಧ ಶೌಚಾಲಯಗಳಿಗೆ Sanitary & Plumbing ಸಾಮಾಗ್ರಿಗಳನ್ನು ಸರಬರಾಜು ಮಾಡಲು ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಆಯ್ಕೆಯಾದ ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಿರುವುದರಿಂದ ಸದರಿಯವರಿಗೆ ರೂ.4,90,000/– ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 68	
ವಿಷಯ ಸಂಖ್ಯೆ:	ಸಿ.11(i)/(08/26)

–: ಟಿಪ್ಪಣಿ :–

ವಿಷಯಃ **MCA ಅಧ್ಯಯನ ವಿಭಾಗಕ್ಕೆ ಅಗತ್ಯ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವ ಕುರಿತು.**

ಉಲ್ಲೇಖ: ಅಧ್ಯಕ್ಷರು, MCA ಅಧ್ಯಯನ ವಿಭಾಗ, ಇವರ ಪತ್ರ ಸಂ: ದಾವಿವಿ/ಎಂ.ಸಿ.ಎ 2026–27/555 ದಿನಾಂಕ:14.08.2026

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ಹೊಸ ವಿಜ್ಞಾನ ಕಟ್ಟಡದಲ್ಲಿ ನೂತನವಾಗಿ ನಿರ್ಮಾಣವಾಗಿರುವ MCA ಅಧ್ಯಯನ ವಿಭಾಗದ ಕಟ್ಟಡದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಮತ್ತು ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಹಿತದೃಷ್ಟಿಯಿಂದ ಕಟ್ಟಡಕ್ಕೆ ಅಗ್ನಿ ಸುರಕ್ಷತೆಯ (Fire Safety for Buildings) ಬಗ್ಗೆ ಕ್ರಮಕೈಗೊಳ್ಳಲು, ಎರಡು ಪ್ರಯೋಗಾಲಯಗಳಿಗೆ CCTV ಕ್ಯಾಮರಾಗಳು ಹಾಗೂ ಅದಕ್ಕೆ ಸಂಬಂಧಿಸಿದ ಉಪಕರಣಗಳ ಅವಶ್ಯಕತೆ ಇರುವುದರಿಂದ ಮತ್ತು ಎರಡು ಪ್ರಯೋಗಾಲಯಗಳಿಗೆ 20 ಟನ್ ಸಾಮರ್ಥ್ಯದ ಹವಾನಿಯಂತ್ರಕ ಯಂತ್ರಗಳ (Air Conditioners) ಅವಶ್ಯಕತೆ ಇರುವುದರಿಂದ (AICTE Hand book 2024-27ರ ನಿಯಮಗಳ ಪ್ರಕಾರ) ಖರೀದಿಸಿ ಅಳವಡಿಸಿಕೊಡುವಂತೆ ಅಧ್ಯಕ್ಷರು, MCA ಅಧ್ಯಯನ ವಿಭಾಗ, ಇವರು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಸಂಬಂಧಿಸಿದ ಇಲಾಖೆ ಮತ್ತು ನಿಯಮಾನುಸಾರ ದರಪಟ್ಟಿ ಆಧಾರದ ಮೇಲೆ ಕ್ರಮಕೈಗೊಳ್ಳಲು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಕೋರಿದೆ.

Sl. No.	Name of the Work
1	MCA ಅಧ್ಯಯನ ವಿಭಾಗದ ಕಟ್ಟಡದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ಮತ್ತು ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಹಿತದೃಷ್ಟಿಯಿಂದ ಕಟ್ಟಡಕ್ಕೆ ಅಗ್ನಿ ಸುರಕ್ಷತೆಯ (Fire Safety for Buildings) ಬಗ್ಗೆ ಕ್ರಮಕೈಗೊಳ್ಳುವ ಕುರಿತು.
2	MCA ಅಧ್ಯಯನ ವಿಭಾಗ ಕಟ್ಟಡಗಳಲ್ಲಿರುವ ಎರಡು ಪ್ರಯೋಗಾಲಯಗಳಿಗೆ CCTV ಕ್ಯಾಮರಾಗಳು ಹಾಗೂ ಅದಕ್ಕೆ ಸಂಬಂಧಿಸಿದ ಉಪಕರಣಗಳನ್ನು ಅಳವಡಿಸುವ ಕುರಿತು.
3	ಎರಡು ಪ್ರಯೋಗಾಲಯಗಳಿಗೆ 10 ಟನ್ ಸಾಮರ್ಥ್ಯದ 02 ಸಂಖ್ಯೆ ಹವಾನಿಯಂತ್ರಕ (Air Conditioners) ಗಳನ್ನು ಅಳವಡಿಸುವ ಕುರಿತು.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಹೊಸ ವಿಜ್ಞಾನ ಕಟ್ಟಡದ Master of Comupter Application (MCA) ವಿಭಾಗಕ್ಕೆ ಬೇಕಾಗಿರುವ ಈ ಮೇಲ್ಕಂಡ ಪಟ್ಟಿಯಲ್ಲಿ ನಮೂದಿಸಿರುವ 03 ಅಂಶಗಳನ್ನು ದರಪಟ್ಟಿ ಆಧಾರದ ಮೇಲೆ ಕ್ರಮವಹಿಸಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 69	
ವಿಷಯ ಸಂಖ್ಯೆ:	ಸಿಂ.11(j)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ಆವರಣದಲ್ಲಿ ಪುರುಷ ಮತ್ತು ಮಹಿಳಾ ವಸತಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸ್ಥಳಾವಕಾಶ ಒದಗಿಸುವ ಕುರಿತು.

****

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ಪುರುಷ ಮತ್ತು ಮಹಿಳಾ ವಸತಿ ನಿಲಯಗಳು ಸಂಪೂರ್ಣ ಶಿಥಿಲಾವ್ಯವಸ್ಥೆಗೆ ತಲುಪಿದ್ದು, ಹೊಸ ವಿದ್ಯಾರ್ಥಿ/ವಿದ್ಯಾರ್ಥಿನಿ ನಿಲಯಗಳ ನಿರ್ಮಾಣದ ಅವಶ್ಯಕತೆಯಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣ ಯೋಜನೆಯಡಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯೋಜನೆಯಡಿಯಲ್ಲಿ ಪುರುಷ ಮತ್ತು ಮಹಿಳಾ ವಸತಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಶಿವಗಂಗೋತ್ರಿ ಆವರಣದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

ತತ್ಸಂಬಂಧ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಮೇಲ್ಕಂಡ ಯೋಜನೆಯಡಿಯಲ್ಲಿ ಪುರುಷ ಮತ್ತು ಮಹಿಳಾ ವಸತಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಲುವಾಗಿ ಸಂಬಂಧಿಸಿದ ಇಲಾಖೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ದಾವಣಗೆರೆ ವಿಶ್ವವಿದ್ಯಾಲಯದ ಶಿವಗಂಗೋತ್ರಿ ಆವರಣದಲ್ಲಿ ಸ್ಥಳಾವಕಾಶ(ಜಾಗ)ವನ್ನು ಒದಗಿಸುವ ಬಗ್ಗೆ ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

:: ನಿರ್ಣಯ ::

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣ ಯೋಜನೆಯಡಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯೋಜನೆಯಡಿಯಲ್ಲಿ – ವಿಶ್ವವಿದ್ಯಾನಿಲಯದಲ್ಲಿ ಪುರುಷ ಮತ್ತು ಮಹಿಳಾ ವಸತಿ ನಿಲಯಗಳ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಸಲುವಾಗಿ ಸಂಬಂಧಿಸಿದ ಇಲಾಖೆಗಳೊಂದಿಗೆ ಹಾಗೂ ಸರ್ಕಾರದ ಯಾವುದೇ ಯೋಜನೆಯಡಿಯಲ್ಲಿ ವಸತಿ ನಿಲಯಗಳನ್ನು ನಿರ್ಮಿಸಲು ವಿಶ್ವವಿದ್ಯಾಲಯದ ಶಿವಗಂಗೋತ್ರಿ ಹಾಗೂ ಜ್ಞಾನಗಂಗೋತ್ರಿ ಆವರಣದಲ್ಲಿ ಸ್ಥಳಾವಕಾಶ(ಜಾಗ)ವನ್ನು ಒದಗಿಸಲು ಸಭೆಯು ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 70	
ವಿಷಯ ಸಂಖ್ಯೆ:	ಸಿಂ.11(k)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ತುರುವನೂರು ಘಟಕ ಕಾಲೇಜಿನ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದ ಬಗ್ಗೆ.

ಉಲ್ಲೇಖ: 1. ನಂ.ಎಲ್.ಎ.ಕ್ಯೂ./ಸಿ.ಆರ್/03/2025–26ದಿನಾಂಕ:29.06 .2026
2. ನಂ.ಎಲ್.ಎ.ಕ್ಯೂ./ಸಿ.ಆರ್/03/2025–26 ದಿನಾಂಕ:27.07.2026

****

ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಚಿತ್ರದುರ್ಗ ತಾಲ್ಲೂಕು, ತುರುವನೂರು ಹೋಬಳಿ, ತುರುವನೂರು ಗ್ರಾಮದ ಸರ್ವೆ ನಂ. 686/3ರಲ್ಲಿ 0–36 ಗುಂಟೆ, ಸರ್ವೆ ನಂ. 686/5ರಲ್ಲಿ 0–36 ಗುಂಟೆ ಮತ್ತು 685/3ರಲ್ಲಿ 0–12 ಗುಂಟೆ ಜಮೀನು, ಒಟ್ಟು 2–04 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಭೂಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ, ವಿಶ್ವವಿದ್ಯಾನಿಲಯದ ನಿಧಿಯಿಂದ ರೂ.25,20,000/–ಗಳನ್ನು ಆದೇಶ ಸಂಖ್ಯೆ:ದಾವಿವಿ:ಇಂಜಿ:94 /ಕಾಪಾಅ/2024–25/3707 ದಿನಾಂಕ: 15.01.2025ರಂದು ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ, ಇವರಿಗೆ ಈಗಾಗಲೇ ಪಾವತಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (1) ಮತ್ತು (2)ರ ಪತ್ರದಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದ ಬಾಕಿ ಮೊತ್ತ ರೂ. 29,90,525/–ಗಳನ್ನು ಠೇವಣಿಕರಿಸಲು ಕೋರಿರುತ್ತಾರೆ. ಸದರಿ ವಿಷಯದ ಕುರಿತಂತೆ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ:19.06.2025ರಂದು ಎ.ಎ.ಕ್ಯೂ.ಸಿ.ಆರದ.3/2019–20ರ ದಿನಾಂಕ:17.12.2025 ರಂದು ಭೂಸ್ವಾಧೀನ ಪ್ರಕ್ರಿಯೆಗೆ ತಡೆಯಾಜ್ಞೆ ಆದೇಶವನ್ನು ನೀಡಿರುತ್ತದೆ. ಆದ ಕಾರಣ ಪ್ರಕರಣ ಇತ್ಯರ್ಥವಾಗುವವರೆಗೂ ಠೇವಣೀಕರಿಸುವ ಅಗತ್ಯತೆ ಕಂಡುಬರುವುದಿಲ್ಲವಾದ್ದರಿಂದ ಯಥಾಸ್ಥಿಯಲ್ಲಿ ಮುಂದುವರೆದು **ಕರ್ನಾಟಕ ಉಚ್ಚ ನ್ಯಾಯಾಲಯ ಅಂತಿಮ ತೀರ್ಪು ನೀಡಿದ ನಂತರ ಸೂಕ್ತ ಕ್ರಮ ಕೈಗೊಳ್ಳಲು** ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ವಿಷಯ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಚಿತ್ರದುರ್ಗ ತಾಲ್ಲೂಕು, ತುರುವನೂರು ಹೋಬಳಿ, ತುರುವನೂರು ಘಟಕ ಕಾಲೇಜು ಜಮೀನಿನ ಭೂಸ್ವಾಧಿನಕ್ಕೆ ಸಂಬಂಧಿಸಿದ ಬಾಕಿ ಮೊತ್ತವನ್ನು ಉಪ–ವಿಭಾಗಾಧಿಕಾರಿಗಳಿಂದ ದಿನಾಂಕ:30.07.2026 ರಂದು ಬಂದ ಪತ್ರದಂತೆ ಕ್ರಮವಹಿಸುವುದು ಹಾಗೂ ಮಾನ್ಯ ಉಚ್ಚನ್ಯಾಯಾಲಯದ ಪ್ರಕರಣವನ್ನು ಇತ್ಯರ್ಥಗೊಳಿಸಲು ಮತ್ತು ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 71	
ವಿಷಯ ಸಂಖ್ಯೆ:	ಸಿಂ.11(1)/(08/26)

–ಃ ಟಿಪ್ಪಣಿ ಃ–

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಮಹಿಳಾ ಮತ್ತು ಪುರುಷ ವಸತಿ ನಿಲಯಗಳ ನವೀಕರಣ/ದುರಸ್ಥಿ ಕಾಮಗಾರಿ ಕೈಗೊಂಡಿರುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ:29.07.2026

****

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ 03 ಮಹಿಳಾ ವಸತಿ ನಿಲಯ ಮತ್ತು 03 ಪುರುಷ ವಸತಿ ನಿಲಯಗಳ ಕಟ್ಟಡಗಳು ಹಳೆಯದ್ದಾಗಿದ್ದು, ತುಂಬಾ ಹಾಳಾಗಿರುವುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಸತಿ ನಿಲಯಗಳ ನವೀಕರಣ/ದುರಸ್ಥಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳುವುದು ಅವಶ್ಯಕವಾಗಿದ್ದ ಕಾರಣ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ ಈಗಾಗಲೇ 03 ಮಹಿಳಾ ವಸತಿ ನಿಲಯದ ಕಟ್ಟಡಗಳ ಕಾಮಗಾರಿಯನ್ನು ಮಾತ್ರ ಪ್ರಾರಂಭಿಲಾಗಿದೆ. 03 ಪುರುಷ ವಸತಿ ನಿಲಯದ ಕಟ್ಟಡ ಕಾಮಗಾರಿಯನ್ನು ಇನ್ನೂ ಪ್ರಾರಂಬಿಸಬೇಕಾಗಿರುತ್ತದೆ.

ಮುಂದುವರೆದು, ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಗುಣವಾಗಿ ಮುಂಗಡ ತೇವಣಿ ವಂತಿಗೆ ಆಧಾರದ ಮೇಲೆ ಪಿ.ಡಬ್ಲೂ.ಡಿ., ಎಸ್ ಆರ್, ದರಗಳನ್ವಯ ಅಂದಾಜು ಪಟ್ಟಿ ಪಡೆದುಕೊಂಡು ಸರ್ಕಾರಿ ಸ್ವಯತ್ತ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್, ಬೆಂಗಳೂರು, ಇವರಿಂದ ಕಾಮಗಾರಿ ನಿರ್ವಹಿಸಲು ಮಾನ್ಯ ಕುಲಪತಿಗಳು ಅನುಮೋದನೆ ನೀಡಿ ಆದೇಶಿಸಿರುತ್ತಾರೆ.

ಈಗಾಗಲೇ ಪ್ರಾರಂಬಿಸಲಾದ 03 ಮಹಿಳಾ ವಸತಿ ನಿಲಯಗಳ ಕಟ್ಟಡ ಕಾಮಗಾರಿಗೆ ಘಟನೋತ್ತರ ಹಾಗೂ ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಗುಣವಾಗಿ ಮುಂದಿನ ದಿನಗಳಲ್ಲಿ 03 ಪುರುಷ ವಸತಿ ನಿಲಯದ ಕಟ್ಟಡಗಳ ದುರಸ್ಥಿ ಕಾಮಗಾರಿಯನ್ನು ನಿರ್ವಹಿಸಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ವಿಷಯ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ 03 ಮಹಿಳಾ ವಸತಿ ನಿಲಯ ಮತ್ತು 03 ಪುರುಷ ವಸತಿ ನಿಲಯಗಳ ಕಟ್ಟಡಗಳ ನವೀಕರಣ/ದುರಸ್ಥಿ ಕಾಮಗಾರಿಗೆ ಸಂಬಂಧಿಸಿದಂತೆ ಈಗಾಗಲೇ ಸರಸ್ವತಿ ವಸತಿ ನಿಲಯ ಹಾಗೂ ಬ್ರಹ್ಮಪುತ್ರ ವಸತಿ ನಿಲಯಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಉಳಿದ ವಸತಿ ನಿಲಯಗಳ ಕಾಮಗಾರಿಯನ್ನು ಮುಂಗಡ ತೇವಣಿ ವಂತಿಗೆ ಆಧಾರದ ಮೇಲೆ ಪಿ.ಡಬ್ಲೂ.ಡಿ., ಎಸ್.ಆರ್, ದರಗಳನ್ವಯ ಅಂದಾಜು ಪಟ್ಟಿ ಪಡೆದುಕೊಂಡು ಸರ್ಕಾರಿ ಸ್ವಾಯತ್ತ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಹ್ಯಾಬಿಟೇಟ್ ಸೆಂಟರ್, ಬೆಂಗಳೂರು, ಇವರಿಂದ ವಿಶ್ವವಿದ್ಯಾನಿಲಯದ ಆರ್ಥಿಕ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಕಾಮಗಾರಿಯನ್ನು ನಿಯಮಾನುಸಾರ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 72	
ವಿಷಯ ಸಂಖ್ಯೆ:	ಸಿ.11(m)/(08/26)

–ಃ ಟಿಪ್ಪಣಿ ಃ–

ವಿಷಯಃ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ ಬಣ್ಣದ ಲೇಪನ ಮಾಡುವ ಕುರಿತು.

****

ದೃಶ್ಯಕಲಾ ಮಹಾವಿದ್ಯಾನಿಲಯದ ಆವರಣದಲ್ಲಿರುವ ಮಾನ್ಯ ಕುಲಪತಿಗಳ ವಸತಿ ಗೃಹದಲ್ಲಿ 2017 ರಲ್ಲಿಯ ಹೊಸದಾಗಿ ಕಟ್ಟಡ ನಿರ್ಮಾಣವಾದಾಗಿನಿಂದ ಇಲ್ಲಿಯವರೆಗೆ ಕಟ್ಟಡದ ಒಳ/ಹೊರ ಭಾಗಕ್ಕೆ ಬಣ್ಣದ ಲೇಪನ ಮಾಡಿರುವುದಿಲ್ಲ. ಆದ್ದರಿಂದ, ರೂ.5,00,000/– (ರೂಪಾಯಿ ಐದು ಲಕ್ಷ)ದ ಮಿತಿಯೊಳಗೆ ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಬಣ್ಣದ ಲೇಪನ ಕಾಮಗಾರಿ ಕೈಗೊಳ್ಳಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾನಿಲಯದ ಆವರಣದಲ್ಲಿರುವ ಮಾನ್ಯ ಕುಲಪತಿಗಳ ವಸತಿ ಗೃಹಕ್ಕೆ ಬಣ್ಣದ ಲೇಪನ ಮಾಡುವ ಕಾಮಗಾರಿಯನ್ನು ಅಂದಾಜು ಮೊತ್ತ ರೂ.5.00 ಲಕ್ಷದ ಮಿತಿಯೊಳಗೆ ಕಟ್ಟಡ ದುರಸ್ಥಿಗೆ ಬರದಂತೆ ಅವಶ್ಯಕತೆ ಇದ್ದಲ್ಲಿ ಡ್ಯಾಂ ಪ್ರೂಫ್/ವಾಟರ್ ಪ್ರೂಫ್ ಮಾಡಿಸಲು ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿ ಆಧಾರದ ಮೇಲೆ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ - 73	
ವಿಷಯ ಸಂಖ್ಯೆ:	ಸಿಂ.11(n)/(08/26)

–: ಟಿಪ್ಪಣಿ :–

ವಿಷಯಃ **ದಾವಣಗೆರೆ ವಿಶ್ವವಿದ್ಯಾನಿಲಯದ 2K Corporate Documentary Film Video ಮಾಡಿಸುವ ಕುರಿತು.**

****

ದಾವಣಗೆರೆ ವಿಶ್ವವಿದ್ಯಾನಿಲಯದ ಕುರಿತಾದ 2k Corporate Documentry Film Video ಮಾಡಿಸುವ ಅವಶ್ಯಕತೆ ಇದ್ದು, ಈ Documentry Film Video ದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ Concept Development, Documentary Script, Professional shooting (HD), Multi camera production, Corporate style storytelling, Faculty, Student Interviews department highlights, drown aerial cinematography ಈ ರೀತಿಯಾದ scope of work ಗಳನ್ನೊಳಗೊಂಡ HD Video ಮಾಡಿಸಲು ದರಪಟ್ಟಿ ಕರೆಯಲಾಗಿತ್ತು. ಅದರಲ್ಲಿ ನಿಯಮಾನುಸಾರ ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಭಾಗವಹಿಸಿ ಕಡಿಮೆ ದರ (L_1) ನಮೂದಿಸಿದ ಸಂಸ್ಥೆಗೆ ಕಾರ್ಯಾದೇಶ ನೀಡಲಾಗಿದ್ದು, ಕೆಲಸ ನಿರ್ವಹಿಸಿದ ನಂತರ ಸಂಬಂಧಿಸಿದವರಿಗೆ ರೂ.4,75,000/–ಗಳನ್ನು ಪಾವತಿಸಲು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಕುರಿತಾದ 2k Corporate Documentry Film Video ದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ ಕುರಿತು ಈ ಮೇಲ್ಕಂಡಂತೆ ವಿವರಿಸಲಾದ ರೀತಿಯಲ್ಲಿ Scope of Work ಗಳನ್ನೊಳಗೊಂಡ HD Video ವನ್ನು ಸ್ಪರ್ಧಾತ್ಮಕ ದರಪಟ್ಟಿಯ ಆಧಾರ ಮೇಲೆ ಕೈಗೊಂಡಿರುವುದರಿಂದ, ಕಡಿಮೆ ದರ ನಮೂದಿಸಿದ L_1 ಸಂಸ್ಥೆಗೆ ರೂ.4,75,000/–ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 74	
ವಿಷಯ ಸಂಖ್ಯೆ:	ಸಿ.11(ಂ)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಜಿ.ಆರ್. ಹಳ್ಳಿ, ಚಿತ್ರದುರ್ಗ ಆವರಣದ ಕಟ್ಟಡಗಳ ಮೇಲ್ಛಾವಣಿ ಮೇಲೆ ಹೊಸದಾಗಿ ಕೊಠಡಿಗಳು ಹಾಗೂ ಲ್ಯಾಬ್‌ಗಳನ್ನು ನಿರ್ಮಿಸುವ ಕುರಿತು.

ಉಲ್ಲೇಖ: ಡೀನರು ಮತ್ತು ನಿರ್ದೇಶಕರು ಇವರ ಪತ್ರಸಂಖ್ಯೆ:ಚಿವೈಕಾ.ಚಿ/ಅಭಿವೃದ್ಧಿ/ 528/2026–27 ದಿನಾಂಕ:29.08.2026

****

ದಾವಣಗೆರೆ ವಿಶ್ವವಿದ್ಯಾನಿಲಯದ ಚಿತ್ರದುರ್ಗ ಜಿಲ್ಲೆಯ ಗುಡ್ಡದ ರಂಗವ್ವನಹಳ್ಳಿಯಲ್ಲಿರುವ ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ (Block - 1 ಮತ್ತು Block – 2/ Science and Arts buildings) ಕಟ್ಟಡಗಳಲ್ಲಿ ಮುಂದಿನ ಶೈಕ್ಷಣಿಕ ಸಾಲಿನ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಕೊಠಡಿಗಳು ಮತ್ತು ಲ್ಯಾಬ್ ಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ, ಪ್ರಸ್ತುತ ಇರುವ ವಿಜ್ಞಾನ Block - 1 ಮತ್ತು ಕಲಾ ವಿಭಾಗಗಳ Block – 2 ಕಟ್ಟಡಗಳ ಮೇಲ್ಛಾವಣಿಯ (Terrace) ಮೇಲೆ Steel Structure ಹಾಗೂ GI Sheet Roofing ಬಳಸಿ ಹೊಸ ಕೊಠಡಿಗಳನ್ನು ನಿರ್ಮಿಸಲು ಡೀನ್ ಮತ್ತು ನಿರ್ದೇಶಕರು, ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಚಿತ್ರದುರ್ಗ ಇವರು ಉಲ್ಲೇಖಿತ ಪತ್ರದನ್ವಯ ಮನವಿ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ:31.08.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜಿ.ಆರ್. ಹಳ್ಳಿ, ಚಿತ್ರದುರ್ಗದ ಆವರಣದಲ್ಲಿರುವ ಕಟ್ಟಡಗಳಲ್ಲಿ ಮುಂದಿನ 2027–28ನೇ ಶೈಕ್ಷಣಿಕ ಸಾಲಿನ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ಕೊಠಡಿಗಳು ಮತ್ತು ಲ್ಯಾಬ್‌ಗಳನ್ನು Block - 1 ಮತ್ತು Block – 2 (Science and Arts Buildings) ಮೇಲ್ಛಾವಣಿಯ (Terrace) ಮೇಲೆ Steel Structure ಹಾಗೂ GI Sheet Roofing ಬಳಸಿ ಹೊಸ ಕೊಠಡಿಗಳನ್ನು ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳ ಪಾಠ ಪ್ರವಚನಕ್ಕೆ ಅಡ್ಡಿಯಾಗದಂತೆ, ಪ್ರಸ್ತುತ ಕಟ್ಟಡಗಳನ್ನು ಹಾನಿಗೊಳಿಸದಂತೆ ಹಾಗೂ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ನಿರ್ದೇಶನ ಹಾಗೂ ಷರತ್ತಿಗೊಳಪಟ್ಟು ನಿರ್ಮಿಸಿಕೊಳ್ಳಲು – ಡೀನ್ ಮತ್ತು ನಿರ್ದೇಶಕರು, ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಚಿತ್ರದುರ್ಗ ಇವರಿಗೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

ಇಂಜಿನಿಯರಿಂಗ್ ವಿಭಾಗ – 75	
ವಿಷಯ ಸಂಖ್ಯೆ:	ಸಿ೦.11(೦)/(08/26)

–ಃ ಟಿಪ್ಪಣಿ ಃ–

ವಿಷಯಃ ವಿಶ್ವವಿದ್ಯಾನಿಲಯದ ವಿವಿಧ ಕಛೇರಿಗಳು, ವಿವಿಧ ವಿಭಾಗಗಳು ಮತ್ತು ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯಗಳಲ್ಲಿನ Xerox Machine ಹಾಗೂ Printer ಗಳ ರಿಪೇರಿ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ವಿವಿಧ ಕಛೇರಿಗಳು, ವಿವಿಧ ವಿಭಾಗಗಳು ಮತ್ತು ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯಗಳಲ್ಲಿನ Xerox Machine ಹಾಗೂ Printer ಗಳ ರಿಪೇರಿ ಮತ್ತು ರಿಫಿಲ್ಲಿಂಗ್ (ಕಾಟ್ರಿಡ್ಜ್) ಮಾಡಿಸಿರುವುದಕ್ಕೆ ಘಟನೋತ್ತರ ಅನುಮೋದನೆ ಮತ್ತು ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಆಯ್ಕೆಯಾದ L_1 ಸಂಸ್ಥೆಗೆ ರೂ.1,93,103.00 (ರೂಪಾಯಿ ಒಂದು ಲಕ್ಷದ ತೊಂಬತ್ಮೂರು ಸಾವಿರದ ಒಂದುನೂರ ಮೂರು ಮಾತ್ರ) ಗಳನ್ನು ಪಾವತಿಸಲು ದಿನಾಂಕ:31.08.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ವಿಷಯ ಸಲ್ಲಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ವಿವಿಧ ಕಛೇರಿಗಳು, ವಿವಿಧ ವಿಭಾಗಗಳು ಮತ್ತು ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿನ Xerox Machine ಹಾಗೂ Printer ಗಳ ರಿಪೇರಿ ಮತ್ತು Printer Cartridge ರಿಫಿಲ್ಲಿಂಗ್ ಮಾಡಿಸುವ ಕೆಲಸವನ್ನು ಸ್ಪರ್ಧಾತ್ಮಕ ದರಪಟ್ಟಿಯಲ್ಲಿ ಆಯ್ಕೆಯಾದ ಸಂಸ್ಥೆಯ ಮೂಲಕ ಕೈಗೊಂಡಿರುವುದರಿಂದ ಕೆಲಸ ನಿರ್ವಹಿಸಿದ ಬಾಬ್ತು ರೂ.1,93,103/– ಗಳನ್ನು ಸದರಿ ಸಂಸ್ಥೆಗೆ ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ –76	
ವಿಷಯ ಸಂಖ್ಯೆ:	ಸಿಂ.01(e)/(08/26)

–: ಟಿಪ್ಪಣಿ :–

ವಿಷಯಃ ಶ್ರೀ ದ್ಯಾಮಪ್ಪ, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪ್ರಸ್ತಾವನೆ ಕುರಿತು.

****

ಶ್ರೀ ದ್ಯಾಮಪ್ಪ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆಯ ಕುರಿತು.

ಶೋಭಾನಾಯ್ಕ ಹೆಚ್, ಹಂಗಾಮಿ ಕಿರಿಯ ಸಹಾಯಕರು (ಸಂಚಿತ ವೇತನ) ಇವರ ಹುದ್ದೆಯನ್ನು ಖಾಯಂಗೊಳಿಸುವ ಕುರಿತು ಪರಿಶೀಲಿಸಿ ಮುಂದಿನ ದಿನಗಳಲ್ಲಿ ಸರ್ಕಾರದ ಮಟ್ಟದಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿದ ಕಾರ್ಯದರ್ಶಿಗಳು/ ಅಧೀನ ಕಾರ್ಯದರ್ಶಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಕ್ರಮವಹಿಸಲು ನಿರ್ಣಯಿಸಲಾಯಿತು.

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಕುಲಪತಿಯಾಗಿ ನೇಮಕಾತಿ ಹೊಂದಿ, ಅಧಿಕಾರ ವಹಿಸಿಕೊಂಡ ಮೇಲೆ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ವಿಷಯಗಳ ಕುರಿತು ವಿವರವಾಗಿ ತಿಳಿಯಲು ಸ್ವಲ್ಪ ಕಾಲಾವಕಾಶ ಬೇಕಾಗಿದ್ದರಿಂದ ಹಾಗೂ ಆಗಸ್ಟ್–2026ರ ಮಾಹೆಯಲ್ಲಿ ಕರ್ನಾಟಕ ಸರ್ಕಾರದ ವಿಧಾನ ಮಂಡಲದ ಅಧಿವೇಶನಗಳು ಜರುಗಿದ್ದರಿಂದ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಆಯಕ್ತರು, ಕಾಲೇಜು ಶಿಕ್ಷಣ ಇಲಾಖೆ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ ಇವರುಗಳು ಸದಸ್ಯರುಗಳಾಗಿರುವುದರಿಂದ ಆ ಸಮಯದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಸಭೆಯನ್ನು ಏರ್ಪಡಿಸಲು ಸಾಧ್ಯವಾಗದ ಕಾರಣ ಸಭೆಯನ್ನು ಏರ್ಪಡಿಸಲು ತಡವಾಗಿರುತ್ತದೆಂದು ಹಾಗೂ ದಿನಾಂಕ:28.08.2026 ರಂದು ವಿದ್ಯಾವಿಷಯಕ ಪರಿಷತ್ ಸಭೆ ಹಾಗೂ ಹಣಕಾಸು ಸಮಿತಿ ಸಭೆಯನ್ನು ಏರ್ಪಡಿಸಿದ ನಂತರ ಸದರಿ ಸಭೆಯನ್ನು ಏರ್ಪಡಿಸಲಾಗಿರುತ್ತದೆಯೆಂದು ಸಭೆಗೆ ತಿಳಿಸಿದರು.

2026–27ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಪ್ರವೇಶಾತಿಯನ್ನು ಹೆಚ್ಚಿಸಲು – ವಿಶ್ವವಿದ್ಯಾನಿಲಯದಿಂದ ಫೋನ್–ಇನ್–ಕಾರ್ಯಕ್ರಮ, ಪತ್ರಿಕಾ ಪ್ರಕಟಣೆ, ಸಾಮಾಜಿಕ ಮಾಧ್ಯಮದಲ್ಲಿ ಪ್ರವೇಶಾತಿ ಬಗ್ಗೆ ಜಾಹಿರಾತು ಹಾಗೂ ಇನ್ನಿತರೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳಲ್ಲಿ ತಾರತಮ್ಯ ನಡೆಸಲಾಗಿರುವ ಕುರಿತು ನಿಯಮಾನುಸಾರ ಪರೀಶಿಲಿಸಿ, ನ್ಯೂನತೆ ಕಂಡುಬಂದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ – 77	
ವಿಷಯ ಸಂಖ್ಯೆ:	ಸಿಂ.01(f)/(08/26)

–: ಟಿಪ್ಪಣಿ :–

ವಿಷಯಃ ಡಾ. ಜಿ.ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪ್ರಸ್ತಾವನೆ ಕುರಿತು.

****

ಡಾ. ಜಿ.ಕೆ. ಪ್ರೇಮ., ಮಾನ್ಯ ಸಿಂಡಿಕೇಟ್ ಸದಸ್ಯರ – ಇವರು ಪ್ರಸ್ತಾವನೆ ಕುರಿತು.

ವಿಶ್ವವಿದ್ಯಾಲಯದ ಆವರಣದಲ್ಲಿರುವ ವಿದ್ಯಾರ್ಥಿ/ನಿಯರ ವಸತಿನಿಲಯದ ಸಮಸ್ಯೆಗಳ ಕುರಿತು ಈಗಾಗಲೇ ಕ್ರಮಕೈಗೊಳ್ಳಲಾಗಿದೆ ಹಾಗೂ ಚಿತ್ರದುರ್ಗ ಪಿ.ಜಿ. ಸೆಂಟರ್‌ನ ಆವರಣದಲ್ಲಿರುವ ವಿದ್ಯಾರ್ಥಿ/ನಿಯರ ವಸತಿನಿಲಯದ ಸಮಸ್ಯೆಗಳ ಕುರಿತು ಅಗತ್ಯ ಕ್ರಮವಹಿಸುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ದೈಹಿಕ ಶಿಕ್ಷಣ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಪಿ.ಹೆಚ್.ಡಿ. ಪದವಿ ವಿಷಯವಾರು ರೋಸ್ಟರ್ ಪದ್ದತಿಯಂತೆ ಸೀಟು ಹಂಚಿಕೆ ಪಾಲನೆ ಕುರಿತ ಮಾಹಿತಿಯನ್ನು ಪಿ.ಹೆಚ್.ಡಿ. ವಿಭಾಗದಿಂದ ಸದರಿಯವರಿಗೆ ಕಳುಹಿಸುವಂತೆ ಕುಲಸಚಿವರು (ಆಡಳಿತ) ಇವರಿಗೆ ಮಾನ್ಯ ಕುಲಪತಿಗಳು ಸೂಚಿಸಿದರು

ಕುಲಸಚಿವರು

ಕುಲಪತಿಗಳು

ಮಾ.ಸ.ನಿ. ವಿಭಾಗ – 78	
ಅಧ್ಯಕ್ಷರ ಅಪ್ಪಣೆ ಮೇರೆಗೆ	
ವಿಷಯ ಸಂಖ್ಯೆ:	ಸಿಂ.02(p)/(08/26)

–: ಟಿಪ್ಪಣಿ :–

ವಿಷಯಃ **ವೈದ್ಯಕೀಯ ವೆಚ್ಚ ಮರುಭರಿಕೆ ಮಾಡುವ ಕುರಿತು.**

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 16 ಎಸ್ಎಂಆರ್ 2020, ದಿನಾಂಕ:05.09.2022
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:31.08.2026

****

ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಕರ್ನಾಟಕ ಸರ್ಕಾರಿ ನೌಕರರ ನಿಯಮಗಳು 1963ರನ್ವಯ ಸರ್ಕಾರಿ ನೌಕರರು ಸರ್ಕಾರದ ಮಾನ್ಯತೆ ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಮಾಡಿಸಿದ ವೈದ್ಯಕೀಯ ಚಿಕಿತ್ಸೆ ಸೌಲಭ್ಯ ಒದಗಿಸಲು ನೂತನ "ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ" (KASS) ಅನುಷ್ಠಾನಗೊಳಿಸಿದ್ದು, ಸದರಿ ಯೋಜನೆಯು ವಿಶ್ವವಿದ್ಯಾನಿಲಯಕ್ಕೆ ಒಳಪಡುವುದಿಲ್ಲ ಎಂದು ತಿಳಿಸಿರುತ್ತಾರೆ.

ಆದ್ದರಿಂದ, ಸದರಿ ಯೋಜನೆಯಡಿಯಲ್ಲಿ ಮರುಭರಿಕೆ ಮಾಡಲು ಅವಕಾಶವಿರುವ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ, ನಿಯಮಾನುಸಾರ ಮರುಭರಿಕೆ ಸೌಲಭ್ಯಗಳನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಖಾಯಂ ಅಧ್ಯಾಪಕ/ಅಧ್ಯಾಪಕೇತರ ನೌಕರರುಗಳಿಗೆ ಅಳವಡಿಸುವ ಬಗ್ಗೆ ದಿನಾಂಕ: 31.08.2026 ರಂದು ನಡೆಯುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ವಿಷಯ ಮಂಡಿಸಲಾಗಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಖಾಯಂ ಅಧ್ಯಾಪಕ/ಅಧ್ಯಾಪಕೇತರ ನೌಕರರುಗಳು ಹಾಗೂ ಅವರ ಅವಲಂಬಿತ ಸದಸ್ಯರಿಗೆ ಈ ಹಿಂದೆ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮ 1963ರ ಪ್ರಕಾರ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಮಾತ್ರ ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ನಿಯಮಾನುಸಾರ ಮರುಭರಿಕೆ ಸೌಲಭ್ಯಗಳನ್ನು ನೀಡಬೇಕೆಂದು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 79	
ಅಧ್ಯಕ್ಷರ ಅಪ್ಪಣೆ ಮೇರೆಗೆ	
ವಿಷಯ ಸಂಖ್ಯೆ:	ಸಿಂ.05(k)/(08/26)

–: ಟಿಪ್ಪಣಿ :–

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು "ಅಪ್ಯಾರಲ್ ರಿಟೇಲ್ ಟ್ರೈನಿಂಗ್ & ಜಾಬ್ ಸೊಲ್ಯೂಷನ್ಸ್ ಫೌಂಡೇಶನ್" (ARTJS Foundation) ಸಂಸ್ಥೆಯ ನಡುವೆ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಸಿ.ಎಸ್.ಆರ್ (CSR) ಯೋಜನೆಗಳನ್ನು ಅನುಷ್ಠಾನಗೊಳಿಸಲು MoU ಮಾಡಿಕೊಳ್ಳುವ ಕುರಿತು.

ಉಲ್ಲೇಖ: 1. ARTJS Foundation ಸಂಸ್ಥೆಯ ಪತ್ರ ದಿನಾಂಕ:28/08/2026.
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ: 28.08.2026.

****

ಅಪ್ಯಾರಲ್ ರಿಟೇಲ್ ಟ್ರೈನಿಂಗ್ & ಜಾಬ್ ಸೊಲ್ಯೂಷನ್ಸ್ ಫೌಂಡೇಶನ್" (ARTJS Foundation) ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ & ಸಿಇಒ ಅವರು ದಿನಾಂಕ: 28/08/2026 ರ ಪತ್ರದಲ್ಲಿ (ಮಿಂಚಂಚೆ ದಿನಾಂಕ: 17/08/2026), ತಮ್ಮ ಸಂಸ್ಥೆಯು ಕೇಂದ್ರ ಸರ್ಕಾರದ NSDC, MSDE, ಜವಳಿ ಸಚಿವಾಲಯ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, MSME, ಪಂಗಡಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, MANAS ಹಾಗೂ ವಿವಿಧ ಸಿ.ಎಸ್.ಆರ್ (CSR) ಯೋಜನೆಗಳಡಿ ಸುಮಾರು 3 ಲಕ್ಷಕ್ಕೂ ಹೆಚ್ಚು ನಿರುದ್ಯೋಗಿ ಯುವಕ–ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿದ ಅನುಭವ ಹೊಂದಿದ್ದು, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ಅದರ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳು/ಯುವಜನತೆಗೆ ತರಬೇತಿ ನೀಡಲು MoU ಮಾಡಿಕೊಳ್ಳಲು ವಿನಂತಿಸಿರುತ್ತಾರೆ.

ಸದರಿ ಪ್ರಸ್ತಾವನೆ ಸಂಬಂಧಿಸಿದಂತೆ, ARTJS Foundation ಸಂಸ್ಥೆಯು ಸಲ್ಲಿಸಿರುವ ಕರಡು ಒಪ್ಪಂದ (Draft MoU) ಹಾಗೂ ಷರತ್ತುಗಳನ್ನು ಪರಿಶೀಲಿಸಲು ವಿಶ್ವವಿದ್ಯಾನಿಲಯದ "MoU ಸಮಿತಿ" (MoU Committee) ಮುಂದೆ ಮಂಡಿಸುವುದು. ಸಮಿತಿಯು ನೀಡುವ ವರದಿ ಮತ್ತು ಶಿಫಾರಸುಗಳ ಆಧಾರದ ಮೇಲೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆದ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ ಹಿನ್ನೆಲೆಯಲ್ಲಿ, "ಅಪ್ಯಾರಲ್ ರಿಟೇಲ್ ಟ್ರೈನಿಂಗ್ & ಜಾಬ್ ಸೊಲ್ಯೂಷನ್ಸ್ ಫೌಂಡೇಶನ್" (ARTJS Foundation) ಸಂಸ್ಥೆಯೊಂದಿಗೆ ಕೌಶಲ್ಯಾಭಿವೃದ್ಧಿ ಯೋಜನೆಗಳಿಗಾಗಿ MoU ಮಾಡಿಕೊಳ್ಳುವ ಪ್ರಸ್ತಾವನೆಯನ್ನು 'MoU ಸಮಿತಿ'ಯ ಪರಿಶೀಲನೆಗೆ ಒಳಪಡಿಸಿ, ಸಮಿತಿಯ ಶಿಫಾರಸ್ಸಿನಂತೆ ಮುಂದುವರಿಯಲು ದಿನಾಂಕ:31/08/2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು "ಅಪ್ಯಾರಲ್ ರಿಟೇಲ್ ಟ್ರೈನಿಂಗ್ & ಜಾಬ್ ಸೊಲ್ಯೂಷನ್ಸ್ ಫೌಂಡೇಶನ್" (ARTJS Foundation) ಸಂಸ್ಥೆಯ ನಡುವೆ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಸಿ.ಎಸ್.ಆರ್ (CSR) ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ MoU (Memorandum of Understanding) ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಅಭಿವೃದ್ಧಿ ವಿಭಾಗ – 80	
ಅಧ್ಯಕ್ಷರ ಅಪ್ಪಣೆ ಮೇರೆಗೆ	
ವಿಷಯ ಸಂಖ್ಯೆ:	ಸಿಂ.05(l)/(08/26)

–: ಟಿಪ್ಪಣಿ :–

ವಿಷಯಃ **ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು "ಗ್ರಾಮ ವಿಕಾಸ" (GRAMA VIKAS) ಸಂಸ್ಥೆಯ ನಡುವೆ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಸಿ.ಎಸ್.ಆರ್ (CSR) ಯೋಜನೆಗಳನ್ನು ಅನುಷ್ಠಾನಗೊಳಿಸಲು MoU ಮಾಡಿಕೊಳ್ಳುವ ಕುರಿತು.**

ಉಲ್ಲೇಖ: 1. ಗ್ರಾಮ ವಿಕಾಸ ಸಂಸ್ಥೆಯ ಪತ್ರ ದಿನಾಂಕ:28.08.2026.
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:28.08.2026.

****

"ಗ್ರಾಮ ವಿಕಾಸ" ಸಂಸ್ಥೆಯ ಅಧ್ಯಕ್ಷರು ದಿನಾಂಕ: 28/08/2026 ರ ಪತ್ರದಲ್ಲಿ (ಮಿಂಚಂಚೆ ದಿನಾಂಕ: 17/08/2026), ತಮ್ಮ ಸಂಸ್ಥೆಯು ಕೇಂದ್ರ ಸರ್ಕಾರದ NSDC, MSDE, RDPR, ಪಂಗಡಗಳ ಕಲ್ಯಾಣ (Tribals Welfare), ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಿವಿಧ ಸಿ.ಎಸ್.ಆರ್ (CSR) ಯೋಜನೆಗಳಡಿ ಸುಮಾರು 2 ಲಕ್ಷಕ್ಕೂ ಹೆಚ್ಚು ನಿರುದ್ಯೋಗಿ ಯುವಕ–ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿದ ಅನುಭವ ಹೊಂದಿದ್ದು, ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ಅದರ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳು/ಯುವಜನತೆಗೆ ತರಬೇತಿ ನೀಡಲು MoU ಮಾಡಿಕೊಳ್ಳಲು ವಿನಂತಿಸಿರುತ್ತಾರೆ.

ಸದರಿ ಪ್ರಸ್ತಾವನೆ ಸಂಬಂಧಿಸಿದಂತೆ, ಗ್ರಾಮ ವಿಕಾಸ ಸಂಸ್ಥೆಯು ಸಲ್ಲಿಸಿರುವ ಕರಡು ಒಪ್ಪಂದ (Draft MoU) ಹಾಗೂ ಷರತ್ತುಗಳನ್ನು ಪರಿಶೀಲಿಸಲು ವಿಶ್ವವಿದ್ಯಾನಿಲಯದ "MoU ಸಮಿತಿ" (MoU Committee) ಮುಂದೆ ಮಂಡಿಸುವುದು.

ಸಮಿತಿಯು ನೀಡುವ ವರದಿ ಮತ್ತು ಶಿಫಾರಸುಗಳ ಆಧಾರದ ಮೇಲೆ ಮಾನ್ಯ ಕುಲಪತಿಗಳ ಅನುಮೋದನೆ ಪಡೆದ ನಂತರ ಮುಂದಿನ ಸೂಕ್ತ ಕ್ರಮ ಕೈಗೊಳ್ಳುವುದು.

ಈ ಹಿನ್ನೆಲೆಯಲ್ಲಿ, ಗ್ರಾಮ ವಿಕಾಸ (GRAMA VIKAS) ಸಂಸ್ಥೆಯೊಂದಿಗೆ ಕೌಶಲ್ಯಾಭಿವೃದ್ಧಿ ಯೋಜನೆಗಳಿಗಾಗಿ MoU ಮಾಡಿಕೊಳ್ಳುವ ಪ್ರಸ್ತಾವನೆಯನ್ನು 'MoU ಸಮಿತಿ'ಯ ಪರಿಶೀಲನೆಗೆ ಒಳಪಡಿಸಿ, ಸಮಿತಿಯ ಶಿಫಾರಸ್ಸಿನಂತೆ ಮುಂದುವರಿಯಲು ದಿನಾಂಕ:31/08/2026 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಮತ್ತು ಅನುಮೋದನೆಗೆ ಸಲ್ಲಿಸಲಾಗಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಮತ್ತು "ಗ್ರಾಮ ವಿಕಾಸ" (GRAMA VIKAS) ಸಂಸ್ಥೆಯ ನಡುವೆ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಸಿ.ಎಸ್.ಆರ್ (CSR) ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿಯಮಾನುಸಾರ MoU (Memorandum of Understanding) ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಪರೀಕ್ಷಾಂಗ ವಿಭಾಗ – 81	
ಅಧ್ಯಕ್ಷರ ಅಪ್ಪಣೆ ಮೇರೆಗೆ	
ವಿಷಯ ಸಂಖ್ಯೆ:	ಸಿಂ.04(h)/(08/26)

–: ಟಿಪ್ಪಣಿ :–

ವಿಷಯಃ ಪ್ರಸ್ತುತ ಪರೀಕ್ಷಾ ಪದ್ಧತಿಯಲ್ಲಿ ಅಗತ್ಯ ಬದಲಾವಣೆ ಮಾಡಿ, ಅನುತೀರ್ಣ ಪದವಿ ವಿದ್ಯಾರ್ಥಿಗಳಿಗೆ ಎಲ್ಲಾ ಸೆಮಿಸ್ಟರ್‌ನ ಬಾಕಿ ವಿಷಯಗಳ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶ ನೀಡುವ ಕುರಿತು.

ಉಲ್ಲೇಖ: 1. ವಿ.ವಿ. ಅಧಿಸೂಚನೆ ಪತ್ರ ಸಂಖ್ಯೆ:ದಾವಿ/ಪವಿ/ಲೆಪ–1/2024–25/2559 ದಿನಾಂಕ:15.11.2024.

2. ಅಧ್ಯಕ್ಷರು, ದಾವಣಗೆರೆ ವಿಶ್ವವಿದ್ಯಾನಿಲಯ, ವಾಣಿಜ್ಯ ಮತ್ತು ನಿರ್ವಾಹಣಾಶಾಸ್ತ್ರ ಅಧ್ಯಾಪಕರ ಸಂಘ, ದಾವಣಗೆರೆ – ಇವರ ಮನವಿ ಪತ್ರ.

3. ಡಾ. ಪ್ರಶಾಂತ್ ಎನ್ ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ – ಇವರ ಪತ್ರ ದಿನಾಂಕ:31.08.2026

****

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ ಮಟ್ಟದ ಪದವಿ ಪರೀಕ್ಷೆಗಳಲ್ಲಿ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಪ್ರತ್ಯೇಕವಾಗಿ ಏರ್ಪಡಿಲು ಅಧಿಸೂಚನೆ ಹೊರಡಿಸಲಾಗಿದೆ. ಅದರಂತೆ ಸಮ ಮತ್ತು ಬೆಸ ಸೆಮಿಸ್ಟರ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಪ್ರಸ್ತುತ ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಲಾ, ವಾಣಿಜ್ಯ, ವಿಜ್ಞಾನ ಮತ್ತು ನಿರ್ವಾಹಣಾಶಾಸ್ತ್ರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅನೇಕ ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣಗೊಂಡು ಕೆಲ ವಿಷಯಗಳನ್ನು ಬಾಕಿ ಉಳಿಸಿಕೊಂಡಿರುತ್ತಾರೆ ಇದರಿಂದಾಗಿ ವಿದ್ಯಾರ್ಥಿಗಳಿಗೆ ಪದವಿ ಮುಗಿಸಿಕೊಳ್ಳಲು ತೊಂದರೆಯಾಗುತ್ತಿದೆ. ಆದುದರಿಂದ ಪ್ರಸ್ತುತ ಇರುವ ಪರೀಕ್ಷಾ ಪದ್ಧತಿಯಲ್ಲಿ ಅಗತ್ಯ ಬದಲಾವಣೆ ಮಾಡಿ, ವಿದ್ಯಾರ್ಥಿಗಳು ತಮ್ಮ ನಿಯಮಿತ ಸೆಮಿಸ್ಟರ್ ಪರೀಕ್ಷೆಯ ಜೊತೆಗೆ ಹಿಂದಿನ ಸೆಮಿಸ್ಟರ್‌ಗಳಲ್ಲಿ ಬಾಕಿ ಉಳಿಸಿಕೊಂಡಿರುವ ಎಲ್ಲಾ ವಿಷಯಗಳ ಪರೀಕ್ಷೆಗಳಿಗೆ ಪ್ರತಿ ಸೆಮಿಸ್ಟರ್‌ನ ಪರೀಕ್ಷೆ ಸಮಯದಲ್ಲಿ ಹಾಜರಾಗಲು ಅವಕಾಶ ಕಲ್ಪಿಸುವ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಉಲ್ಲೇಖ (2) ಮತ್ತು (3)ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಪತ್ರಗಳು ಸ್ವೀಕೃತಗೊಂಡಿರುತ್ತವೆ. ಈ ವಿಷಯವನ್ನು ದಿನಾಂಕ:28.08.2026 ರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಆದುದರಿಂದ ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

:: ನಿರ್ಣಯ ::

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಿ, ಮುಂದಿನ ಕ್ರಮಕ್ಕೆಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸಭೆಯು ಸಮಿತಿಯನ್ನು ರಚಿಸಲು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

ಪ್ರಾಧಿಕಾರಗಳ ವಿಭಾಗ – 82	
ಅಧ್ಯಕ್ಷರ ಅಪ್ಪಣೆ ಮೇರೆಗೆ	
ವಿಷಯ ಸಂಖ್ಯೆ:	ಸಿಂ.05(l)/(08/26)

–: ಟಿಪ್ಪಣಿ :–

ವಿಷಯಃ ಡಾ. ಪ್ರಶಾಂತ ಎನ್.ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಪ್ರಸ್ತಾವನೆ ಕುರಿತು.

****

ಡಾ. ಪ್ರಶಾಂತ ಎನ್.ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:31.08.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಚರ್ಚೆಗೆ ಸಲ್ಲಿಸಲಾಗಿದೆ.

ಪದವಿ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಸರಿ ಮತ್ತು ಬೆಸ ಸೆಮಿಸ್ಟರ್‌ಗಳ ರಿಪೀಟರ್ ಪೇಪರ್‌ಗಳ ಪರೀಕ್ಷೆಗಳನ್ನು ಏರ್ಪಡಿಸುವ ಕುರಿತಂತೆ ಚರ್ಚಿಸಲಾಗಿ ಸಮಿತಿಯನ್ನು ರಚಿಸಿ, ಸಮಿತಿಯ ನಿರ್ಣಯದನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಪದವಿ ಕೋರ್ಸ್‌ಗಳಲ್ಲಿ ಲ್ಯಾಟರಲ್ ಎಂಟ್ರಿ ವಿದ್ಯಾರ್ಥಿಗಳಿಗೆ ರ್‍ಯಾಂಕ್ ಪಟ್ಟಿಯಲ್ಲಿ ಪರಿಗಣಿಸುವ ಕುರಿತಂತೆ ಚರ್ಚಿಸಲಾಗಿ ಕುಲಸಚಿವರು (ಪ) ಇವರು ರ್‍ಯಾಂಕ್ ನಿಯಮಾವಳಿಯಂತೆ ಕ್ರಮವಹಿಸಲಾಗುತ್ತಿದೆ ಎಂದು ಸಭೆಗೆ ವಿವರಿಸಿದರು.

ಕೊನೆಯಲ್ಲಿ ಕುಲಸಚಿವರ (ಆಡಳಿತ) ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು